ವಿಶ್ವಕನ್ನಡ ಸಮ್ಮೇಳನ-೨೦೧೧
ಬೆಳಗಾವಿ

# ಉಂಡಾಡಿ ಗುಂಡ

ಪರ್ವತವಾಣಿ

ವಿಶ್ವಕನ್ನಡ
ಸಮ್ಮೇಳನ
ಸಾಹಿತ್ಯಮಾಲೆ

# ಉಂಡಾಡಿ ಗುಂಡ

**ಪರ್ವತವಾಣಿ**

ಕರ್ನಾಟಕ ಸರ್ಕಾರ

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು – ೫೬೦ ೦೦೨

**HUNDADI GUNDA**: by **Paravathavani**, Published by **Manu Baligar,** Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮುದ್ರಿತ ವರ್ಷ : ೨೦೧೧
ಪ್ರತಿಗಳು : ೧೦೦೦
ಪುಟಗಳು : xii + ೯೦
ಬೆಲೆ : ರೂ. ೩೦.೦೦

ರಕ್ಷಾಪುಟ ವಿನ್ಯಾಸ : **ಕೆ. ಚಂದ್ರನಾಥ ಆಚಾರ್ಯ**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆ್ಯಡ್ಸ್**
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦ ೦೨೦ ದೂ : ೨೩೩೪೨೬೨೪



**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

## ಶುಭ ಸಂದೇಶ

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ **"ವಿಶ್ವ ಕನ್ನಡ ಸಮ್ಮೇಳನ"** ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ದಿನಾಂಕ ೨೪.೦೧.೨೦೧೧

**(ಬಿ.ಎಸ್. ಯಡಿಯೂರಪ್ಪ)**

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು – ೦೧

## ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೧.೨೦೧೧ **(ಗೋವಿಂದ ಎಂ. ಕಾರಜೋಳ)**



## ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

**(ರಮೇಶ್ ಬಿ.ಝುಳಕಿ)**
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

## ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ.

ಕನ್ನಡ ನಾಡಿನ ಮನೆಮನೆಗಳಲ್ಲಿ ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ!

**ಎಲ್.ಎಸ್. ಶೇಷಗಿರಿ ರಾವ್**
ಅಧ್ಯಕ್ಷ
ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ದಿನಾಂಕ ೧೬.೧೨.೨೦೧೦



## ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ. ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯ ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವ ಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ

ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

ದಿನಾಂಕ ೧೧.೦೧.೨೦೧೧

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ



# ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

**ಅಧ್ಯಕ್ಷರು**
ಪ್ರೊ. ಎಲ್.ಎಸ್. ಶೇಷಗಿರಿರಾವ್

**ಸದಸ್ಯರು**
ಡಾ॥ ಚಂದ್ರಶೇಖರ ಕಂಬಾರ
ಡಾ॥ ಎಂ.ಎಂ. ಕಲಬುರ್ಗಿ
ಡಾ॥ ದೊಡ್ಡರಂಗೇಗೌಡ
ಡಾ॥ ಅರವಿಂದ ಮಾಲಗತ್ತಿ
ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ
ಡಾ॥ ಪ್ರಧಾನ್ ಗುರುದತ್ತ
ಡಾ॥ ಹಂಪ ನಾಗರಾಜಯ್ಯ
ಡಾ॥ ಎಚ್.ಜೆ. ಲಕ್ಕಪ್ಪಗೌಡ
ಶ್ರೀಮತಿ ಸಾರಾ ಅಬೂಬಕರ್
ಡಾ॥ ಪಿ.ಎಸ್. ಶಂಕರ್

**ಸದಸ್ಯ ಕಾರ್ಯದರ್ಶಿ**
ಶ್ರೀ ಮನು ಬಳಿಗಾರ್, ಕ.ಆ.ಸೇ.
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

## ಪರಿವಿಡಿ


| | |
|---|---|
| ಶುಭ ಸಂದೇಶ | iii |
| ಚೆನ್ನುಡಿ | iv |
| ಎರಡು ನುಡಿ | v |
| ಅಧ್ಯಕ್ಷರ ಮಾತು | vi |
| ಪ್ರಕಾಶಕರ ಮಾತು | vii |
| ಆಯ್ಕೆ ಸಮಿತಿ | ix |
| ಉಂಡಾಡಿ ಗುಂಡ | ೧–೯೦ |




# ಉಂಡಾಡಿ ಗುಂಡ

## ಪಾತ್ರಗಳು

| | | |
|---|---|---|
| ಗೋವಿಂದರಾಯರು | ..... | ಶ್ರೀಮಂತರು |
| ಭಾಗೀರಥಿಬಾಯಿ | ..... | ಪತ್ನಿ–ಭಾರ್ಯೆ ! |
| ಗುಂಡ | ..... | ಮಗ–ಉಂಡಾಡಿ |
| ಪದ್ಮ | ..... | ಮಗಳು : ಕನ್ಯೆ |
| ಶಾಂತಿ | ..... | ಕಿರಿಮಗಳು : ಜಾಣೆ |
| ಸುಬ್ಬ<br>ರಂಗ್ಸಾಮಿ | ..... | ಗುಂಡನ ಗೆಳೆಯರು |
| ರಾಮು | ..... | ವರ |
| ಕಿಟ್ಟಿ | ..... | ಗೆಳೆಯ |
| ಪಂಕಜ | ..... | ಭಾಗೀರಥಿಬಾಯಿಯ ಸಂಬಂಧ |
| ತಿಮ್ಮ | ..... | ಆಳು |
| ಗಣೇಶರಾಯರು | ..... | ರಾಮನ ತಂದೆ |

ಸ್ಥಳ : ಮಲೆನಾಡಿನ ಒಂದು ಸಣ್ಣ ಊರು.

# ಉಡಾಂಡಿ ಗುಂಡ

## ದೃಶ್ಯ ೧

[ಸಂಜೆ ಕತ್ತಲಾಗುತ್ತಿದೆ. ಗೋವಿಂದರಾಯರ ಮನೆಯ ಹಾಲು, ಅರ್ಧರ್ಧ ಅಲಂಕೃತವಾಗಿದೆ. ರಾಯರು ಪ್ರವೇಶಿಸಿ, ಸುತ್ತ ನೋಡಿ, ಒಪ್ಪದೆ ತಲೆಯಾಡಿಸಿ..... ನೇಪಥ್ಯದ ಕಡೆ ತಿರುಗಿ]

ಗೋವು–ತಿಮ್ಮಾ.....ತಿಮ್ಮಾ.....ತಿಮ್ಮಾ..... ಇನ್ನು ಸ್ವಲ್ಪ ಗಟ್ಟಿಯಾಗಿ ಕೂಗಿದರೆ ಆ ತಿರುಪತಿ ತಿಮ್ಮನೇ ಇಳಿದು ಬಂದಾನು ಏಳು ಬೆಟ್ಟಗಳನ್ನೂ, ಈ ಹಾಳು ಕುಣಿಗಲು ತಿಮ್ಮ–ತಿಮ್ಮಾ–

ತಿಮ್ಮ–(ಪೊರಕೆ ಹಿಡಿದು ಬಂದು) ಸೊಮೇ ?

ಗೋವು–ಬಂದೆಯಾ ? ಕಿವಿ ಕೇಳಿಸಿತೇನೋ ಕೊನೆಗೂ ?

ತಿಮ್ಮ–ಈಗ ತಾನೇ ಕೇಳಿಸಿತು. ಅಂಗಳ ಗುಡಿಸ್ತಾ ಇದ್ದೆ–

ಗೋವು–ಸತ್ಯ ಹರಿಶ್ಚಂದ್ರ ನೀನು ! ಅಂಗಳ ಗುಡಿಸ್ತಾ ಇದ್ದಿ, ಸುಳ್ಳು ಹೇಳಲಿಲ್ಲ ಅಂತ ಸಾಕ್ಷಿಗೆ ಆ ಮಂಗಳಾಭರಣವನ್ನು ಕೈಯ್ಯಲ್ಲೇ ಹಿಡಿದುಕೊಂಡು ಬಂದಿದ್ದೀ, ಅಲ್ಲಾ ?..... ನಾನು ಏನೋ ನಿನಗೆ ಹೇಳಿದ್ದದ್ದು ?

(ಟೀಪಾಯಿನ ಮೇಲಿರುವ ಹೂ ಕುಂಡ ತೋರುತ್ತಾ) ಅದರೊಳಗೆ ಒಂದು ಒಳ್ಳೆ ಹೂವಿನ ಗೊಂಚಲು ತಂದಿಡು ಅಂತ ಹೇಳಿರಲಿಲ್ಲಾ ?

ತಿಮ್ಮ– ಏಳಿದ್ರೀ–

ಗೋವು–ಮತ್ತೆ ಯಾಕೆ ಇದಿನ್ನೂ ಹೀಗೇ ಇದೆ ?

ತಿಮ್ಮ–ನಾನಾಕ್ಲೇ ತಂದಿಕ್ಕಿದ್ದೆ, ಸೋಮೇ.... ಅಮ್ಮೋರಿದ್ದೊಂಡು ಈಕಲೇ ಬೇಡ ಕಣೋ, ದೂಳು ಬಿದ್ದಾತು, ಕಡೇಕೆ ತತ್ತಾ ಅಂದ್ರೋ.

ಗೋವು–ಓ....ನೀನು "ಕಡೇಕೆ ತತ್ತೀ" ? ಸರಿ....ಆಯಿತು.... ಆ ಮ್ಯಾಜಿಸ್ಟ್ರೇಟರ ಮನೆಯಿಂದ ವೀಣೆ–ತಂದು ಕೊಡಬೇಕು ಅನ್ನುವ ಬುದ್ಧಿ ತೊಗೊಂಡು ಹೋದವರಿಗಂತೂ ಇಲ್ಲ–ಇಸಗೊಂಡು ಬಾ ಅಂತ–

ತಿಮ್ಮ–ಏಳಿದ್ರೀ–

ಗೋವು–ತಂದೆಯಾ ?

ತಿಮ್ಮ–ಇಲ್ಲ. ತರಕ್ಕೋಗ್ತೀನಿ ಅಂದೆ–

ಗೋವು–"ಬೇಡಾ" ಅಂದರೂ ಅಮ್ಮಾವರು ?

ತಿಮ್ಮ–ಅಂದ್ರು. "ಈಕದಕ್ಯೇನ್ ಅವ್ಸರಾ ? ಅವ್ರೆಲ್ಲಾ ಬಂದು ಊಟಕ್ಕೆ ಕುಂತಾಗ ಓದ್ರಾತು" ಅಂತಂತಂತಂದ್ರು, ಸೊಮೇ.

ಗೋವು–ಸುಮ್ಮನಿರೋ, ತೊ ತೊ ತೊದಲಬೇಡ. ಅಂತಂತಂದರಂತೆ ಅಂತಂತಂದರು !....ಹೋಗಲಿ....ಅದು ಹೋಗಲಿ.... ಆ ಮೋಟಾರಾದರೂ ಸ್ಟೇಷನ್ನಿಗೆ ಹೋಯಿತೋ, ಅಥವಾ ಮನೆಗೆ ಬರುವವರೆಲ್ಲಾ ಬಂದು ಹಳಬರಾದ ಮೇಲೆ ಹೊರಡತ್ತೋ ರಥ ?.... ಏನಂದರೋ ಅಮ್ಮಾವರು ?

ತಿಮ್ಮ–ಅವರು ರಾಜೂಗೆ ಏಳಿದ್ರು.... ಆದ್ರಿನ್ನೂ ಗಾಡಿ ಓದಂಗಿಲ್ಲ.... ಸೆಡ್ನಾಗೇ ಐತೆ.

ಗೋವು–ಐತಾ ? ಇರಲಿ. ಬೆಚ್ಚಗಿರಲಿ. ಹೊರಗೆ ತಂಡಿ ಹವ. ಪಾಪ, ನೆಗಡಿ ಶೀತ ಆಗಿ ಗಂಟಲು ಕಟ್ಟೀತು !.... ಇನ್ನೇನೂ ಹೇಳಲಿಲ್ಲವೇನೋ ಅಮ್ಮಾವರು ?

ತಿಮ್ಮ–ಏನಿಲ್ಲ, ಸೋಮೇ.

ಗೋವು–ಸರಿ, ಹೋಗು.... ಇಲ್ಲಿ ನೋಡೋ, ಅವರು ಮನೆಗೆ ಬರುವ ಹೊತ್ತಿಗೆ.... ಆ ನಿನ್ನ ಕೈಯಲ್ಲಿರುವ ಚಾಮರ ಬೀಸಿಕೊಂಡು ಎದುರಿಗೆ ನಿಂತಿರಬೇಡ. ಹೋಗು.... ಅದಕ್ಕೂ ಹೋಗಿ ಅಮ್ಮಾವರನ್ನು ಕೇಳುತ್ತಾನೋ ಏನೋ ಅಪ್ಪಣೆಯನ್ನ! ಮಾತೆತ್ತಿದರೆ ಅಮ್ಮಾವರು, ಅಮ್ಮಾವರು, ಅಮ್ಮಾವರು– ಹೆಂಗಸರಿಂದಲೇ ಆಗಬೇಕು ಹುಕುಮ್ಮು, ಗಂಡಸರಿಗೆ....ನಾಚಿಕೆ ಕೆಟ್ಟವರು....ನಾಚಿಕೆ ಕೆಟ್ಟವರು !

ತಿಮ್ಮ–(ಹೋಗುತ್ತಿದ್ದವನು ಹಿಂತಿರುಗಿ) ಸೋಮೇ–

ಗೋವು–ಏನೋ ?

ತಿಮ್ಮ–ಮಾಪ್ಮಾಡ್ಬೇಕ್, ಸೋಮೇ....ನಾನಲ್ಲೇ ಓಗ್ತಿದ್ದೆ.... ನಿಮ್ಮಾತ್ ಕೇಳಿಸ್ಕೊಂಡೆ–

ಗೋವು–ಏನೋ ಅದು ?

ತಿಮ್ಮ–ನಾವೂ ಮತ್ತಿಗ ಮರ್ವಾದೇಕೇ, ಸೋಮೇ, ಒಡ್ಡಾಡೋದು. ತಮ್ಮಾತು ಕೇಳ್ದಿದ್ರೆ ಬೊಯ್ತೀರಾ ಬೊಯ್ತಿ ; ಅನ್ತೀರಾ ಅನ್ರಿ. ತಾವೆಜಮಾನ್ರು, ಗಂಡಸ್ರು, ನಮ್ಕೇನ್ ಅವ್ಮಾನ ಇಲ್ಲ. ಆದ್ರೆ ಅಮ್ಮೋರ ಮಾತ್ಕೇಳ್ದೆ, ಅವರ ಕೈಯಾಗೆ, ಎಂಗ್ಸರ ಕೈಯಾಗೆ, ನಾವು ಗಂಡ್ಸರು ಬೊಯ್ಸಿಕೋಬೋದಾ ಎಂಗೆ, ನೀವೇ ಏಳೀ–



ಗೋವು–ಅದಕ್ಕೋಸ್ಕರ ಅವರ ಮಾತು ಕೇಳುತ್ತಿ, ನನ್ನ ಮಾತು ಕೇಳೋಲ್ಲ, ಅಲ್ಲ ? ಹೋಗೋ ಆಚೆಗೆ, ಕುತರ್ಕ ಮುಂಡೇಗಂಡ !

(ತಾವೇ ಅವನಿಗಿಂತ ಮೊದಲೇ ಒಳಬಾಗಿಲಾಚೆ ಹೋಗಿ ಮರೆಯಾಗುವರು. ತಿಮ್ಮ ತಲೆಯಾಡಿಸುತ್ತ ಬೀದಿ ಕಡೆ ಹೋಗುವನು. ಶಾಂತಿ ಮೇಜೂ ಹೊದಿಕೆಗಳು, ಬಾಗಿಲ ತೆರೆಗಳು ಹೊತ್ತು ಪ್ರವೇಶಿಸುತ್ತಾ)

"ಬರುತಾನೆ, ಬರುತಾನೆ

ಬರುತಾನೆ, ಭಾವ, ಬರುತಾನೆ !

ಮೈಸೂರಿನಿಂದ ಬರುತಾನೆ

ಮಲ್ಲಿಗೆ ಹೂವು ತರುತಾನೆ

ಬರುತಾನೆ, ಈಗ, ಬರುತಾನೆ !

(ತಂದ ಬಟ್ಟೆ ರಾಶಿ ಕೆಳಗೆ ಚೆಲ್ಲಿ, ಕೆದರಿದ ಕೂದಲನ್ನು ಸರಿಪಡಿಸಿಕೊಳ್ಳುತ್ತಿರಲು, ಭಾಗೀರಥಿ ಪ್ರವೇಶಿಸಿ, ಅತ್ತಿತ್ತ ನೋಡಿ, ಅಸಮಾಧಾನ ಸೂಚಿಸಿ)

ಭಾಗೀ–ಲೇ, ಶಾಂತೀ, ಆ ಕುರ್ಚಿ ಎತ್ತಿಕೊಂಡು ಬಾರೇ ಇಲ್ಲಿ.

ಶಾಂತಿ–ಅಷ್ಟು ಭಾರ ಎತ್ತೊಕ್ಕಾಗೊಲ್ಲಮ್ಮ ನನ್ನ ಕೈಯಲ್ಲಿ.

ಭಾಗೀ–ಆಗುತ್ತೆ ನಿನ್ನ ಕೈಯಲ್ಲಿ (ತಾವೇ ತಂದಿಟ್ಟುಕೊಳ್ಳುತ್ತಾ) ಮೂರು ಹೊತ್ತು ಊಟ, ನಾಲ್ಕು ಹೊತ್ತು ತಿಂಡಿ ತಿನ್ನೋಕ್ಕಾಗುತ್ತೆ !

ಶಾಂತಿ–"ಬರುತಾನೆ ಭಾವ ಬರುತಾನೆ"–

ಭಾಗೀ–ಸಾಕು ನಿಲ್ಲಿಸೇ ನಿನ್ನ ಸಂಗೀತವನ್ನ! (ಕುರ್ಚಿಹತ್ತಿ, ಅಲ್ಲಿಂದ ಪಕ್ಕದ ಮೇಜೂ ಏರಿ ನಿಂತು) ಲೇ, ಅದೇನೆ ಆ ಬಟ್ಟೆಯನ್ನ ಹಾಗೆ ಸಾರಿಸುವ ಗುಡ್ಡೆಯ ಹಾಗೆ ತಿಪ್ಪೆ ಹಾಕಿದ್ದಿ? ಈ ಪಠ ತೆಗೆದುಕೊಡುವೆಯಂತೆ, ಬಾರೇ ಇಲ್ಲಿ.

ಶಾಂತಿ–(ಬಂದು ಪಠಗಳನ್ನು ಸರಿಸಿ) ಯಾವುದು ಕೊಡಲಮ್ಮಾ? ಲಕ್ಷ್ಮಿಯದೋ, ಸರಸ್ವತಿಯದೋ, ಹನುಮಂತನದೋ?

ಭಾಗೀ–ಯಾವುದಾದರೂ ಕೊಡೇ, ಹೊತ್ತಾಗಿ ಹೋಗುತ್ತಾ ಇದೆ.

ಶಾಂತಿ–(ಕೂತಂತೆಯೇ ಒಂದು ಪಠವೆತ್ತಿ ನೀಡಿ) ಉಂ.

ಭಾಗೀ–(ಹೇಗೆ ನಿಲುಕೀತು?) ಕತ್ತೆ. ನಿನ್ನ ಕೈಯಲ್ಲಾಗತ್ತೆ ಕೆಲಸ. ಎದ್ದುನಿಂತು ಮೆಟ್ಟಿಂಗಾಲು ಹಾಕಿಕೊಡೇ, ಕುಳ್ಳಿ.

ಶಾಂತಿ–"ಕುಳ್ಳಿ" ? ಯಾಕೋ? ನೀನು ಕುರ್ಚಿ ಮೇಜು, ಏಣಿ ಎಲ್ಲಾ ಹಾಕಿಕೊಂಡು ಆಕಾಶದಲ್ಲಿ ನಿಂತು, ನನ್ನನ್ನು ಕುಳ್ಳಿ ಅಂದುಬಿಡು! ಹುಟ್ಟಿದಾಗಲೇ ನಿನ್ನ ಹಾಗೇ ಎಲ್ಲರೂನೂ ಅಷ್ಟು ಎತ್ತರ, "ಉಂಂಂ" ಅಂತ ಇರೊಕ್ಕಾಗುತ್ತೇನೋ!

ಭಾಗೀ–ಏನೂ? ಏನಂದೀ? (ಕೆಳಗಿಳಿಯುತ್ತಿರಲು)

ಶಾಂತಿ–(ಪಠ ಎತ್ತಿ ಹಾಕಿ ತಪ್ಪಿಸಿಕೊಂಡು ಓಡುತ್ತಾ) ಅಕ್ಕಾ, ಅಣ್ಣಾ, ಅಪ್ಪಾ!

ಭಾಗೀ–ಕತ್ತೇ, ನಿನಗೇ–(ಅಟ್ಟ ಹೋಗುವರು, ಈ ಬಾಗಿಲಿನಿಂದ ಆ ಬಾಗಿಲು, ಆ ಬಾಗಿಲಿನಿಂದ ಈ ಬಾಗಿಲು–ಓಡಾಡುವರು–ಶಾಂತಿ, ಈ ಸಾರಿ, ಓಡದೆ, ಬಟ್ಟೆ ರಾಶಿಯಲ್ಲಿ ಅವಿತು ಕೂಡುಳು)ಎಲ್ಲಿ?.....ಎಲ್ಲಿ?.... (ಪದ್ಮ, ಪಂಕಜ ಬಾಗಿಲಲ್ಲಿ ಕಾಣಿಸಿಕೊಳ್ಳುವರು) ಎಲ್ಲಿ, ಎಲ್ಲವಳು ?

ಪಂಕಚ–ಯಾರು ?

ಪದ್ಮ–ಯಾರಮ್ಮಾ ?

ಭಾಗೀ–ಶಾಂತೀ–(ಏದುಸಿರು ಬಿಡುತ್ತಾ–)

ಪದ್ಮ–ಯಾಕಮ್ಮಾ?

ಭಾಗೀ–(ಇಬ್ಬರನ್ನೂ ತಳ್ಳಿ ಓಡುತ್ತಾ) ಅವಳಿಗೆ.....ಅವಳಿಗೆ....

ಗೋವು–(ಕಾಣಿಸಿಕೊಂಡು) ಏನ್ರೇ ಅದು ಗಲಾಟೆ? ಏನೇ ಅದು ಪದ್ಮಾ?

ಪದ್ಮ–ನನಗೆ ಗೊತ್ತಿಲ್ಲ, ಅಪ್ಪಾ.

ಪಂಕಜ–ನಾವೀಗ ತಾನೇ ಬಂದೆವು.

ಶಾಂತಿ–(ತೆರೆ ಮರೆಯಿಂದ ಏಳುತ್ತಾ) ಏನೂ ಇಲ್ಲಃಪ್ಪಾ–

ಪದ್ಮ–ಅಯ್ಯೋ!

ಪಂಕಜ–ಲೇ!

ಗೋವು–ಅಲ್ಲಿ ಏನು ಮಾಡುತ್ತಿದ್ದೆಯೇ?

ಶಾಂತಿ–ಏನಿಲ್ಲಪ್ಪಾ, ನಾನೂ ಅಮ್ಮ ಕಣ್ಣಾಮುಚ್ಚಾಲೆ ಆಡುತ್ತಿದ್ದೆವು–

ಭಾಗೀ–(ಪ್ರವೇಶಿಸಿ) ಇಲ್ಲೇ ಇದ್ದೀಯಾ, ಕತ್ತೇ...(ಕೈ ಎತ್ತಿ ನುಗ್ಗಿಬರಲು)

ಶಾಂತಿ–ಅಪ್ಪಾ, ಅಕ್ಕಾ, ಪಂಕಜಾ... (ತಂದೆಯ ಬೆನ್ನ ಹಿಂದೆ ಸೇರುವಳು)

ಭಾಗೀ–ಪಿಶಾಚೀ, ನಿನ್ನ (ಶಾಂತಿಯನ್ನು ಹಿಡಿದೆಳೆದು ಬಾರಿಸಬೇಕು–)

ಗೋವು–(ಬಿಡಿಸಿ) ಲೇ, ಲೇ, ತಡಿಯೇ, ತಡಿಯೇ, ಯಾಕೇ?



ಭಾಗೀ–(ಶಾಂತಿಯ ಕಿವಿ ಹಿಂಡುತ್ತಾ) ಏನಂದಿ? ಅನ್ನುತ್ತೀಯಾ ತಿರುಗೀ?

ಶಾಂತಿ–ಅಯ್ಯೋವ್, ಹೋಯಿತೂಊ–

ಗೋವು–ಲೇ, ಲೇ, ಏನೇ ಇದು, ಬಿಡೇ.... ಆ ಚಿಕ್ಕ ಹುಡುಗಿಯ ಮೇಲೆ... ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಬಂದು ಬಿದ್ದ ಹಾಗೆ–ಬೀಳುತ್ತಿದ್ದೀಯಲ್ಲೆ!

ಭಾಗೀ–ಹೌದು ಹೌದು, ಬ್ರಹ್ಮಾಸ್ತ್ರ, ನಾರಾಯಣಾಸ್ತ್ರ ಚಿಕ್ಕ ಹುಡುಗಿ, ಚಿಕ್ಕ ಹುಡುಗಿ ಅನ್ನುತ್ತಿರಿ, ಅವಳು ಆಡುವ ಮಾತುಗಳು ನಿಮಗೆ ಗೊತ್ತಾಗುತ್ತೆ ! ಮುದ್ದು ಮಾಡಿ ಮಾಡಿ ಹೀಗೆ ಬೆಳೆಸಿಯೇ ಇಷ್ಟು ಹೆಚ್ಚಿಕೊಂಡಿರುವುದವಳು.

ಶಾಂತಿ–ಏನೋ ಹೆಚ್ಚಿಕೊಂಡಿರುವುದು, ಮಹಾ! (ಕಿವಿ ಮುಟ್ಟಿಕೊಂಡ) ಆ ಹಾ ಹಾ ಹಾ ಹಾ... (ನೋವು) !

ಗೋವು–ಏನು ಮಾಡಿದೆಯೇ ನೀನು? (ಪದ್ಮನಿಗೆ) ಏನು ಅಂದಳೇ ಇವಳು?

ಶಾಂತಿ–ಅಕ್ಕನಿಗೆ ಗೊತ್ತಿಲ್ಲಪ್ಪಾ. ಅವಳಿರಲಿಲ್ಲ ಆಗ.....ನಾನು ಹೇಳಲೇನಮ್ಮಾ?

ಭಾಗೀ–ಬೇಡ, ಬೇಡ. ಏಟು ತಿನ್ನುತ್ತೀ ನೀನು !

ಶಾಂತಿ–ಯಾಕೋ ಏಟು? ಕಿವಿ ಯಾಕೆ ಕುಯ್ ಅನ್ನಿಸಿದ್ದು ಮತ್ತೆ? ನಾನು ಹೇಳಿಯೇ ಹೇಳುತ್ತೀನಿ. ಅಪ್ಪ, ಅಮ್ಮ ಆ ಕುರ್ಚಿಯ ಮೇಲೆ ಹತ್ತಿ–

ಭಾಗೀ–ಬೇಡಾ–

ಶಾಂತಿ–ಅಲ್ಲಿಂದ ಆ ಮೇಜುನೂ ಹತ್ತಿ ನಿಂತುಕೊಂಡು–

ಭಾಗೀ–ಲೇಯ್–

ಶಾಂತಿ–ಆ ಪಠ ತೆಗೆದುಕೊಂಡು ಅಂದಳು. ಕೊಟ್ಟೆ. ನಿಲುಕಲಿಲ್ಲ. ತನಗೆ ಮೈ ಬಗ್ಗಿಸಿ ತೊಗೊಳ್ಳೊಕ್ಕೆ ಆಗದೆ, ನನ್ನನ್ನು "ಕುಳ್ಳಿ" ಅಂದಳು–ಮತ್ತೆ–

ಭಾಗೀ–ಶಾಂತೀ, ನಿನಗೇನೋ ಗ್ರಹಚಾರ ಕಾದಿದೆ.

ಶಾಂತಿ–ಯಾಕಮ್ಮಾ, ಅಪ್ಪ ಕೇಳಿದರೆ ಹೇಳಬೇಡವೇನಮ್ಮಾ?

ಗೋವು–ಹುಂ? ಹುಂ? ಹೇಳು. ಆಮೇಲೆ?

ಭಾಗೀ–ಕೇಳಿ. ಕೇಳಿ. ಎಲ್ಲರೂ ಕೇಳಿ ಸಂತೋಷಪಡಿ, (ಒಳಗೆ ಹೋಗಲು ತಿರುಗುವರು)

ಗೋವು–ತಡಿಯೇ, ತಡಿಯೇ–

ಭಾಗೀ–ಏನೂ ಬೇಕಿಲ್ಲ. (ಮರೆಯಾಗುವರು)

ಗೋವು–ತ್ಸು ತ್ಸು...(ಶಾಂತಿಗೆ) ಏನಂದಿಯೇ ನೀನು?

ಶಾಂತಿ–ಏನೂ ಇಲ್ಲಪ್ಪಾ, "ಹುಟ್ಟಿದಾಗಲೇ ನಿನ್ನ ಹಾಗೇ ಎಲ್ಲರೂ ಅಷ್ಟು

ಎತ್ತರ ಉಂಂಂ ಅಂತ ಇರೊಕ್ಕಾಗುತ್ತಾ?" ಅಂದೆ, ಅಷ್ಟೇಪ್ಪಾ. ಇನ್ನೇನೂ ಅನ್ನಲಿಲ್ಲ. (ಎಲ್ಲರೂ ನಗುತ್ತಿರಲು)

ಭಾಗೀ–(ಕಾಣಿಸಿಕೊಂಡು) ನಗಿ, ನಗಿ....ಚೆನ್ನಾಗಿ ನಗಿ....ಹುಡುಗರಿಗೆ ಒಳ್ಳೆಯ ಪಾಠ.

ಪದ್ಮ–ಲೇ, ಕತ್ತೆ, ಬಾರೇ ಇಲ್ಲಿ, ದೊಡ್ಡವರನ್ನ ಹಾಗೆಲ್ಲಾ ಅನ್ನುತ್ತಾರೇನೇ?

ಪಂಕಜ–ತಪ್ಪಾಯಿತು ಅಂತ ಹೇಳು ಅತ್ತೇಗೆ...

ಗೋವು–ಲೇ, ಶಾಂತೀ (ಸುಳ್ಳು ಕೋಪದಿಂದ) ಇಲ್ಲಿ ಬಾರೇ ಇಲ್ಲಿ...ಘಟಿಂಗೀ....ಇನ್ನೊಂದು ಸರ್ತಿ ಅಮ್ಮನ್ನ ಹೀಗೇನಾದರೂ ಅಂದು ನೋಡು, ನಾನು ಏನು ಮಾಡುತ್ತೀನಿ ಗೊತ್ತೇನೂ? ಆಂ? ಊಂ !!

ಶಾಂತಿ–(ಕುತ್ತಿಗೆ ಕುಲುಕುತ್ತಾ) ಆ ಹಾ ಹಾ ಹಾ ಹಾ ಹ, ನೀನು? ನೀನು ಮಾತ್ರ ಅನ್ನಬಹುದೇನೋ, ಅಪ್ಪಣ್ಣಾ... ನೋಡೇ, ಪದ್ದಕ್ಕಾ, ನಿನ್ನೆ ರಾತ್ರಿ, ಅಪ್ಪ ಮಂಚದ ಮೇಲೆ ಕೂತಿದ್ದರು–

ಭಾಗೀ–ಅಯ್ಯೊಯ್ಯೋ–

ಗೋವು–ಲೇಯ್! ಅಹೆಮ್ !

ಶಾಂತಿ–ಅಮ್ಮ ಅಡಿಕೆ ಎಲೆ ತಟ್ಟೆ ತೊಗೊಂಡು ಬಂದಳು.

ಭಾಗೀ–ಶಾಂತೀ–

ಶಾಂತಿ–ಹೊಸಲು ಹತ್ತಿರ ನಿಂತುಕೊಂಡಳು.

ಗೋವು–ಶಾಂತೀೀೀ–

ಶಾಂತಿ–ಅವರೇನಂದರು ಗೊತ್ತಾ?

ಭಾಗೀ–ನಿನಗೆ....ನಿನಗೆ....ನಿನಗೆ...(ನುಗ್ಗುವರು)

ಶಾಂತಿ–(ತಡೆದರೆ? ಅವಸರದಿಂದ ಗಟ್ಟಿಯಾಗಿ) "ಬಾಗಿಲು ಭರ್ತಿನಿಂತಿದ್ದೀಯಲ್ಲೇ, ಭಾಗೀರಥಿ" ಅಂದರು....ಅಕ್ಕಾ, ಅಣ್ಣಾ–(ಓಡಿ ಹೋಗುವಳು. ಇತರರು ನಗುವರು)

ಭಾಗೀ–ನಗಿ. ನಗಿ. ಸಂತೋಷಪಡಿ. ನನಗೆ ಅನುಮಾನವಾದರೆ ನಿಮಗೆಲ್ಲಾ ಸಂತೋಷ. ನಗಿ. (ಪದ್ಮ ಪಂಕಜರಿಗೆ) ಹೋಗ್ರೇ ಒಳಗೆ!

ಪದ್ಮ–ನಾವೇನೂ ಅನ್ನಲಿಲ್ಲಮ್ಮಾ.

ಭಾಗೀ–ಯಾಕೆ, ಅನ್ನಿ. ನೀವೂ ಅನ್ನಿ. ಅದೊಂದೇ ನನ್ನ ಬಾಗ್ಯಕ್ಕೆ ಬಾಕಿ. (ಪದ್ಮ ಪಂಕಜ ನಿಷ್ಕ್ರಮಿಸುವರು. ಗಂಡನ ಕಡೆ ತಿರುಗಿ) ಇನ್ನು ಮೇಲೆ ನಾನು ಒಂದು ಊಟ ಮಾಡಿದರೆ ಕೇಳಿ, ಒಂದು ತಿಂಡಿ ತಿಂದರೆ ಕೇಳಿ, (ಸೆರಗು



ಕಣ್ಣಿಗೆ ಹಚ್ಚಿ ಒಳಗಡೆಗೆ ಹೊರಡಲು)

ಗೋವು–ಅಯ್ಯಯ್ಯೋ, ತಡಿಯೇ....ಏನೇ ಇದು? ಬುದ್ಧಿಯಿಲ್ಲದ ಹುಡುಗಿ ಏನೋ ಅಂದಳು ಅಂದರೆ, ಉಪವಾಸ ಮಾಡುವುದೇನೇ? ಅಲ್ಲದೆ, ಊಟ ತಿಂಡಿಗೆಲ್ಲಾ ಉದೊಕ್ಕಾಗುತ್ತೇನೇ? ಅದರಲ್ಲೂ ಈಗಿನ ಊಟ ! ಬಾ, ಬಾ, ಬಾ, ಇವೆಲ್ಲಾ ಈ ಸಪ್ಪೆ ಸಂಸಾರದಲ್ಲಿ ಉಪ್ಪಿನಕಾಯಿದ್ದ ಹಾಗೆ ಕಣೇ....

ಭಾಗೀ–ಹೌದು, ಹೌದು, ಉಪ್ಪಿನಕಾಯಿ, ಚಟ್ನಿಪುಡಿ. ನಾನೂ ಕೋಟಿ ಸರ್ತಿ ನಾಲಿಗೆ ಹಿರಿದುಕೊಂಡಿದ್ದೇನೆ–"ಚಿಕ್ಕ ಹುಡುಗರ ಮುಂದೆ ಚಕ್ಕಂದ ಬೇಡಿ" ಅಂತ; ನಿನಗೆ ಊರು ಭಾವಿ ಮುಂದೆಯೇ ಆಗಬೇಕು, ಉರುಟಣೆ ಈಗ ಹೋಗಿ ಅವಳು ಎಲ್ಲರಿಗೂ ಹೇಳಿಬಿಟ್ಟು ಬಿಡಲಿ. ಅವಮಾನ.

ಗೋವು–ಯಾಕೆ? ಯಾಕೇ ಅವಮಾನ? ಏನೇ ಈವಾಗಾಗಿದ್ದು ಏನೋ ಗಂಡ ಹೆಂಡತಿ ಷಷ್ಟಿಪೂರ್ತಿ ಸಮೀಪಿಸುತ್ತಿದ್ದರೂ ಚಕ್ರವಾಕ ಪಕ್ಷಿಗಳ ಹಾಗೆ ಅನ್ಯೋನ್ಯದಿಂದಿದ್ದಾರೆ ಅಂದುಕೊಂಡಾರು! ಅಂದುಕೊಳ್ಳಲಿ ಬಿಡೇ ಬೆಕ್ಕು ಬಾವಲಿಗಳ ಹಾಗೆ ಮೂರು ಹೊತ್ತೂ ಬಡಿದಾಡುತ್ತಿರುತ್ತಾರೆ ಅನ್ನಿಸಿಕೊಳ್ಳುವುದಕ್ಕಿಂತ ಏನೋ ಕೇಡಲ್ಲವಲ್ಲ?

ಭಾಗೀ–ಸರಿ, ನಿಮ್ಮ ಮುಂದೆ ಹೇಳಿಕೊಳ್ಳುವುದೂ ಆ ಗೋಡೆಯ ಮುಂದೆ ಹೇಳಿಕೊಳ್ಳುವುದೂ ಎರಡೂ ಒಂದೇ. ಸುಂಕದವನ ಮುಂದೆ ಸುಖ ದುಃಖ ಹೇಳಿಕೊಂಡ ಹಾಗೆ. ಈಗೇನು ನೀವಾದರೂ ನನಗಿಷ್ಟು ಸಹಾಯ ಮಾಡುತ್ತೀರೋ, ಇಲ್ಲಾ ಚಕ್ರವಾಕ ಪಕ್ಷಿ, ಬೆಕ್ಕು, ಬಾವಲಿ ಅಂತ.... ನಿಮ್ಮ ಮುದ್ದು ಮಗಳ ಪ್ರತಾಪಕ್ಕೆ ಹಿಗ್ಗುತ್ತಾ ನಿಂತಿರುತ್ತೀರೋ?

ಗೋವು–"ಮುದ್ದು ಮಗಳ ಪ್ರತಾಪ"? ಮುದ್ದು ಹೆಂಡತಿಯ ಪ್ರಲಾಪ ಅನ್ನೇ!

ಭಾಗೀ–ಬೇಡೀ, ಬೇಡೀ, ತಿರುಗಿ ನೀವು–

ಗೋವು–ಹೋಗಲಿ, ಈಗೇನಾಗಬೇಕು, ಹೇಳೇ.

ಭಾಗೀ–ಏನು ಆಗಿದೆ ಹೇಳಿ, ಆಗಬೇಕಾದ್ದು ಹೇಳೊಕ್ಕೆ? (ಸುತ್ತ ಕೈ ಬೀಸುತ್ತಾ) ನೋಡಿ, ಎಲ್ಲಾ ಹೇಗಿದೆ. ತಿಪ್ಪೆ ಗುಂಡಿ. ಆ ಬರುವ ಅಳಿಯನ ಭಾಗ್ಯವೇ ಭಾಗ್ಯ.

ಗೋವು–ಅದಕ್ಕೆ ನನ್ನನ್ನು ಏನು ಮಾಡು ಅನ್ನುತ್ತೀ? ನಾನು ಆಗಲೇ ಬಂದೆ. ನೋಡಿದೆ. ತಿಮ್ಮನ್ನ ಕರೆದು ಕೇಳಿದ್ರೆ, ಎಲ್ಲದಕ್ಕೂ ತಾವು "ಆಮೇಲೆ" "ಆ ಮೇಲೆ" ಅಂತ ಅಪ್ಪಣೆ ಕೊಡಿಸಿದಿರಂತೆ ! ಕೊಡಿಸಿ, ಕುರುಕ್ಷೇತ್ರವನ್ನು

ಜ್ಞಾಪಿಸಿಕೊಂಡು, ಮಗಳ ಕಿವಿ ಕ್ಷೇತ್ರದ ಮೇಲೆ ನಿನ್ನ ಹಸ್ತಾಸ್ತ್ರವನ್ನ ಪ್ರಯೋಗಿಸುತ್ತಾ ನಿಂತರೆ, ನಾನು ಏನು ಮಾಡುವುದೇ?

ಭಾಗೀ–ಸಾಕು ಸುಮ್ಮನಿರಿ ನೀವು. ಅದೇ.

ಗೋವು–ನಾನು ಸುಮ್ಮನಿರುತ್ತೇನೆಯೇ... ಆ ಕಾರು ಇನ್ನೂ ಸ್ಟೇಷನ್ನಿಗೆ ಹೋಗಿಲ್ಲವಂತೆ.

ಭಾಗೀ–ಏನು? ಕಾರಿನ್ನೂ ಸ್ಟೇಷನ್ನಿಗೆ ಹೋಗಿಲ್ಲವೇ?

ಗೋವು–ಇಲ್ಲ. ಅದು ಷಡ್ಡಿನಲ್ಲಿ ಸುಮ್ಮನಿದೆಯಂತೆ.

ಭಾಗೀ–ನಾನಾಗಲೇ ರಾಜೂಗೆ ಹೇಳಿದ್ದೆನಲ್ಲಾ!?

ಗೋವು–ಅವನೂ ಎಲ್ಲೋ ಸುಮ್ಮನಿದ್ದಾನು !

ಭಾಗೀ–ಅಯ್ಯೋ, ಎಷ್ಟು ಹೊತ್ತಾಗಿ ಹೋಯಿತು! ಆವರು ಅಲ್ಲಿ ಬಂದು, ಸ್ಟೇಷನ್ನಿನಲ್ಲಿ, ಪಾಪ–

ಗೋವು–ಅವರೂ ಸುಮ್ಮನಿರುತ್ತಾರೆ, ಇಷ್ಟಕ್ಕೂ ನನಗೆ ಯಾಕೆ? ನಾನು ಸುಮ್ಮನಿರಬೇಕಾದವನು ತಾನೇ? (ಹೋಗಿ ಆರಾಮವಾಗಿ ಕೂಡುವರು.)

ಭಾಗೀ–ಅಯ್ಯೋ, ತಪ್ಪಾಯಿತೂಂದ್ರೇ, ತಪ್ಪಾಯಿತು ನಾನು ಮಾತಾಡಿದ್ದೇ ತಪ್ಪಾಯಿತಲ್ಲಾ! ತಿಮ್ಮಾ–

ತಿಮ್ಮ–(ತಡಮಾಡದೆ ಬಂದು) ಅಮ್ಮಾ?

(ರಾಯರು ತಿಮ್ಮ ಒಡನೆ ಬಂದುದನ್ನು ಕಂಡು ತಲೆದೂಗುವರು)

ಭಾಗೀ–ರಾಜು ಎಲ್ಲೋ?

ತಿಮ್ಮ–ಮೋಟಾರು ಕಿಳೀನು ಮಾಡುತ್ತಾ ಔನ್ರಮ್ಮಾ..

ಗೋವು–ಅವನು ಕಿಳೀನು ಮಾಡಿ, ಗಾಡಿ ರೆಡಿಯಾಗಿ ಮೆರವಣಿಗೆಗೆ ಹೊರಡುವ ಹೊತ್ತಿಗೆ, ಅಳಿಯನಾಗೊಕ್ಕೆ ಬರುತ್ತಿರುವವನು ಅಪ್ಪನಾಗಿ ಕೂತಿರುತ್ತಾನೆ!

ಭಾಗೀ–ಆ ಶನಿಯನ್ನು ಹೋಗು ಅನ್ನೋ ಮೊದಲು–ಕಾಣದ ಊರು, ಅಲ್ಲಿ ಬಂದು ಅವರು–

ಗೋವು–ಅದಕ್ಕೇ ನಾನು ಹೇಳಿದೆ, ನಾನೇ ಹೋಗುತ್ತೇನೆಯೇ ಅಂತ–

ಭಾಗೀ–ಅಂದಿರಿ, ಇವಿಷ್ಟನ್ನೂ ನನ್ನೊಬ್ಬಳ ಮೇಲೇ ಹಾಕಿ ಹೋದರೆ ಹೇಗೆ ಅಂತ ನಾನು ಬೇಡ ಅಂದೆ... ಅಂದ ಹಾಗೆ ಗುಂಡ ಎಲ್ಲಿ? ಗುಂಡಾ, ಗುಂಡಾ–

ಗೋವು–ಅವನೆಲ್ಲಿರುತ್ತಾನೆಯೇ ಸುಪುತ್ರ? ಕವಿಕುಲತಿಲಕ! ಮಧ್ಯಾಹ್ನ ಮನೆಯಿಂದ ಹೋದ, ಪರೀಕ್ಷೆಗೆ ಓದಿಕೊಳ್ಳುತ್ತೇನೆ ಅಂತ. ಓದಿಕೊಳ್ಳುತ್ತಲೇ



ಇದ್ದಾನೆ ಮೂರು ವರ್ಷಗಳಿಂದ, ಇವನೊಬ್ಬ, ಆ ಶಾಸ್ತ್ರಿ, ಆ ಅಯ್ಯಂಗಾರಿ....ಸರಿಯಾಗಿದ್ದಾರೆ ಮೂರು ಜನವೂ, ಉಂಡಾಡಿಗಳು !

(ಪದ್ಮ ಪ್ರವೇಶಿಸಿ ಬೇರೊಂದು ಕೋಣೆಗೆ ಹೋಗುತ್ತಿರಲು)

ಭಾಗೀ–ಪದ್ಮಾ, ಗುಂಡ ಕಾಫೀಗೂ ಬರಲಿಲ್ಲವೇನೇ?

ಪದ್ಮ–ಇಲ್ಲಮ್ಮಾ...ಓದಿಕೊಳ್ಳೊಕ್ಕೆ ಹೋದ ಮಧ್ಯಾಹ್ನವೇ (ಮರೆಯಾಗುವಳು)

ಗೋವು–ಯಾಕೆ ಯೋಚನೆ ಮಾಡುತ್ತೀಯೇ ನೀನು? ನಿನ್ನ ಮಗ ತನ್ನ ಪಾಲಿನ ಕಾಫಿ ಕುಡಿಯದೆ ಬಿಡೊಲ್ಲ. ಯಾವುದೋ ಮಾಯದಲ್ಲಿ ಬೆಕ್ಕಿನ ಹಾಗೆ ಬಂದು ಬಸಿದುಕೊಂಡು ಹೋಗುತ್ತಾನೆ, ಭಯಪಡಬೇಡ.

ಭಾಗೀ–ಅಯ್ಯ, ಅದೇನು ಅವನು ಅಂದರೆ ನಿಮಗೆ ಅಷ್ಟೊಂದು ಇದು ಅಂತ? ಮಾಮಲೆದಾರನಾಗಬೇಕು, ಮಾಮಲೆದಾರನಾಗಬೇಕು ಅಂತ ಬಾಯಿಲಿ ಮಾತ್ರ ಅನ್ನುತ್ತಿರುತ್ತೀರಿ, ಹೀಗೆ ಮಾತು ಮಾತಿಗೂ ಮೂತಿ ತಿವಿಯುತ್ತೀರಿ?

ಗೋವು–ಏನು? (ಎದ್ದು ಪತ್ನಿಯನ್ನು ಸಮೀಪಿಸುತ್ತಾ) ಮಾಮಲೆದಾರ್ರು? ಇವನು? ಆದ !...ಅಲ್ಲವೇ, ನಿನಗೇನು ಹುಚ್ಚುಗಿಚ್ಚು ಹಿಡಿದು ಹೋಯಿತೇನೇ? ಇವನು ಈ ಒಂದೊಂದು ಪರೀಕ್ಷೆಗೂ ಹೀಗೆ ಮೂರು ಮೂರು ವರ್ಷ ತೊಗೊಳ್ಳುತ್ತಾ ಬಂದರೆ, ಎಂ.ಎ. ಪ್ಯಾಸ್ ಮಾಡುವ ಹೊತ್ತಿಗೆ ಪೆನ್ಷನ್ನಿಗೇ ವಯಸ್ಸಾಗಿರುತ್ತೆ, ಇನ್ನು ಕೆಲಸಕ್ಕೆ ಸೇರುವುದು ಯಾವಾಗ? ಎಲ್ಲಿಂದ?

ಭಾಗೀ–ಸಾರಿ, ನಿಮ್ಮ ಮಾತಿಗಂತೂ...ಅವನಾದರೂ ಇದ್ದಿದ್ದರೆ ಸ್ಟೇಷನ್ನಿಗೆ ಹೋಗಿ ಬಾಪ್ಪಾ ಅನ್ನಬಹುದಾಗಿತ್ತು.

ಗೋವು–ಆಂ? ಏನು? ಏನೇ ನೀನು ಅಂದಿದ್ದು? ಅವನ್ನೇ ಗುಂಡನ್ನೇ? ಸ್ಟೇಷನ್ನಿಗೇ? ಲಕ್ಷಣವಾಯಿತು. ಅಲ್ಲವೇ ಈಗ ಅವರು ಹಾಯ್ಯಾಗಿ ಬಂದು ಮನೆ ತಲಪುತ್ತಾರಲ್ಲಾ ಅದಾಗದೇನೋ ನಿನಗೆ? ಈ ಕಪೀಶ್ವರನ್ನ ಅಲ್ಲಿ ಕಳುಹಿಸಿ, ಇವನು ಅಲ್ಲಿ ಏನಾದರೂ ಅನಾಹುತ ಮಾಡಿ...ಬೇಡ, ಸದ್ಯಕ್ಕೆ ಸುಮ್ಮನಿರು. ಅವರಿರುವತನಕ ಈ ಹನುಮಂತರಾಯ ಬಾಲಮುದುರಿಕೊಂಡು ತೆಪ್ಪನಿದ್ದರೆ ನಮ್ಮ ಪುಣ್ಯ. (ಬಾಗಿಲು ಕಡೆ ತಿರುಗಿ) ಲೋ, ತಿಮ್ಮ, ಇನ್ನೂ ಇಲ್ಲೇ ನಿಂತಿದ್ದೀಯೇನೋ?

ಭಾಗೀ–ಅಯ್ಯೋ, ಹೋಗೋ, ಶನಿ. ಆ ರಾಜೂನ ಮೊದಲು ಹೋಗು ಅನ್ನು. ಹಾಗೇ ನೀನೂ ಹೋಗಿ ವೀಣೆ ಇಸಗೊಂಡು ಬಂದುಬಿಡು.

ತಿಮ್ಮ–ಆಯ್ತಮ್ಮ.

ಗೋವು–ಬಿಟ್ಟಿದ್ದೇ ಸಾಕು ಅಂತ ಮಾಮೂಲು ಮೋಟು ಗೋಡೆ ಮಗ್ಗುಲ್ಲಲಿ

ಬೀಡಿ ಸೇದುತ್ತಾ ನಿಂತುಬಿಡಬೇಡ. ಅವರು ಬರುವುದರಲ್ಲಿ ವಾಪಸ್ಸು ಬರಬೇಕು. (ತಿಮ್ಮ ನಿಷ್ಕ್ರಮಿಸುವನು) ಉಂ...ಈಗ ಏನೇ?

ಭಾಗೀ–ಬನ್ನಿ. (ಯಥಾಪ್ರಕಾರ ಕುರ್ಚಿ, ಮೇಜು ಹತ್ತಿ, ಸುಸ್ತಿಗೆ ಸೆರಗಿನಿಂದ ಗಾಳಿ ಹಾಕಿಕೊಳ್ಳಲು)

ಗೋವು–ತ್ಸು ತ್ಸು ತ್ಸು, ಬೀಸಣಿಗೆ ತಂದುಕೊಡಲೇನೇ?

ಭಾಗೀ–ಏನೂ ಬೇಡಿ. ಮಾತಾಡದೆ ಆ ಪಠಗಳು ತೆಗೆದುಕೊಡಿ ಒಂದೊಂದಾಗಿ, ಸಾಕು.

ಗೋವು–(ಒಂದು ಪಠವೆತ್ತಿ ನೀಡಿ) ಲೇ–

ಭಾಗೀ–ಆಂ?

ಗೋವು–ಈಗಲಾದರೂ ನಿಲುಕುತ್ತಾ? ಅಥವಾ....ನಾನೂ....ಮೆಟ್ಟಿಂಗಾಲು ಹಾಕಿ–? (ಹಾಕಿ ನಿಲ್ಲಲು)

ಭಾಗೀ–ಬೇಡ್ರೀ, ಬೇಡ್ರೀ, ನೀವು ತಿರುಗೀ–

ಗೋವು–ಈಗೇನೇ? ಬಿಡೇ...ಯಾರೂ ಇಲ್ಲ, ಇಬ್ಬರೇ ತಾನೇನೇ ಇರುವುದು?

ಶಾಂತಿ–(ಬಾಗಿಲೊಳಗೆ ತಲೆ ಚಾಚಿ) ಸುಳ್ಳಮ್ಮಾ, ನಾನು ಅಷ್ಟು ಹೊತ್ತಿನಿಂದ ಇಲ್ಲೇ ಬಾಗಿಲು ಪಕ್ಕ ಅವಿತುಕೊಂಡು ನೋಡುತ್ತಾ ಇದ್ದೀನೀ !

–ತೆರೆ–

## ದೃಶ್ಯ ೨

[ಗುಂಡ, ಸುಬ್ಬ ಮತ್ತು ರಂಗ್ಸಾಮಿ ಓದಿಕೊಳ್ಳುತ್ತಿರುವರು]

ರಂಗ–(ಪುಸ್ತಕ ತೊಡೆಗೆ ಇಳಿಸಿ) ಲೋ ಗುಂಡಾ !

ಗುಂಡ–ಆಂ?

ಸುಬ್ಬ–ನಾನು ಬೆಚ್ಚಿ ಬಿದ್ದೆ, ಅದು ಯಾಕೋ ಹಾಗೆ ಕೂಗಿದೆ?

ರಂಗ–ಹೇಳುತ್ತೀನಿ. ನನಗೆ ಒಂದು ಇದು....ಅಲ್ಲವ್ರೋ, ಈ ಚಾಣಿಕ್ಯ...ನಂದರನ್ನೆಲ್ಲಾ ನಿರ್ನಾಮ ಮಾಡಿ...ಚಂದ್ರಗುಪ್ತನನ್ನು ಸಿಂಹಾಸನದ ಮೇಲೆ ಕೂಡಿಸಿ–

ಸುಬ್ಬ–ಮೌರ್ಯಚಕ್ರಾಧಿಪತ್ಯ ಸ್ಥಾಪಿಸಿದ–

ರಂಗ–ಹೌದಾ? ಅಂಥ ದೊಡ್ಡ ಕೆಲಸ ಮಾಡಿದ ಆ ಚಾಣಿಕ್ಯ ಇಂಥ



ಪ್ರೈಮರಿ ಸ್ಕೂಲು, ಇಂಥ ಮಿಡಲ್ ಸ್ಕೂಲು, ಇಂಥ ಹೈಸ್ಕೂಲಿನಲ್ಲಿ ಓದಿದ ಇಂಥ ಪರೀಕ್ಷೆ ಇಂಥ ಕ್ಲಾಸಿನಲ್ಲಿ ಪ್ಯಾಸು ಮಾಡಿದ ಅಂತ ಈ ಚರಿತ್ರೆಯಲ್ಲಿ ಒಂದು ಸಾಲೂ ಇಲ್ಲವಲ್ಲಾ.

ಗುಂಡ–(ನಗುತ್ತಾ) ಅಲ್ಲವ್ರೋ, ಅವನ ಕಾಲದಲ್ಲಿ ಸ್ಕೂಲೆಲ್ಲಿ, ಪರೀಕ್ಷೆ ಎಲ್ಲೋ?

ಸುಬ್ಬ–ಅದೇ.... ಯಾವೋನೋ ಗಡ್ಡದ ಋಷಿ ಕಾಡಿನಲ್ಲಿ ಆಶ್ರಮ ಕಟ್ಟಿಕೊಂಡು ಇರುತ್ತಿದ್ದ–

ಗುಂಡ–ಅವನಿಗೆ ಒಂದು ಹತ್ತು ಇಪ್ಪತ್ತು ಶಿಷ್ಯಂದಿರು–

ಸುಬ್ಬ–ಆ ಋಷಿ ಹೆಂಡತಿಯ ಸೀರೆ ಒಗೆದು ಹಾಕಿ, ಅವಳ ಅಡಿಗೆಗೆ ಕಾಡಿನಿಂದ ಸೌದೆ ತಂದು–

ಗುಂಡ–ಹಸು ಕರುಗೆ ಹುಲ್ಲು ಕುಯ್ದುಕೊಂಡು ಬಂದು–

ಸುಬ್ಬ–ಕರ್ರೆಕ್ಟ್–"ಯಸ್ಯಜ್ಞಾನದಯಾಸಿಂಧು ರಘಾದಸ್ಯ ನಘಾ ಗುಣಾಃ" ಟೈಪಿನ ಸಂಸ್ಕೃತ ಹೇಳಿಸಿಕೊಂಡು ಮುಗಿಸುತ್ತಿದ್ದರಪ್ಪಾ –

ರಂಗ–ಅಲ್ಲವಾ ? ನಮ್ಮ ಹಾಗೆ ಚರಿತ್ರೆ, ಭೂಗೋಳ, ಗಣಿತ ಪಣಿತ ಅಂತ ತಲೆ ಕೆಡಿಸಿಕೊಳ್ಳದೆ ಅವರು ಅಷ್ಟು ಮಾಡಿದರಲ್ಲಾ, ನಾವು ಯಾಕೆ– ಹೀಗೆ–

ಗುಂಡ–ಕೆಡಿಸಿಕೊಳ್ಳುತ್ತಿದ್ದೀವಿ ಅಂತ–? ಅಲ್ಲವೇನೋ ?

ಸುಬ್ಬ–ಕರ್ರೆಕ್ಟ್–ಹೌದೋ, ಗುಂಡಾ–ನಾವು ಇದನ್ನ–

ಗುಂಡ–ತಡಿ, ನೀನುಹೇಳಿದ ಲೆಕ್ಕಾಚಾರವೇ ನೋಡಿದರೆ, ನಮಗೆ ನ್ಯಾಯವಾಗಿ ಆ "ಯಸ್ಯಜ್ಞಾನವೂ" ಬೇಡ, ನಮ್ಮ ಹೈದರಾಲಿ ತೊಗೋ, ಯಾರು–?

ಸುಬ್ಬ–ಮೈಸೂರು ಹುಲಿ–?

ರಂಗ–ಟಿಪ್ಪೂ–?

ಗುಂಡ–ಅವನ ಅಪ್ಪ. ಅವನಿಗೆ ತನ್ನ ಹೆಸರನ್ನ, ನಮ್ಮ ಹಾಗೆ ಎಡದಿಂದ ಬಲಕ್ಕಲ್ಲ, ಅವನ ಭಾಷೆಯಲ್ಲಿ ಬಲದಿಂದ ಎಡಕ್ಕೂ, ಬರಿಯೊಕ್ಕೆ ಬರುತ್ತಿರಲಿಲ್ಲವಂತಲ್ರೋ.... ಆದರೂ ರಾಜ್ಯ ಕಟ್ಟಿದ !

ಸುಬ್ಬ–ಹುಂ, ಹುಂ, ನಮ್ಮ ಸರ್. ಎಂ. ವಿಶ್ವೇಶ್ವರಯ್ಯನಂಥ ಇಂಜಿನಿಯರ್ ಚಕ್ರವರ್ತಿಗೆ, "ಇಲ್ಲಿ ಕಟ್ಟು ಕನ್ನಂಬಾಡಿ" ಅಂತ ಕಲ್ಲಮೇಲೆ ಕೆತ್ತಿಸಿದನಂತೆ !

ಗುಂಡ–ಹೂಂ. ಅವನು ಯಾವ ಸ್ಕೂಲು–ಯಾವ–

ರಂಗ–ಅದೇನೋ ನನಗೆ ಈಗ ಅನ್ನಿಸಿದ್ದು. ಅವರೆಲ್ಲಾ ಅಂಥಂಥ ದೊಡ್ಡ ದೊಡ್ಡ ಕೆಲಸಗಳನ್ನು, ಎರಡೊಂದಲ ಎರಡು ಗಟ್ಟಿಮಾಡದೆ, ಜಲಜನಕ ಆಮ್ಲಜನಕಗಳ ಗೋಜಿಗೆ ಹೋಗದೆ, ಸೈನ್‌ತೀಟಾ ಕೋಸೈನ್ ತೀಟಾ ತಂಟೆಗಳಿಗೆ ಹೋಗದೆ–

ಗುಂಡ–ಅರ್ಥವಾಯಿತು–ಆ ದಾರಿ ಬಿಟ್ಟು ನಾವು ಯಾಕೆ ಹೀಗೆ ಈ ಹೊರೆ ಪುಸ್ತಕಗಳನ್ನು ಓದುತ್ತಿದ್ದೇವೆ–ಈ–

ರಂಗ–ಕರ್‍ರೆಕ್ಟ್–ಅದೇ ನನಗೆ–ಅಷ್ಟೇ ಅಲ್ಲದೆ, ಇನ್ನೊಂದು.... ನಾವಿಷ್ಟು ಫಜೀತಿ ಪಟ್ಟುಕೊಂಡು ಇಷ್ಟೆಲ್ಲಾ ಓದುತ್ತಿದ್ದರೂನೂನೂವೆ, ಸ್ವಲ್ಪ ಕೂಡ ಇದನ್ನ ಲಕ್ಷಿಸದೆ, ನಮ್ಮನ್ನ "ಉಂಡಾಡಿಗಳು", "ಉಂಡಾಡಿಗಳು" ಅನ್ನುತ್ತಾರಲ್ಲಾ–ಜನ–

ಸುಬ್ಬ–ಹೌದು, ಹೌದು....ಅನ್ಯಾಯ–

ರಂಗ–ಅವರಿವರು ಹೋಗಲಿ, ಗುಂಡ, ನಿಮ್ಮ ಅಪ್ಪ ಅಂತೂ ನಮ್ಮನ್ನ ನೋಡುತ್ತಿರುವ ಹಾಗೇ ತಾಂಡವ ನೃತ್ಯವೇ ಪ್ರಾರಂಭಿಸಿಬಿಡುತ್ತಾರೆ ! ದೇವರ ದಯ, ಮೂರನೆ ಕಣ್ಣೊಂದಿಲ್ಲ. ಅದುಗಾನಾ ಇದ್ದಿದ್ದಿದ್ದರೆ ಇಷ್ಟು ಹೊತ್ತಿಗೆ ನಮ್ಮನ್ನ ಸುಟ್ಟು ಬೂದಿ ಮಾಡಿ, ಹಣೆಗೆ ವಿಭೂತಿ ಹಚ್ಚಿಕೊಂಡು ಬಿಡುತ್ತಿದ್ದರು, ಮಾಧ್ವರಾದರೂನೂ !

ಗುಂಡ–ರಂಗ್ಸಾಮೀ, ಊಹು, ಊಹು, ಊಹು, ಹಿರಿಯರೊಳ್ ದೋಷಾರೋಪಣಂ ಕಿರಿಯರ್ಗೆ ಉಚಿತಮಲ್ಲಂ, ಅನುಚಿತಂ, ಎಂದಂ–

"ದಂ" ಕರೆಕ್ಟೋ, "ದನ್" ಓ !

ರಂಗ–ಉಂಂಂಂ....? ಹಳೆಗನ್ನಡಕ್ಕೆ ದಮ್ಮೇ ಸರಿ. ಅಲ್ಲದೆ ಪದ್ಯಕ್ಕೆ ಸರಿ ತಪ್ಪು ಅಂತ ಇಲ್ಲವೇ ಇಲ್ಲ. ಕುಮಾರವ್ಯಾಸನೇ "ನಾರಾಯಣ"ನ್ನ "ನಾರಯಣ" ಮಾಡಿರುವಾಗ–

ಸುಬ್ಬ । ಉಚಿತಮಲ್ಲಂ ಅನುಚಿತಂ ಎಂದಂ

ರಂಗ । ಕವಿ ಕುಲ ತಿಲಕಂ ಗುಂಡ !

ಸುಬ್ಬ–ಒಪ್ಪಿದೆವು. ನಾವು ಯಂಗ್‌ಸ್ಟರ್‍ಸು, ಎಲ್ಡರ್‍ಸನ್ನ ಅನ್ನಬಾರದು. ಅವರು ದೊಡ್ಡವರು, ವಿವೇಕವಿಲ್ಲದೆ ಏನೋ ಅನ್ನುತ್ತಾರೆ ಅಂತ ನಾವು, ಲಿಟರಲಿ ಲೈಟ್ಸ್, ಲೈಟಾಗಿ ತೊಗೊಳ್ಳಬೇಕು ಇವನ್ನೆಲ್ಲಾ.

ಗುಂಡ–ಎಲ್ಲಿ, ಸುಬ್ಬ, ನಿನ್ನ ಮುಖ....(ನಗುತ್ತಾ) ಹಲ್ಲವೋ, ಮಸಿ ಮುಚ್ಚಿದ ಲಾಂದ್ರ ಇದ್ದ ಹಾಗಿದೆಯಲ್ಲೋ–ಲಿಟರರಿ ಲೈಟಂತೆ ಲೈಟು ! ಲೋ, ಸುಬ್ಬ, ಇದು ಎಷ್ಟನೆ ಸರ್ತಿಯೋ ನೀನು ಮೆಟ್ರಿಕ್ಯುಲೇಷನ್ನಿಗೆ ಕಟ್ಟುತ್ತಾ ಇರುವುದು ?



ನಮ್ಮ ಒಬ್ಬೊಬ್ಬರಿಗೂ ಮೂರು ಮೂರು ವರ್ಷದ ಆನರ್‍ಸ್ ಕೋರ್ಸ್ ಮುಗಿದುಹೋಗಿದೆ–

ರಂಗ–ಇಶ್–ತಡಿಯೋ....ತಡಿಯೋ–

ಗುಂಡ–ಯಾಕೋ ?

ಸುಬ್ಬ–ಏನಾಯಿತೋ ?

ರಂಗ–ಯುರೇಕಾ, ಗುಂಡಾ, ಯುರೇಕಾ. ಸುಬ್ಬಾ ಯುರೇಕಾ....

ಗುಂಡ–ಏನೋ ?

ರಂಗ–ಕಂಡುಹಿಡಿದುಬಿಟ್ಟೆ, ಕಂಡುಹಿಡಿದುಬಿಟ್ಟೆ.

ಸುಬ್ಬ–ಏನನ್ನೋ ?

ರಂಗ–ನಮ್ಮನ್ನ ಯಾಕೆ ಉಂಡಾಡಿಗಳು ಅಂತ ಎಲ್ಲರೂ ಅನ್ನುತ್ತಾರೆ ಅಂತ–ಕಂಡುಹಿಡಿದುಬಿಟ್ಟೆ ! ನಾವು ಹಳಗೆ ಫೈಲಾಗುತ್ತಾ ಇರುವುದರಿಂದಲೇ–ಇದಕ್ಕೇ ಇರಬೇಕೂ–

ಗುಂಡ–"ಇರಬೇಕೂ" ಅಲ್ಲ, ಇರುವುದೂ ಅದೇ.... ನಮ್ಮ ಅಪ್ಪ ನಾನು ಈ ಮಾಮಲೆಗೆ ಮಾಮಲೆದಾರನಾಗಿ–

ರಂಗ–ಏನು–?

ಸುಬ್ಬ–ಏನು–? ಏನಂದಿ?

ಗುಂಡ–ಹೂನ್ರೋ. ನಾನು ಇಲ್ಲಿಗೆ ಮಾಮಲೆದಾರನಾಗಿ,

ಎಡದ ಮೈಯೊಳು ಶೇಕದಾರರಗಡಣ,

ಬಲದ ಮೈಯೊಳು ಶಿರಸ್ತೆದಾರರಗಡಣ,

ಇದಿರೊಳು ಆಳು ಕಾಳು ಪಟೇಲರಗಡಣ

ಇದ್ದು, ನಾನು ಇವರ ನಡುವೆ ಎತ್ತರದ ಕುರ್ಚಿಯಲ್ಲಿ ಜರ್ತಾರಿ ಪೇಟ ಕಟ್ಟಿಕೊಂಡು ಜರ್ಬಿನಿಂದ ಓಲಗಿಸಲಿ ಅಂತ–ಅವರಿದ್ದರೆ–

ಸುಬ್ಬ–ಲೋ, ಗುಂಡಾ–

ರಂಗ–ಯಾಕೋ ?

ಗುಂಡ–ನಿನಗೇನಾಯಿತೋ ?

ಸುಬ್ಬ–ನನಗಲ್ಲ, ನಮ್ಮ ಅಪ್ಪನಿಗೆ, ಅವರಿಗೂ ಅದೇ ಆಸೆಯಲ್ಲೋ !

ರಂಗ–ಆಂ ? ಲೋ–

ಸುಬ್ಬ–ನಿನ್ನೆ ರಾತ್ರಿ ನಮ್ಮ ಮದರ್ರ ಹತ್ತಿರ ಹೇಳುತ್ತಿದ್ದರು, "ಪಾತೂ, ನಮ್ಮ ಸುಬ್ಬು ಈ ಮಾಮಲೆಗೆ ಮಾಮಲೆದಾರನಾದ ಅಂದರೆ"–

ರಂಗ–ದೇವರೇಗತಿ ಲ್ರೋ–ನಮ್ಮ ಅಪ್ಪನಿಗೂ ಅದೇ ಆಸೆನಲ್ರೋ !

ಗುಂಡ–ಏನು ?

ಸುಬ್ಬ–ರಂಗ್ಸಾಮಿ ? ನಿಮ್ಮಪ್ಪ–?

ರಂಗ–ಹೂನ್ರೋ. ನಾನು ಇಲ್ಲಿಗೆ ಮಾಮಲೆದಾರನಾಗುವವರೆಗೂ ಮೇಲುಕೋಟೆಗೆ ಮುಖ ಇಡೋಲ್ಲ, ಆದ ನೆಕ್ಸ್ಟ್ ವೈರಮುಡಿಯಲ್ಲೇ ದೇವರಿಗೆ ಪುಳಿಯೋಗರೆ ದಧ್ಯೋದನ ಅಲಂಕಾರ ಅಂತ–

ಸುಬ್ಬ–ಗುಂಡ, ಸೀರಿಯೆಸ್ಸಾಯಿತು ಸಿಟ್ಯುಯೇಷನ್ನು....ಏನೋ ? ಹೇಗೋ? ಒಂದೇ ಮಾಮಲೆಗೆ ಮೂರು ಜನ ಮಾಮಲೆದಾರರು ?

ಗುಂಡ–(ನಗುತ್ತಾ) ಏನ್ರೋ, ಇಷ್ಟಕ್ಕೆಲ್ಲಾ ಗಾಬರಿ ಆಗಿಬಿಡುತ್ತೀರಲ್ರೋ!.... ಇಂಥ ಚಿಕ್ಕ ಸಮಸ್ಯೆಯನ್ನು ಬಗೆಹರಿಸದೆ ಹೋದರೆ–

ಸುಬ್ಬ–ಚಿಕ್ಕ ಸಮಸ್ಯೆ ?

ಗುಂಡ–ಇನ್ನೇನು ? ಅಲ್ಲವೋ, ನಾವು ಎರಡು ಕೆಲಸಗಳನ್ನ ಮಾಡಬಹುದು. ಒಂದು, ಕೆಲಸಗಳನ್ನು ಮೂವರು ಹಂಚಿಕೊಳ್ಳುವುದು.... ಕಂದಾಯ, ಹಣ, ಕಾಸು ನನ್ನದು....ಸುಬ್ಬ, ಸೇಂದಿ, ಸಾರಾಯಿ, ನಿನ್ನದು–

ಸುಬ್ಬ–ಲೋ, ನಾನು ಕುಡಿಯುತ್ತೇನೇನೋ ?

ಗುಂಡ–ಈಗಿಲ್ಲ. ಅಧಿಕಾರ ಕೈಗೆ ಬಂದಮೇಲೆ, ಸೀಸೆ ಸೀಸೆಯೇ ಬಾಯೊಳಗೆ ತಾನಾಗಿ ನುಗ್ಗಿಬಿಡುತ್ತೆ–

ಸುಬ್ಬ–ಉಹು–

ಗುಂಡ–ಬೇಡಬಿಡು, ರಂಗ್ಸಾಮೀ ನೀನು ಇಟ್ಟುಕೊಳ್ಳೋ–

ರಂಗ–ಓ ಎಸ್, ನಾನೇನು ಇವನ ಹಾಗೆ ಒಬ್ಬಟ್ಟಲ್ಲ ! ಆಲ್‌ರೈಟ್..... ಅಥವಾ ಹೀಗೂ ಮಾಡಬಹುದು–

ಗುಂಡ–ಹೇಗೆ ?

ರಂಗ–ಈ ಮಾಮಲೆಯನ್ನೇ ಮೂರು ಭಾಗಮಾಡಿ–ನೀನು ಮುದ್ರೆಯವನು, ನಿನಗೆ ಪೋಸ್ಟ್ ಆಫೀಸು, ರಾಯರಮಠ, ಹೊಳೆಸಾಲು–

ಸುಬ್ಬ–ಹೂಂ.... ಈ ಹಂಡ್ರೆಡ್ ಅಂಡ್ ಇಲೆವನ್ನಿಗೆ ಗೋಪಾಲಕೃಷ್ಣ ದೇವರ ಗುಡಿ, ಮಹಿಳಾ ಸಮಾಜ–

ರಂಗ–ಈ ಅಡ್ಡ ಕಂಬಿಗೆ ರೈಲ್ವೆ ಸ್ಟೇಷನ್ನು–

ಗುಂಡ–ಸ್ಟಾಪ್....ಸ್ಟಾಪ್....ಸ್ಟಾಪ್.... ಅಲ್ಲರೋ, ನಾವು ಮೆಟ್ಟಲೇ ಹಾಕದೆ ಮಹಡಿಗೆ ಹತ್ತೊಕ್ಕೆ ಹೊರಟಿದ್ದೇವಲ್ರೋ !



ಶಿಶುವುಂ ಜನಿಸುವ ಮುನ್ನಂ
ಕುಲ್ಲಾವಿಯಂ ಸೃಜಿಸಿದಳ್
ಎಂದಂ–

ಸುಬ್ಬ, ರಂಗ । ಕವಿ ಕುಲ ತಿಲಕಂ ಗುಂಡಂ.

ಗುಂಡಂ–ಸುಬ್ಬ, ರಂಗ್ಸಾಮಿ, ಇದು ಚಾಣಕ್ಯನ ಕಾಲವೂ ಅಲ್ಲ, ಹೈದರಾಲಿ ಕಾಲವೂ ಅಲ್ಲ. ನಾವು ಈ ಪರೀಕ್ಷೆ ಪ್ಯಾಸು ಮಾಡದೆ ಹೋದರೆ, ಮಾಮಲೆದಾರರ ಮಾತು ಬಿಡು, ಮೂರನೆ ದರ್ಜೆ ಗುಮಾಸ್ತೆಯರೂ ಆಗುವ ಹಾಗಿಲ್ಲ. ಆದ್ದರಿಂದ ಹಳೆ ಕತೆ ಬಿಟ್ಟು, ಈಗ ಒಂದು ಠರಾವು ಪ್ಯಾಸ್ ಮಾಡೋಣ. ಒಕ್ಕಣೆ–

"ನಾವೂ ಮೂವರೂ ತಹಲ್‌ವರೆಗೆ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಮೂರು ಮೂರು ಸರ್ತಿ ದಂಡಯಾತ್ರೆ ಎತ್ತಿರುವುದರಿಂದಲೂ–"

ಸುಬ್ಬ–ದಂಡಯಾತ್ರೆ ?

ರಂಗ–ಹೂನೋ, ಗುಂಡ ರೈಟು. ನಮ್ಮ ಸ್ಕೂಲು ಫೀಸು, ಮೇಷ್ಟರ ಪಾಠ, ಪುಸ್ತಕದ ಖರ್ಚು ಎಲ್ಲಾ ದಂಡ ಅಲ್ಲವೇನೋ ? ಅದಕ್ಕೆ ದಂಡಯಾತ್ರೆ–

ಗುಂಡ–ಬ್ರಿಲಿಯೆಂಟ್ ! ಲೋ, ರಂಗಸ್ವಾಮಿ, ಇಂಥ ಬುದ್ಧಿ ಇಟ್ಟುಕೊಂಡೂ ಫೈಲಾಗುತ್ತಾ ಇದ್ದೀಯಲ್ಲೋ ?

ರಂಗ–(ಮೂಗಿನಲ್ಲಿ) ನಾನೇನೋ ಮಾಡಲಿ ? ನಿಮ್ಮನ್ನೆಲ್ಲಾ ಬಿಟ್ಟು ನಾನು ಒಬ್ಬನೇ ಹೇಗೋ ಪ್ಯಾಸ್ ಮಾಡಿಕೊಂಡು ಹೋಗಲಿ ? ನೀನೇ ಹೇಳುತ್ತಿರುತ್ತೀಯಾ–

"ಸ್ವಾರ್ಥಂ ಧೂರ್ತಲಕ್ಷಣಂ"

ಗುಂಡ–(ಎದೆ ಮುಟ್ಟುಕೊಳ್ಳುತ್ತಾ) ಎಂದಂ ಕವಿ ಕುಲ ತಿಲಕಂ ಗುಂಡಂ....

ರಂಗ–ಅಲ್ಲವಾ ?....ಮುಂದೆ ಹೇಳು–

ಗುಂಡ–"ನಮ್ಮ ತಂದೆ ತಾಯಿಯರು, ನಾವು ಮೂವರೂ ಈ ಒಂದೇ ಮಾಮಲೆಗೆ ಮಾಮಲೆದಾರರಾಗಬೇಕೆಂಬ ಹೆಬ್ಬಯಕೆ ಹೊಂದಿರುವುದರಿಂದಲೂ, ಈ ತ್ರಿಪಿತರಿಗೆ–ತ್ರೀಫಾದರ್ಸಿಗೆ–ತೃಪ್ತಿ ತಲಪಿಸುವ ದೃಢ ಸಂಕಲ್ಪ ದೃಷ್ಟಿಯಿಂದಲೂ, ಈ ಸಾರಿ, ಅಂದರೆ ನಾಲ್ಕನೆ ಸಾರಿ, ಐದನೆ ಸಾರಿಗೆ ಆಸ್ಪದ ಕೊಡದೆ ಅಂದರೆ ಮತ್ತೆ ಫೈಲಾಗದೆ–ಈ ಮೆಟ್ರಿಕ್ಯುಲೇಷನ್ ಮಹಾ ಮಾರಿಯುನ್ನು ತಟಾಯಿಸಲೇಬೇಕು"....ಹೇಗೆ ?

ಸುಬ್ಬ–ನಂದಿ ನಂದಿಬಟ್ಟಲು ಹೂ ಇದ್ದ ಹಾಗಿದೆ ! ಕಣ್ಣಿಗೆ ಒತ್ತಿಕೊಳ್ಳಬೇಕು!

ರಂಗ–ನಾನು ಒಂದು ಸೂಚಿಸಲಾ ?

ಗುಂಡ–ಹುಂ...ಏನು ಹೇಳು.

ಸುಬ್ಬ–ಏನು?

ರಂಗ–"ನಾವು ಮಾಡುವ ಪ್ರಯತ್ನವೆಲ್ಲಾ ಮಾಡಿದರೂ, ಪರೀಕ್ಷೆಯಲ್ಲಿ ಉತ್ತರ ಚೆನ್ನಾಗಿ ಬರೆದರೂ, ನಮ್ಮ ಗ್ರಹಚಾರ ಚರಿಸದೆ ನಿಂತಲ್ಲೇ ನಿಂತದ್ದಾದರೆ"

ಗುಂಡ–ಹುಂ, ಹೂಂ–?

ಸುಬ್ಬ–ಆಗ?

ರಂಗ–"ದಮ್ಮಯ್ಯ ಎಂದಾಗಲಿ, ದತ್ತಯ್ಯ ಎಂದಾಗಲಿ, ದೊಡ್ಡವರ ಕೈಯಲ್ಲಿ–ಅಂದರೆ ಬಾಯಲ್ಲಿ–ಹೇಳಿಸಿಯಾಗಲಿ, ಕಡೆಗೆ ದುಡ್ಡು ದುಗ್ಗಾಣಿ ತೆತ್ತಾಗಲಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಲೇ ಬೇಕು"–ಹೇಗೆ?

ಗುಂಡ–ಬೇಷ್ಟೋ, ಬೇಷ್ಟೋ, ಕೈ ಎತ್ತಿದೆ.

ಸುಬ್ಬ–ನಾನು ಎರಡು ಕೈಯೂ ಎತ್ತಿದೆ. ಆದರೆ....ಆದರೆ,

ಗುಂಡ–ಯಾಕೋ–

ರಂಗ–ಯಾಕೋ ಕೆಟ್ಟ ಮುಖ?

ಸುಬ್ಬ–ಏನಿಲ್ಲ, ಮಸಾಲೆ ದೋಸೆ ಕಾಫಿ ಇಲ್ಲದ ಮೀಟಿಂಗುಗಳಲ್ಲಿ ಪ್ಯಾಸಾದ ಠರಾವುಗಳಿಗೆ ಮರ್ಯಾದೆ ಇರುತ್ತೆಯಾ ಅಂತ ಅನುಮಾನ–

ರಂಗ–ಅದೇನೋ ನಿಜಾನೇ, ಗುಂಡಾ.... ನಮ್ಮ ಅಪ್ಪ ಎಷ್ಟೋ ಮೀಟಿಂಗುಗಳಿಗೆ ಹೋಗುತ್ತಿರುತ್ತಾರಲ್ಲಾ–ಮನೆಗೆ ಬಂದಮೇಲೆ ಮದರ್ರು, "ಏನಾಯಿತಿವತ್ತು ಮಿಟಂಗಿನಲ್ಲಿ?" ಅಂತ ಕೇಳಿದರೆ, "ಇನ್ನಿಕಿ ದೋಶೆ ಅಪ್ಪಡಿ ಇರಿಂದದು, ಉಷ್ಮಾ ಅಪ್ಪಡಿ ಇರಿಂದದು, ಕಾಫಿ–ಅಡಡಾ–" ಅಂತ ಹೇಳುತ್ತಿರುತ್ತಾರೆಯೇ ಹೊರತು ಬೇರೆ ಮಾತು ಹೇಳಿದ್ದರೆ ಕೇಳು. ಆದ್ದರಿಂದ ಸುಬ್ಬ ಎತ್ತಿದ ಪಾಯಿಂಟ್ ಸರಿಯೋ–

ಗುಂಡ–ಪಾಯಿಂಟ್ ಸರಿಯೇ, ಪೈಸಾ ಎಷ್ಟ್ ಇಟ್ಟಿದ್ದೀಯಾ?

ರಂಗ–(ಜೇಬು ತೋರಿಸುತ್ತಾ) ಖಾಲಿ, ನೋಡು.

ಗುಂಡ–ನೀನೋ, ಸುಬ್ಬಾ?

ಸುಬ್ಬ–ನನ್ನ ಷರಟಿಗೆ ಜೇಬೇ ಇಲ್ಲ.

ರಂಗ–ಗಂಟು ಕಳ್ಳ ಕಾಣೋ ಇವನು. ಎಲ್ಲಾ ಮನೆಯಲ್ಲೇ ಇಟ್ಟುಬರುತ್ತಾನೆ. ಇವನ ಅಜ್ಜಿ ದಿನಾ ತಿಂಡಿಗೆ ಎರಡೆರಡಾಣೆ ಕೊಡುತ್ತಾರೆ.

ಸುಬ್ಬ–ಏಯ್, ಯಾವೋನೋ ನಿನಗೆ ಹೇಳಿದವನು–?

ಗುಂಡ–ತಡೆಯಿರೋ, ತಡೆಯಿರೋ, ಜಗಳ ಆಡಬೇಡಿರೋ–



"ಮಿತ್ರರೋಳ್ ಕಲಹಂ ಮೂರ್ಖತನಂ" ಎಂದಂ

ಸುಬ್ಬ,ರಂಗ –ಕವಿ ಕುಲ ತಿಲಕಂ ಗುಂಡಂ.

ಗುಂಡ–ಅದ್ದೂ. ಹಾಗೆ ಸೇರಿಕೊಳ್ಳಬೇಕು. ಈಗ, ನಡೆಯಿರಿ ಹೇಳುತ್ತೀನಿ. (ನಡೆಯುತ್ತಾ) ನಿಮಗೆ ದೋಸೆ ಕಾಫಿ ಆಗಬೇಕು, ನೀವು ಪಾಪರ್ರುಗಳು!

ರಂಗ, ಸುಬ್ಬ– ಪಾಪರ್ರುಗಳು ಅಂತ ಅಲ್ಲ–

ಗುಂಡ–ಪೈಸ ಇಲ್ಲದವರು ಅಂತ....ಹೋಗಲಿ ಬಿಡಿ. ನಾನಿದ್ದೇನೆ ಲೀಡರ್ ಅಂದರೆ ಯೋಗಕ್ಷೇಮ ನೋಡಿಕೊಳ್ಳಲೇಬೇಕು. ದೇವರಿದಾನೆ, ಬನ್ನಿ ಮಧ್ಯಾಹ್ನದಿಂದ ಮನೆಗೆ ಹೋಗಿಲ್ಲ. ಹೋಗೋಣ ಪರೀಕ್ಷೆ ಹತ್ತಿರ ಬರುತ್ತಿದೆ. ಮದರ್ರು ಕೇಳಿದರೆ ಇಲ್ಲ ಅನ್ನೊಲ್ಲ. ಗಿಟ್ಟಿಸಿಕೊಂಡು ಬರುತ್ತೇನೆ. ಬನ್ನಿ.

ಸುಬ್ಬ–ನಿಮ್ಮ ಮನೆಗೆ ನಾವು ಬರೊಲ್ಲಪ್ಪಾ.... ನಿಮ್ಮ ಫಾದರ್ ರೇಗುತ್ತಾರೆ. ನೀನು ಹೋಗಿ ಬಾ. ನಾವು, ಯಥಾಪ್ರಕಾರ, ಆ ಹುಣಸೆಮರದ ಕೆಳಗೆ ಕಾದಿರುತ್ತೇವೆ.

ಗುಂಡ–ಹಾಗೇ ಮಾಡಿ....ಮರದ ಕೆಳಗೇ ಕಾದಿರಿ....ಹತ್ತಿ ಗಿತ್ತಿ ಬಿಟ್ಟೀರಿ–ರಸ್ತೆಯಲ್ಲಿ ಹೆಂಗಸರು ಮಕ್ಕಳು ಓಡಾಡುತ್ತಿರುತ್ತಾರೆ. ನಿಮ್ಮನ್ನ ನೋಡಿ ಪಿಶಾಚಿಗಳು ಅಂತ–ಹೆದರಿ ಪ್ರಾಣ ಬಿಟ್ಟರು–ನಡೆಯಿರಿ.

(ನಿಸ್ಕ್ರಮಿಸುವರು)

## ದೃಶ್ಯ ೩

[ಸ್ವಲ್ಪ ಹೊತ್ತಿನ ತರುವಾಯ:
ಗೋವಿಂದರಾಯರ ಮನೆಯ ಹಾಲು ಈಗ ಸಂಪೂರ್ಣ ಅಲಂಕೃತವಾಗಿದೆ. ಶಾಂತಿ ಸಿಂಗರಿಸಿಕೊಂಡು ಹಾಲಿನ ಅಂದ ಚಂದ ನೋಡುತ್ತಿರುವಳು. ಗುಂಡ ಪ್ರವೇಶಿವನು]

ಗುಂಡ–ಲೇ, ಶಾಂತಿ !

ಶಾಂತಿ–(ನೋಡಿ, ಚಪ್ಪಾಳೆ ತಟ್ಟುತ್ತಾ ಸಮೀಪಿಸಿ) ಗುಂಡಣ್ಣಾ, ಗುಂಡಣ್ಣಾ–

ಗುಂಡ–ಲೇ, ಅಲ್ಲೇ....ಅಲ್ಲೇ....ಹಿಂದಕ್ಕೆ ಹೋಗೇ....ಇನ್ನೂ–ಹಾಂ...ಹಾಗೆ ಅಲ್ಲಿ ನಿಂತು ಕೈ ಕಟ್ಟಿಕೊಂಡು ಮರ್ಯಾದೆಯಿಂದ ಮಾತಾಡಿಸೇ, ಬಹುವಚನದಲ್ಲಿ–"ಅಣ್ಣಾವರೇ" ಅನ್ನು. ನಾನು ಯಾರು ಗೊತ್ತೇನೇ ಈಗ?

ಶಾಂತಿ–ಯಾಕೋ? ಗುಂಡಣ್ಣ ಅಲ್ಲವೇನೋ?

ಗುಂಡ–ಅಲ್ಲ. ಗುಂಡೂರಾವ್, ಊಹೂಹೂಹೂ ಅದೂ ಅಲ್ಲ.... ಆಮೇಲೆ

ಗೆಜೇಟಿನಲ್ಲಿ ಹಾಕಿಸಿ ಬೇರೆ ಹೆಸರು ಇಟ್ಟುಕೊಳ್ಳುತ್ತೇನೆ. ಅಲ್ಲಿಯವರೆಗೆ ನಾನು ಗುಂಡೂರಾವ್ ಎಸ್ಕ್ವಯರ್, ಎಂ–ಎ–

ಶಾಂತಿ–ಎಮ್ಮೆ?

ಗುಂಡ–ಲೇ, ಎಮ್ಮೆಯೂ ಅಲ್ಲ, ಕೋಣವೂ ಅಲ್ಲ. ಹೇಳುವ ಮಾತು ಪೂರ್ತಿಕೇಳೇ! ಮಧ್ಯ ಮಧ್ಯ ಬಾಯಿ ಹಾಕಿದ ಹಾಗೆ. ಎಂ–ಎ–ಟಿ–ಆರ್–ಐ–ಸಿ–ಯು–ಎಲ್–ಏ–ಟಿ–ಐ–ಓ–ನ್–ಮೆಟ್ರಿಕ್ಯುಲೇಷನ್ ವಿದ್ಯಾರ್ಥಿ, ಬಟ್ ಮಾಮಲೆದಾರ್ ಇನ್ ದಿ ಮೇಕಿಂಗೂ ಅಂತ–

ಶಾಂತಿ–ಅದೇನೋ ಹಾಗೆಂದರೆ?

ಗುಂಡ–ಹಾಗೆಂದರೆ...ಅಮಲ್ದಾರ್ರಾಗ್ತಾಾಾ ಇರುವವನು ಅಂತ ಅರ್ಥ.

ಶಾಂತಿ–ಓಹೋ, ಅಮಲ್ದಾರ್ರಾಗುತ್ತೀರಾ ನೀವು?

ಗುಂಡ–ಹೌದು. ಅದಕ್ಕೇ ಹೇಳಿದ್ದು, ಮರ್ಯಾದೆಯಿಂದ ಮಾತಾಡು ಅಂತ.

ಶಾಂತಿ–ಸರಿ. ಆಗಲಿ, ಹಾಗೇ ಮಾಡುತ್ತೀನಿ. ಅಮಲ್ದಾರರೇ, ಸ್ವಲ್ಪ ಮಿಯಾವ್ ಅನ್ನಿ ನೋಡೋಣ.

ಗುಂಡ–ಲೇ, ಏನೇ ಅದು?

ಶಾಂತಿ–ನನಗೇನು ಗೊತ್ತೀ? "ಅಮಲ್ದಾರರು ಮಧ್ಯಾಹ್ನ ಕಾಫಿಗೆ ಬರಲಿಲ್ಲವೇ?" ಅಂತ ಅಮ್ಮ ಕೇಳಿದಳು. ಅಪ್ಪ ಇದ್ದುಕೊಂಡು, "ಯಾಕೆ ಯೋಚನೆ ಮಾಡುತ್ತೀಯೆ, ಯಾವುದೋ ಮಾಯದಲ್ಲಿ ಬಂದು ಬೆಕ್ಕಿನ ಹಾಗೆ ಬಸಿದುಕೊಂಡು ಹೋಗುತ್ತಾನೆ" ಅಂದರು.

ಗುಂಡ–ಅದಕ್ಕೋಸ್ಕರ ಈ ಬೆಕ್ಕಿನ ನೀನು ಮಿಯಾವ್ ಅನ್ನು ಅಂದಿ?

ಶಾಂತಿ–ಅಷ್ಟೇ ಅಲ್ಲ, ಅಮಲ್ದಾರರೇ, ನಿಮ್ಮ ಬಾಲ ತೋರಿಸಿ.

ಗುಂಡ–ಲೇ, ಶಾಂತಿ, ನಿನಗೇನೋ ಕೇಳತ್ತೆ–

ಶಾಂತಿ–ಅಯ್ಯೋ, ನನ್ನ ಮೇಲೆ ಯಾಕೋ ಜೋರು ಮಾಡುತ್ತೀಯಾ? ಅಪ್ಪ ಹೇಳಿದರು ಕಣೋ. ತಡಿ, ಅಮ್ಮನ ಕೈಯಲ್ಲೇ ಹೇಳಿಸುತ್ತೇನೆ–(ಹೊರಡುವಳು)

ಗುಂಡ–(ಜಡೆ ಹಿಡಿದು ನಿಲ್ಲಿಸಿ) ಲೇ, ಲೇ, ಬೇಡ....(ಅತ್ತ, ಇತ್ತ, ಸುತ್ತ ನೋಡಿ)ಲೇ ಇದೇನೇ ಇವೆಲ್ಲಾ ಅಲಂಕಾರ? ನಿನ್ನ ದೇನೇ ಶೃಂಗಾರ? ಜರ್ತಾರಿ ಲಂಗ? ಹೊಸಾ ಟೇಪು?

ಶಾಂತಿ–"ಬರುತಾನೆ ಭಾವ ಬರುತಾನೆ



ಮೈಸೂರಿನಿಂದ ಬರುತಾನೆ
ಮಲ್ಲಿಗೆ ಹೂವು ತರುತಾನೆ
ಬರುತಾನೆ ಭಾವ ಬರುತಾನೆ"

ಗುಂಡ–ಏನು? ಭಾವ?

ಶಾಂತಿ–ಹೂನೋ, ಈಗ ಮೈಸೂರಿನಿಂದ ನಮ್ಮ ಪದ್ದಕ್ಕನ್ನ ನೋಡೊಕ್ಕೆ ಭಾವ ಬರುತಾನೆ!

ಗುಂಡ–ಯಾರೇ ಅದು?

ಶಾಂತಿ–ನನಗೆ ಗೊತ್ತಿಲ್ಲಪ್ಪಾ....ಅದು ಯಾರೋ ಇದಾರಂತಲ್ಲೋ ಮೈಸೂರಿನಲ್ಲಿ...ಅರಮನೆ ಹತ್ತಿರ....ಆವತ್ತು ಕಾಗದ ಬಂದಿತ್ತು ನೋಡು–ಅವರ ಮಗ ರಾಮು ಅಂತಲೋ ಏನೋ–

ಗುಂಡ–ಹುಂಹುಂಹುಂ–ಅವನು–ಈಗ–?

ಶಾಂತಿ–ಅವರೂ, ಅವರ ಫ್ರೆಂಡಂತೆ...ಇಬ್ಬರೂ ಈಗ ರೈಲಿಗೆ ಬರುತ್ತಾರಂತೆ.

ಗುಂಡ–ಸರಿ, ಅವರು ಬರೊಕ್ಕೂ ನನ್ನ ಬಾಲಕ್ಕೂ–

ಶಾಂತಿ–ಅದೇ ಹೇಳುತ್ತೀನೋ, ಮೋಟಾರು ಸ್ಟೇಷನ್ನಿಗೆ ಹೋಯಿತು. ಅಮ್ಮ ನಿನ್ನನ್ನು ಕಳುಹಿಸೋಣ ಅಂದಳು. ಆಗ, ಅಪ್ಪ, "ಸದ್ಯಕ್ಕೆ ಸುಮ್ಮನಿರೇ, ಈ ಹನುಮಂತರಾರ ಅವರಿರುವತನಕ ಬಾಲ ಮುದುರಿಕೊಂಡು ತೆಪ್ಪನಿದ್ದರೆ ಪುಣ್ಯ" ಅಂದರು.

ಗುಂಡ–ಅದಕ್ಕೆ ನೀನು, "ಅಮಲ್ದಾರರಿಗೆ ಬಾಲ ಇರುತ್ತೆಯೇ?" ಅಂತ ಕೇಳಿದಿ?

ಶಾಂತಿ–ಹುಂ.

ಗುಂಡ–ಶಾಂತಿ, ಅಪ್ಪ ನಿಜವಾಗಲೂ ಹಾಗಂತ ಹೇಳಿದರೇನು?

ಶಾಂತಿ–ನ್ನಿಜ್ಜವಾಗಲೂ, ಖಂಡಿತವಾಗಲು, ನಾನು ಸುಳ್ಳು ಹೇಳುತ್ತೀನೇನಣ್ಣಾ? ಬೇಕಾದರೆ ನೋಡು, ಈ ಮೇಜಿನಾಣೆಗೂ .ಈ ಸೋಫಾ ಆಣೆಗೂ, ಈ ಹೊಸಾ ಟೇಪಿನ ಆಣೆಗೂ–

ಗುಂಡ–ಉಂ....ಸರಿ....ಹೀಗೆ ಸಮಾಚಾರ–

ಶಾಂತಿ–ಅಣ್ಣ, ನೀನು ಇವನ್ನೆಲ್ಲಾ ಹಚ್ಚಿಕೊಳ್ಳಬೇಡ, ಅಣ್ಣ. ಅಪ್ಪ ಯಾವಾಗಲೂ ಹಾಗೇ.....ನೀನು ಕೂತುಕೋ. ಅವರೆಲ್ಲಾ ಬರುತ್ತಾರೆ ಅಂತ ಒಳಗೆ ಕೇಸರಿಭಾತು, ಜಿಲೇಜಿ, ಬೋಂಡ, ಉಪ್ಪೇರಿ ಎಲ್ಲಾ ಮಾಡಿದ್ದಾರೆ ತಂದು ಕೊಡುತ್ತೀನಿ ಯಾರಿಗೂ ಕಾಣದ ಹಾಗೆ–

ಗಂಡ–ಬೇಡ, ಶಾಂತಿ. ಅಲ್ಲದೆ ನಾನೊಬ್ಬನೇ ತಿನ್ನೊಲ್ಲ....ಅಮ್ಮ ಏನು ಮಾಡುತ್ತಾ ಇದ್ದಾಳೆ?

ಶಾಂತಿ–ಜರ್ತಾರಿ ಸೀರೆ ಉಟ್ಟುಕೊಳ್ಳುತ್ತಾ ಇದ್ದಾಳೆ.

ಗುಂಡ–ಸರಿ ಬಿಡು.

ಶಾಂತಿ–ಯಾಕಣ್ಣಾ?

ಗುಂಡ–ಯಾಕಿಲ್ಲ. ಒಂದು ರೂಪಾಯಿ ಬೇಕಾಗಿತ್ತು. ಹೋಗಲಿ ಬಿಡು.

ಶಾಂತಿ–ಅಷ್ಟೇನಾ? ಒಂದೇ ರೂಪಾಯಿ? ಅದಕ್ಕೆ ಅಮ್ಮ ಯಾಕೆ, ನಾನೇ ಕೊಡುತ್ತೀನಿ; ನನ್ನ ಡಬ್ಬಿಯಲ್ಲಿ ಹಾಕಿಟ್ಟುಕೊಂಡಿದ್ದೀನಿ...(ಒಳಗೆ ಹೋಗುತ್ತಾ) ಅಣ್ಣಾ, ನೀನು ಹೊರಟು ಹೋಗಕೂಡದು...ಆ ಬಾಗಿಲ ಆಣೆ....(ಮರೆಯಾಗಿ ಹಿಂದಿರುಗವಷ್ಟರಲ್ಲಿ)

ಗುಂಡ–ಬೆಕ್ಕು ! ಮಿಯಾವ್ ! ಹನುಮಂತರಾಯ ! ಬಾಲ ! ಮೈಸೂರು....ಮೋಟಾರು....ಸ್ಟೇಷನ್ನು....

ಶಾಂತಿ–(ಓಡಿ ಬಂದು) ಇದ್ದಿಯಾ? ತೊಗೊ, ಅಣ್ಣ.

ಗುಂಡ–ಜಾಣೆ, ಶಾಂತಿ.

ಶಾಂತಿ–ಸಾಕಾ, ಅಣ್ಣ? ಇನ್ನೂ ಬೇಕಾದರೆ ಇದೆ, ಕೊಡುತ್ತೀನಿ.

ಗುಂಡ–ಬೇಡ, ಸಾಕಿಷ್ಟೇನೇ....ಆಮೇಲೆ ಅಮ್ಮನ್ನ ಕೇಳಿ ಇಸುಕೊಡುತ್ತೀನಿ.

ಶಾಂತಿ–ಬೇಡ. ನನಗೇನೂ ಬೇಡ. ಅದು ನಿಂಗೆ ನಿಂಗೇ....ಅಣ್ಣ, ನನ್ನ ಮೇಲೆ ಕೋಪ ಇಲ್ಲ ತಾನೆ, ಅಣ್ಣ?

ಗುಂಡ–ಇಲ್ಲಮ್ಮಾ, ನಿನ್ನ ಮೇಲೆ ಯಾಕೆ ಕೋಪ?....ಶಾಂತೀ, ಆ ಭಾವನೂ ಫ್ರೆಂಡೂ ಈಗಿನ ರೈಲಿಗೆ ತಾನೇ–?

ಶಾಂತಿ–ಹೂಂ, ಅಣ್ಣ....ಆ ಮೇಲೆ ಇನ್ನೊಂದು...ಮರೆತೇ ಹೋಗಿತ್ತು.

ಗುಂಡ–ಏನು?

ಶಾಂತಿ–ಈಗ ಅವರು ಬಂದು ಪದ್ದಕ್ಕನ್ನ ಒಪ್ಪಿದರೆ, ಅವರ ಮದುವೆ ಜತೆಯಲ್ಲಿ ನಿನಗೂ ಪಂಕಜನಿಗೂ ಮದುವೆ ಮಾಡುತ್ತಾರಂತೆ.

ಗುಂಡ–ಆಂ?

ಶಾಂತಿ–ಹೂಂ.

ಗುಂಡ–ನನಗೂ ಪಂಕಜನಿಗೂ ಮದುವೆ?

ಶಾಂತಿ–ಹೂಂ. ಅಣ್ಣಾ, ಅವರು ಹಾಗೆಂದಾಗ, ನಾನು ಅಲ್ಲೇ ಇದ್ದೆ. ಪಂಕಜ ಯಾಕೋ ಬಂದಳು. ನಾನು, "ಪಂಕಜ, ಪಂಕಜ, ಈ ಟೇಪು ಸರಿಯಾಗಿ ಕಟ್ಟೇ" ಅಂದೆ; ಅದಕ್ಕೆ, ಅಮ್ಮ, "ಶಾಂತೀ, ಇನ್ನು ಮೇಲೆ ಹಾಗೆಲ್ಲಾ ಇವಳ ಹೆಸರು ಹಿಡಿದು ಕೂಗಕೂಡದು, 'ಅತ್ತಿಗೆ' ಅನ್ನು ಅಂದಳು"



"ಗುಂಡ–ಉಂ?

ಶಾಂತಿ–ಪಂಕಜ ರೂಮಿನಲ್ಲಿ ಕೂತುಕೊಂಡು ಅಳುತ್ತಾ ಇದ್ದಾಳಣ್ಣಾ. ಯಾಕಣ್ಣಾ?

ಗುಂಡ–ಅವಳಿಗೆ ಮಂಡಿಗೆ ಬಡಿಯುವಷ್ಟು ಉದ್ದ ಜಡೆಯಿದ್ದರೂ, ಮಂಡೆಯ ಒಳಗೆ ಮೆದುಳು ಖಾಲಿ....ಅದಕ್ಕೋಸ್ಕರ....ಶಾಂತಿ, ನೀನು ಮೆಲ್ಲಗೆ ಹೋಗಿ, ಅವಳಿಗೆ ನಾನು ಅವಳನ್ನು "ಹುಚ್ಚಿ" ಅಂದೆ ಅಂತ ಹೇಳು.

ಶಾಂತಿ–ಯಾಕಣ್ಣಾ? ಹಾಗಾದರೆ ನೀನು ಅವಳನ್ನು ಮದುವೆ ಮಾಡಿಕೊಳ್ಳೊಲ್ಲವಾ?

ಗುಂಡ–(ನಗುತ್ತಾ) ಹನುಮಂತರಾಯನಿಗೆ ಮದುವೆ ಎಲ್ಲಮ್ಮಾ?...ಇಲ್ಲಿ ನೋಡು, ಶಾಂತಿ, ನಾನು ಹೋಗಿ ಬರುತ್ತೀನಿ. ನಾನು ಈಗ ಇಲ್ಲೀಗೆ ಬಂದಿದ್ದೆ ಅಂತ ನೀನು ಯಾರಿಗೂ ಹೇಳಬೇಡ....ಆಂ?

ಶಾಂತಿ–ಹುಂ, ಅಣ್ಣ.

ಗುಂಡ–ಜಾಣೆ. (ನಿಷ್ಕ್ರಮಿಸುವನು. ಶಾಂತಿ ಬಾಗಿಲವರೆಗೂ ಹೋಗಿ ಮರುಗಿ ಕಣ್ಣು ಹನಿ ಒರೆಸಿಕೊಳ್ಳುವಳು)

–ತೆರೆ–

ದೃಶ್ಯ ೪

(ನಾರಣಾಚಾರಿ ಹೋಟಲಲ್ಲಿ ಒಂದು ಭಾಗ. ಗುಂಡ, ಸುಬ್ಬ, ರಂಗ್ಸಾಮಿ ವಡೆ ಕಾಫಿ ಹೊಡೆಯುತ್ತಾ)

ಗುಂಡ–ನಾನು ಕಪಿಯಂತೆ !

ರಂಗ–ಆಂ ?

ಸುಬ್ಬ–ಲೋ !

ಗುಂಡ–ಬೆಕ್ಕಂತೆ !

ರಂಗ–ಅಯ್ಯೊಯ್ಯೋ !

ಗುಂಡ–ನನ್ನ ತಂಗಿ ನನ್ನನ್ನ "ಮಿಯಾವ್" ಅನ್ನು ಅಂದಳೋ !

ಸುಬ್ಬ–ನೀನು ಸುಮ್ಮನಿದ್ದೆಯಾ?

ರಂಗ–ಮೂತಿ ಪರಚಿಟ್ಟುಬಿಡಬೇಕಿತ್ತು.

ಗುಂಡ–ತಪ್ಪು ಅವಳದಲ್ಲ.

ರಂಗ–ಮತ್ತೆ?

ಗುಂಡ–ನಾನು ಯಾರ ಸಂತೋಷಕ್ಕೋಸ್ಕರ ಈ ಸರ್ತಿ ಪರೀಕ್ಷೆ ಪ್ಯಾಸು ಮಾಡಬೇಕು ಅಂತ ಇದ್ದೆನೋ, ಅವರಂತೆ ಅಂದಿದ್ದು–

ರಂಗ–ನಿನ್ನ ಫಾದರ್ರು?

ಸುಬ್ಬ–ನಿನ್ನ ತಂದೆ?

ಗುಂಡ–ನಮ್ಮ ಅಪ್ಪ. "ಕಾಫೀಗೆ ಬರಲಿಲ್ಲವೇ?" ಅಂತ ಮದರ್ ಕೇಳಿದರೆ. "ಬೆಕ್ಕಿನ ಹಾಗೆ ಬಂದು ಬಸಿದುಕೊಂಡು ಹೋಗುತ್ತಾನೆ". ಅಂದರಂತೆ. ಈಗ ನನ್ನ ಸಿಸ್ಟರ್ರನ್ನು ನೋಡೊಕ್ಕೆ ಮೈಡಿಯರ್ ವುಡ್‌ಬಿ ಬ್ರದರ್ ಇನ್‌ಲಾನೂ ಅವನ ಜೊತೆಗೆ ಒಬ್ಬ ಫ್ರೆಂಡೂ ಬರುತ್ತಾರಂತೆ. ಅವರು ಈ ಕಡೆಗೆ ಇದೇ ಮೊದಲು ಸರ್ತಿ ಬರುತ್ತಿರುವುದು. ಕಾರು ಸ್ಟೇಷನ್ನಿಗೆ ಹೋಗಿದೆಯಂತೆ. ಮದರ್ರು ನನ್ನನ್ನೂ ಕಳುಹಿಸೋಣ ಅಂದಿದ್ದಕ್ಕೆ, ಲೋ, ರಂಗಸ್ವಾಮೀ,–"ಈ ಕಪೀಶ್ವರ ಅಲ್ಲಿ ಹೋಗಿ ಅನಾಹುತ ಮಾಡುತ್ತಾನೆ. ಅವರಿರುವತನಕ ಬಾಲ ಮುದುರಿಕೊಂಡಿದ್ದರೆ ಪುಣ್ಯ" ಅಂದರಂತ್ರೋ, ಅಪ್ಪ! ನಮ್ಮ ಫಾದರ್ರು, ನಮ್ಮ ತಂದೆ !

ಸುಬ್ಬ–ತ್ಸು ತ್ಸು ತ್ಸು, ನೋಡಿದೆಯಾ, ನೋಡಿದೆಯಾ, ಕ್ರಿಯೆ ಅನ್ನುವುದು ಹೇಗಿದೆ ದೊಡ್ಡವರಲ್ಲಿ? ಆಂ? ಏನೋ ಪಾಪ, ದೊಡ್ಡದಾಗಿ ಆಸೆ ಇಟ್ಟುಕೊಂಡಿದಾರಲ್ಲ, ಹೋಗಿಕೊಳ್ಳಿ ಪ್ಯಾಸು ಮಾಡೋಣ ಅಂತ ಹೋದರೆ, ನೋಡಿದೆಯಾ? ಆಂ? ಹೀಗೇನೋ ಕಲಿಗಾಲ! "ಕೃತಘ್ನತೆಗೆ ಠಾವಿಲ್ಲೆಂದನಾ ಕರ್ಣ"–"ಇದೆ ಕಾಣೋ, ನೋಡು ಬಾ" ಅಂತ ಎಳೆದುಕೊಂಡು ಬಂದು ತೋರಿಸಬೇಕು...ಸರಿ, ಈಗೇನು ಮಾಡಬೇಕು ಅಂತ ಇದ್ದೀಯಾ?

ಗುಂಡ–ನಾನು ಈ ಸರ್ತಿ ಪರೀಕ್ಷೆ ಪ್ಯಾಸು ಮಾಡೊಲ್ಲ.

ರಂಗ–ಪರೀಕ್ಷೆ ನೆಗೆದು ಬಿದ್ದುಹೋಯಿತು. ಬಿಡೋ, ಇಷ್ಟೇ ಆದರೆ ಎಲ್ಲಿ ಸಾಕೋ? ಗುಂಡ, ನೀನು ನಮ್ಮ ಮುಖಂಡ, ನನಗೆ ಶಿಖಂಡಿತನ ಸಹಿಸೊಲ್ಲ. ನೀನು ಗಂಡಸು. ಅಂದಿದ್ದು ಅನ್ನಿಸಿಕೊಂಡು ಬಿದ್ದಿರೊಕ್ಕೆ ಹೆಂಗಸಲ್ಲ.

ಸುಬ್ಬ–ಪೆರುಮಾಳ್ರೇ, ನೀವು ಯಾವ ಕಾಲದ ಮಾತಾಡುತ್ತಾ ಇದ್ದೀರಿ? ಹೆಂಗಸರೂ ಈವಾಗ ಬಿದ್ದಿರೊಲ್ಲ.



ಗುಂಡ–ಒಪ್ಪಿದೆ. ಏನು ಮಾಡಬೇಕು ಅನ್ನುತ್ತೀಯೋ?

ರಂಗ–ಕೇಳುತ್ತೀಯಲ್ಲೋ! ಅವರೇ ಹೇಳಿಕೊಟ್ಟಿದ್ದಾರಲ್ಲೋ ! ಏನು ಮಾಡಬಹದು ಅಂತ! ಎತ್ತೋ ವಾನರಾವತಾರಾನ! ಜ್ಞಾಪಿಸಿಕೋ ನಿಮ್ಮ ಮಧ್ವಾಚಾರ್ಯರ ಪುಪೂರ್ವಾವತಾರಾನ.

ಸುಬ್ಬ–ಪುಪೂರ್ವ?

ರಂಗ–ಪೂರ್ವಕ್ಕೆ ಪೂರ್ವ ಪುಪೂರ್ವ....ಹನುಮಂತರಾಯ ಅಂತಲ್ಲವೇನೋ ಅವರಂದದ್ದು? ಮಧ್ವನ ಪೂರ್ವ ಭೀಮ. ಭೀಮನ ಪೂರ್ವ ಹನುಮ! ನೀನೇ ಹನುಮಂತ ! ನಾನು ಸುಗ್ರೀವ !

ಸುಬ್ಬ–ನಾನು ಜಾಬುವಂತ

ರಂಗ–ರೈಟ್, ರೈಲ್ವೇ ಸ್ಟೇಷನ್ನೇ ಲಂಕಾಪಟ್ಟಣ.

ಗುಂಡ–ಇಲ್ಲೇ ತೊಗೊಂಡುಬಿಡೋಣ ಬೆಂಕಿಪೊಟ್ಣ.

(ಎಲ್ಲರೂ ಎದ್ದು ಬಿಲ್ ಪಾವತಿಮಾಡಿ)

ಒಂದು ಬೆಂಕಿ ಪೆಟ್ಟಿಗೆ, ಪ್ಲೀಸ್,

ಸುಬ್ಬ–ಅಳಿಯ ಗೆಳೆಯ ಆಗಮಿಸಲಿ–

ರಂಗ–ಆಗಮಿಸಲಿ.

(ಎನ್ನುತ್ತಾ ಮೂವರೂ ಹೋಟೆಲ್ ಬಿಟ್ಟು ರಸ್ತೆಗೆ ಬರುವರು)

ಗುಂಡ–ಆಗಮಿಸಲಿ, ಆಗ–

ಸುಬ್ಬ–ಏನು ಬೇಕಾದರೂ ಮಾಡು. ನೀನುಂಟು–

ರಂಗ–ನಿನ್ನ ಹಿಂದೆ ನಾವು ಉಂಟು–

ಗುಂಡ–ಮಂಡೆಯಲ್ಲಿ ಮಿದುಳುಂಟು, ಮೇಲೆ ದೇವರುಂಟು. ಗುಂಡ ಉಂಡಾಡಿ ಆದರೂ ಭಂಡ ಅಲ್ಲ, ಪ್ರಚಂಡ ಅಂತ–

ಸುಬ್ಬ, ರಂಗ–ತೋರಿಸಿಬಿಡಬೇಕು.

ಗುಂಡ–ನಡೆಯಿರಿ, ಟೈಂ ಆಗಿ ಹೋದೀತು !

ಸುಬ್ಬ–"Mischief, thou art afoot,

Take whar course thou wilt"

ಗುಂಡ–ತ್ಸು ತ್ಸು ತ್ಸು ತ್ಸು ತ್ಸು ತ್ಸು ಅದು ಇಂಗ್ಲಿಷ್ಷಾಯಿತು. ಕನ್ನಡದಲ್ಲಿ ಹೇಳೋ–

"ಚೇಷ್ಟೆ, ನಿನ್ನ ಸೃಷ್ಟಿಯದಾಯ್ತು

ಇಷ್ಟ ಬಂದೆಡೆ ಪೋಗುಂ–"

ಎಂದಂ–

ಸುಬ್ಬ, ರಂಗ–ಕವಿ ಕುಲ ತಿಲಕಂ ಗುಂಡಂ.

(ನಿಷ್ಕ್ರಮಿಸುವರು)

**ದೃಶ್ಯ ೫**

[ಕತ್ತಲು, ಇನ್ನೊಂದು ರಸ್ತೆ. ರಾಮೂ ಮತ್ತು ಕಿಟ್ಟಿ ಒಂದೊಂದು ಸೂಟ್‌ಕೇಸ್ ಹಿಡಿದು ಪ್ರವೇಶಿಸುವರು]

ಕಿಟ್ಟಿ–ಯಾವ ಊರ ಮದುವೆ ಮಾಡಿಕೊಳ್ಳಾಟವಯ್ಯಾ ಇದು? ಮಾವನ ಮನೆಗೆ ಮೊದಲನೆ ಮೆರವಣಿಗೆಯೇ ಖಾಲಿ ಪಾದಗಳಲ್ಲೇ ಬೆಳೆಸಬೇಕಾಯಿತಲ್ಲೋ, ಅಳಿಯ !

ರಾಮು–ಏನು ಮಾಡುವುದೋ ಗೆಳೆಯ? ಸ್ವಲ್ಪ ದೂರ ಮಸಾಲೆ ಮೋಟಾರಿನಲ್ಲಿ ಸಾಗಿತಲ್ಲೋ! ಹಾಳು ಕುದುರೆ ಲಾಳ ಸಿಕ್ಕಿ, ಟೈರು ಬರ್‌ಸ್ಟಾದರೆ ಯಾರು ತಾನೇ ಏನು ಮಾಡೊಕ್ಕಾಗತ್ತೋ?

ಕಿಟ್ಟಿ–ಅದ್ದೂ ವರಸೆ! ಹ್ಞಂ! ನೀನೂ ಒಬ್ಬ ಅಳಿಯನೇ! ಅಲ್ಲವೋ, ಲೇಯ್, ಮದುವೆಗೆ ಮುಂಚೆಯೇ ಇಷ್ಟು ಬೇಮುತುವರ್ಜಿ ಆದರೆ ಆಮೇಲೆ ಹೇಗೋ?

ರಾಮು–ಹೋಗಲಿ, ಈಗ ಅವರು ಏನು ಮಾಡಬೇಕಾಗಿತ್ತು ಅನ್ನುತ್ತೀಯೋ?

ಕಿಟ್ಟಿ–ಹಾಗೆ ಕೇಳು, ರಾಜಾ, ಹೇಳುತ್ತೀನೀ. ಟೈರಿಗೆ ಟೈರು ಸ್ಟೆಪನಿ ಇಟ್ಟು ಕಾರು ಕಳುಹಿಸುವುದು ಸಾಮಾನ್ಯವಾದ ಸಂದರ್ಭಗಳಲ್ಲಿ. ಈ ಅಳಿಯ ಗೆಳೆಯನ ಸ್ವಾಗತಕ್ಕೆ ಕಾರಿಗೆ ಕಾರೇ ಸ್ಟೆಪನಿಯಾಗಿ ಬರಬೇಕಾಗಿತ್ತು. ಲಗ್ನ ಪತ್ರಿಕೆಗಳನ್ನು ಬರೆಯಿಸುವಾಗ ಶಿವನಸಮುದ್ರದ ದೀಪ ಆರಿ ಅಪಶಕುನ ನುಡಿದೀತಿ ಅಂತ ನಂದಾದೀಪ ಹಚ್ಚಿಟ್ಟಿರುತ್ತಾರೆ ನೋಡು, ಹಾಗೆ, ಒಂದಕ್ಕೆ ಎರಡು ಕಾರು ಬರಬೇಕಿತ್ತು ಸ್ಟೇಷನ್ನಿಗೆ. ಹೆಣ್ಣು ಕೊಡುವುದು ಅಂದರೆ ಹಣ್ಣು ನುಂಗುವ ಹಾಗಲ್ಲವೋ! ಅಲ್ಲದೆ, "ನಮ್ಮ ಗಣೇಶನ ಮಗ, ನನಗೂ ಅವನಿಗೂ ಗಳಸ್ಯ ಕಂಠಸ್ಯ" ಅನ್ನುವವರು, ಬರುತ್ತಿರುವವರು ನಾವು, ಕಾಣದ ಸ್ಥಳ, ನೋಡದ ಜನ, ನಮ್ಮನ್ನ ಮೀಟ್ ಮಾಡೊಕ್ಕೆ ಮೋಟಾರ್ ಡ್ರೈವರ್ ಬಿಟ್ಟು ಮನೆ ಮಂದಿಯವರು ಒಬ್ಬರೂ ಬರದೆ ಬೆಚ್ಚಗೆ ಕೂತುಬಿಡಬಹುದೇನಯ್ಯ? ಉಂಟೇನಯ್ಯ?



ರಾಮು–ಅದು ಒಪ್ಪಿದೆ. ಯಾರಾದರೂ ಬರಲೇ ಬೇಕಿತ್ತು. ಆದರೆ, ಮನೆಯಲ್ಲಿ ಯಾರು ಯಾರಿದಾರೋ ಇಲ್ಲವೋ, ಏನು ತಾಪತ್ರಯವೋ ಯಾರಿಗೆ ಗೊತ್ತು? ಅಲ್ಲದೆ, ಕಿಟ್ಟೀ, ನಮಗೆ ಈ ಅವಸ್ಥೆ ಬರುತ್ತೆ ಅಂತ ಅವರಿಗೆ ಹೇಗೆ ಗೊತ್ತಾಗಬೇಕೋ?

ಕಿಟ್ಟಿ–(ತಲೆಯಾಡಿಸುತ್ತಾ) ರಾಮೂ, ನಿನ್ನಂಥ ಅಳಿಯ ಸಿಕ್ಕುವುದಾದರೆ, ನೂರು ಹೆಣ್ಣು ಮಕ್ಕಳಿದ್ದರೂ ಯಾರೂ ಕೊರಗೊಲ್ಲವೋ! ಏನು ಮಾಡಿದರೂ ಮಾಫಿ.

ರಾಮು–ಹಾಗಾದರೆ ನೀನು ಏನು ಹೇಳುವುದು? ಮನೆ ಮನೆಯೇ ಸಂಸಾರ ಸಮೇತ ಸ್ಟೇಷನ್ನಿಗೆ ಬಂದು, ನಾವು ಗಾಡಿಬಿಟ್ಟು ಇಳಿಯುತ್ತಲೇ, ಹಸೆಗೆ ಕರೆದ ಹಾಡಲ್ಲ, ಊರಿಗೆ ಕರೆದ ಪದ್ಯ, ಸ್ವಾಗತ ಗೀತೆ ಹಾಡಿ, ಹಾರಹಾಕಿ, ತುರಾಯಿ ಕೊಟ್ಟು, ಪನ್ನೀರು ಚುಮುಕಿಸಿ, ಆರತಿ ಎತ್ತಿ, ಫೋಟೋ ತೆಗೆದು, ಓಲಗ–ಬ್ಯಾಂಡು, ಬಾಣ–ಬಿರುಸು ಸಮೇತ ಒಂದು ಒಂದು ಮರಿ ವರಪೂಜೆ ಮೆರವಣಿಗೆ ಹೊರಡಿಸಬೇಕಾಗಿತ್ತು ಅನ್ನುತ್ತೀಯೇನೂ?

ಕಿಟ್ಟಿ–ಇಲ್ಲ, ಇಲ್ಲ, ಯಾಕೆ ಪಾಪ? "ಅಯ್ಯಾ, ನಮ್ಮ ಹುಡುಗ, ಎಲ್ಲಿ ಹೋಗುತ್ತಾನೆ? ಊರಿಗೆ ಬಂದವಳು ನೀರಿಗೆ ಬರದೆ ಇರುತ್ತಾಳೆಯೇ?–" ಅನ್ನುವ ಹಾಗೆ ಅಂದುಕೊಂಡು, ಆರಾಮವಾಗಿ ಕುರ್ಚಿಯಲ್ಲಿ ತನ್ನ ಪಾಡಿಗೆ ತಾನು ಕೂತು, ನಮ್ಮನ್ನು ಈ ಕಾಡಿನಲ್ಲಿ ಸಿಕ್ಕಿ ಹಾಕಿಸಿ, ಕಣ್ಣು ಕಣ್ಣು ಬಿಡಿಸಲಿ...ನಾನು ಹೇಳಿದೆನಲ್ಲೋ ಹೆಣ್ಣು ಹಡೆದವರ ಪುಣ್ಯ ಅಂತ!

ರಾಮು–ಆಗಲಯ್ಯ, ನನ್ನದೇನೋ ಈ ಪಾಡಾಯಿತಲ್ಲಾ, ನಾಳೆ ತಾವೇನು ಮಾಡುತ್ತೀರೋ ನಾನೂ ನೋಡುತ್ತೇನೆ. ನಿನ್ನ ಹೆಣ್ಣು ಹಡೆದವರ ಪಾಪ!

ಕಿಟ್ಟಿ–ನಾನು....ಉಂ....

ರಾಮು–ಓ, ಐ ಆಮ್ ಸಾರಿ, ನಿನ್ನ ಪಂಕಜಕುಮಾರಿಗೆ ಪೇರೆಂಟ್ಸಿಲ್ಲ, ಮರೆತಿದ್ದೆ. ಕೈಲಾಸಂ ಭಾಷೆಯಲ್ಲಿ, ಅವರು ಸತ್ತು ಬದುಕಿದರು! ಅಂದ ಹಾಗೇ, ಕಿಟ್ಟಿ, ಎಲ್ಲಿದಾರೋ ಈಗ ನಿಮ್ಮ ಅಮ್ಮಾವರು?....(ಕಿಟ್ಟ ದುರುಗುಟ್ಟಿ ನೋಡಲು) ಇವತ್ತಲ್ಲದಿದ್ದರೆ ನಾಳೆ ಆಗುವವರು?

ಕಿಟ್ಟಿ–ಗೊತ್ತಿಲ್ಲಪ್ಪ...ಯಾರೋ ಚಿಕ್ಕಮ್ಮನೋ ದೊಡ್ಡಮ್ಮನೋ ಇದಾರೆ, ಯಾವುದೋ ಊರಿನಲ್ಲಿ, ಅಲ್ಲಿಗೆ ಹೋದರೂ ಹೋಗಬಹುದು ಅಂದಿದ್ದಳು. ಹೊರಟು ಹೋಗಿರಬೇಕು ಅನ್ನಿಸುತ್ತೆ. ಇನ್ನೂ ಕಾಗದವೂ ಬಂದಿಲ್ಲ.

ರಾಮು–ಏನು? ಕಾಗದ ಬಂದಿಲ್ಲ? ಓಹೋ, ಇದು ಬೇರೆ ಇಟ್ಟುಕೊಂಡಿದ್ದೀರೇನೋ ಪೂರ್ವಪ್ರಾಣಿಗ್ರಹಣ ಪತ್ರಲೇಖನ–? ನಳದಮಯಂತಿಯರ ಹಾಗೆ? ಅವರದೂ ಅಂಚೆ ಮೂಲಕ, ನಿಮ್ಮದೂ ಅಂಚೆ ಮೂಲಕ!

ಕಿಟ್ಟಿ–(ನಗುತ್ತಾ) ಆದರೆ ಆ ಹಾರುವ ಅಂಚೆ...ಬಿಟ್ಟಿ, ನಮ್ಮ ಅಂಚೆಯವನು ಒಂದೊಂದು ಕಾಗದಕ್ಕೂ ಸ್ಟಾಂಪು ಖರ್ಚು ಕಕ್ಕಿಸುತ್ತಾನೆ.

ರಾಮು–ಉಂ...ಕಿಟ್ಟೀ, ನೀವು ಪೂರ್ವ ಕಾಲದ ಪದ್ಧತಿಯನ್ನು ಪಾಲಿಸಿಕೊಂಡು ಬರುತ್ತಿದ್ದೀರಿ; ಅಲ್ಲದೆ ಸ್ವಯಂವರದ ಬಾಬತ್ತು ಬೇರೆ. ನಿಮ್ಮ ಕಡೆ ನೀನೇ ವರ, ತಂದೆ, ತಾಯಿ, ಬಂಧು, ಬಳಗ; ಅವಳಿಗೂ ಅಪ್ಪ ಇಲ್ಲ, ಅಮ್ಮ ಇಲ್ಲ....ನೀನು ಹೇಳಿದ ಚಿಕ್ಕಮ್ಮನೋ ದೊಡ್ಡಮ್ಮನೋ–ಲೆಕ್ಕಕ್ಕಿಲ್ಲ. ನಮಗೆ ಯಾಕೆ ನೀವೂ ಕಂಪೆನಿ ಕೊಡಕೂಡದು?

ಕಿಟ್ಟಿ–ಕಂಪೆನಿ?

ರಾಮು–ಅಂದರೆ ಮದುವೆ ಜತೆಗೆ ಮದುವೆ ಮಾಡಿಕೊಂಡು, ಹನಿಮೂನಿನ ಟ್ರಿಪ್ಪಿಗೆ–ಕಂಪೆನಿ–?

ಕಿಟ್ಟಿ–ಊಹೂ....ಯಾಕೆಂದರೆ, ನೀನು ಹೇಳಿದ ಹಾಗೇ ನಾನು ಸಂಪ್ರದಾಯ ಪಾಲಿಸುತ್ತಿರುವವನು. ತಾಳಿ ಕಟ್ಟೋಕ್ಕೆ ನಾನಿದ್ದರೂ, ಹೆಣ್ಣು ಒಪ್ಪಿಸಿಕೊಳ್ಳೋಕ್ಕೆ–ಬೀಗ ಬೀಗಿತ್ತಿಯರು ಎಸ್ಸೆಂಷಿಯಲ್ಲಲ್ಲೋ! ನಿಮ್ಮ ಮದುವೆ ಆಗಲಿ. ನೀವಿಬ್ಬರೇ ಅಫಿಷಿಯೇಟ್ ಮಾಡಿ–

ರಾಮು–ಆಲ್ ರೈಟ್...ಆದರೆ... ಕಿಟ್ಟೀ.

ಕಿಟ್ಟಿ–ಆಂ?

ರಾಮು–ನಾವು ಪೆದ್ದು ಪೆದ್ದಾಗಿ ಮುಂದಿನ ಕನಸುಗಳನ್ನು ಕಾಣುತ್ತಾ ಇದ್ದೀವಿ, ಈಗ ಸಧ್ಯಕ್ಕೆ ನಾವು ಎಲ್ಲಿದ್ದೇವೆ, ಏನು ಹಾದಿಗೀದಿ ತಪ್ಪಿದ್ದೇವೋ–

ಕಿಟ್ಟಿ–ಕರ್ರೆಕ್ಟ್–

ರಾಮು–ಅಷ್ಟು ಹೊತ್ತಿನಿಂದ ನಡೆಯುತ್ತಾ ಇದ್ದೀವಿ, ಒಂದು ನರಪ್ರಾಣಿ ದರ್ಶನವೂ ಆಗಲಿಲ್ಲ–

ಕಿಟ್ಟಿ–ನರಪ್ರಾಣಿ ದರ್ಶನವಾಗದಿದ್ದರೆ ನೆಗೆದುಬಿದ್ದು ಹೋಯಿತು. ಕಾಡುಪ್ರಾಣಿ ದರ್ಶನ ಯಾವುದೂ ಪ್ರಾಪ್ತವಾಗಲಿಲ್ಲವಲ್ಲೋ, ಅಷ್ಟೇ ನಮ್ಮ ಪುಣ್ಯ. ನೀನೇನು ಬೇಕಾದರೂ ಹೇಳು. ಈ ಮಲೆನಾಡು, ಕವಿಗಳಿಗೆ ಪದ್ಯ ಬರೆಯೊಕ್ಕೆ ಲಾಯಖ್ಖೇ ವಿನಾ, ನಮ್ಮ ಹಾಗೆ ಊರು ಬಿಟ್ಟು, ಹೆಣ್ಣಿನ ಕುತ್ತಿಗೆಗೆ ತಾಳಿ ಕಟ್ಟುತ್ತೇವೆ ಅಂತ



ಬಂದು, ಈ ಕಾಡಿನಲ್ಲಿ ಹುಲಿಗೋ ಕರಡಿಗೋ ತಲೆ, ಮೈ, ಜನಿವಾರ ಕೊಟ್ಟು–(ಶಬ್ದ ಕೇಳಿ) ಏನೋ ಶಬ್ದ?

(ನೇಪಥ್ಯದಲ್ಲಿ ಗುಂಡ, ಸುಬ್ಬ, ರಂಗಸ್ವಾಮಿ ಮಾತಾಡುತ್ತಿರಲು)

ರಾಮು–ಮುಂದಕ್ಕೆ ಹೋಗಬೇಡ, ಯಾರೋ ಏನೋ–

ಕಿಟ್ಟಿ–ಯಾರಾದರೇನೋ? ನರಮನುಷ್ಯರು ! ನರಪ್ರಾಣಿಗಳು–ಬದುಕಿದೆವು ಬದುಕಿದೆವು ಕಾಡುಪ್ರಾಣಿಗಳ ದರ್ಶನದ ಭಯ ಹಿಂಗಿತು–(ಗುಂಡ–ಸುಬ್ಬ–ರಂಗಸ್ವಾಮಿ ಪ್ರವೇಶಿಸುವರು) ಯಾರೋ ಇವರು ತ್ರಿಮೂರ್ತಿಗಳು?

ರಂಗ–ಲ್ರೋ, ಅಲ್ಲಿ ನೋಡ್ರೋ, ಯಾರೋ ಅವರು ಅಶ್ವಿನಿ ಕುಮಾರರು?

ಸುಬ್ಬ–ಸೂಟು ಕೇಸುಗಳು ಹೊತ್ತುಕೊಂಡು–ಊರಿನಿಂದ ಬರುತ್ತಿರುವವರ ಹಾಗೆ–

ರಂಗ–ರೈಲು ಬಂದು ಬಿಟ್ಟಿರಬೇಕು ಹಾಗಾದರೆ!

ಸುಬ್ಬ–ಉಹು...ಬಂದಿದ್ದರೆ...ಕಾರು ಸಿಗಬೇಕಾಗಿತ್ತಲ್ಲ.

ಕಿಟ್ಟಿ–(ಗುಂಡನಿಗೆ) ಏಯ್, ಏಯ್, ಹುಶ್, ಹುಶ್ (ಚಿಟಕಿ ಹೊಡೆಯುತ್ತಾ) ಹುಶ್,. ಹುಶ್–ಬಾರೋ ಇಲ್ಲಿ.

ಗುಂಡ–ನಾನಾ?

ಕಿಟ್ಟಿ–ನೀನೇ, ಯಾಕೆ, ಕಿವಿ ಕಿವುಡೇನೋ ನಿಂಗೆ?

ಗುಂಡ–ಇಲ್ಲ, ಕಣ್ಣು ಕುರುಡು. ಕತ್ತಲು, ಕಾಣಲಿಲ್ಲ. ಅಲ್ಲದೆ–

ಕಿಟ್ಟಿ–ಊಂ?

ಗುಂಡ–ನೀವು ಮನುಷ್ಯರನ್ನ "ಹುಶ್ ಹುಶ್' ಅಂತ ಕೂಗುತ್ತೀರಿ ಅಂತ ನನಗೆ ಗೊತ್ತಾಗಲಿಲ್ಲ.

ಕಿಟ್ಟಿ–ಏನು?

ಗುಂಡ–ಯಾವುದೋ ಮಿಣುಕು ಹುಳವನ್ನೋ ಮುಳ್ಳು ಹಂದಿಯನ್ನೋ ಕರೆಯುತ್ತಿರಬಹುದು ಅಂತ ನಾನು–

ಕಿಟ್ಟಿ–ಮಿಣುಕು ಹುಳ? ಮುಳ್ಳು ಹಂದಿ? ನಾನು ಅವನ್ನ?...(ನಕ್ಕು) ಭಲೆ, ಯಾರೋ ನೀನು?

ಗುಂಡ–ತಾವು?

ಕಿಟ್ಟಿ–ನಾವು...ನಾವು...ಹೀಗೇ ಹೋಗುತ್ತಾ ಇದ್ದೇವೆ–

ಗುಂಡ–ಹೌದಾ? ನಾವು...ನಾವು...ನಾವು ಹೀಗೇ ಬರುತ್ತಾ ಇದ್ದೇವೆ. (ಉಂಡಾಡಿಗಳಿಗೆ) ಬನ್ರೋ–

ಕಿಟ್ಟಿ–ತಡಿಯೋ....ಏನೋ ಇದು? ಕೇಳಿದ್ದಕ್ಕೆ ಸರಿಯಾಗಿ ಉತ್ತರ ಹೇಳೊಕ್ಕೆ ಬರೊಲ್ಲವೇನೋ ನಿನಗೆ?

ಗುಂಡ–ಬರತ್ತೆ. ಆದರೆ ತಾವು ಯಾರು ಅಂತ ನಾನು ಕೇಳಿದ್ದಕ್ಕೆ ತಾವೆಷ್ಟು ಸರಿಯಾಗಿ ಉತ್ತರ ಹೇಳಿದಿರಿ?

ಕಿಟ್ಟಿ–ಶಹಬ್ಬಾಸ್ !....ಶಹಬ್ಬಾಸ್ ! ಭಲೆ ಬಲು ಚುರುಕಿದ್ದೀಯ ನೀನು. ಎಷ್ಟು ವರುಷ ನಿನಗೆ?

ಗುಂಡ–(ನೆಟ್ಟಗೆ ಸೆಟೆದು ನಿಂತು) ಎಷ್ಟಿರಬಹುದು? ನೋಡಿ, ಅಂದಾಜು ಹಾಕಿ.

ರಾಮು–ಕಿಟ್ಟಿ, ಬಾ, ಬಾ, ನೀನು ಈ ಕಡೆ ಬಾ....ನಾನು ಮಾತಾಡಿಸುತ್ತೇನೆ...ಅಯ್ಯಾ, ನಾವು ಮೈಸೂರಿನಿಂದ ಬಂದಿದ್ದೇವೆ.

ಗುಂಡ–ಆಂ?

ಸುಬ್ಬ–ಎಲ್ಲಿಂದ?

ರಂಗ–ಮೈಸೂರಿನಿಂದಲೇ?

ಗುಂಡ–ರೈಲು ಬಂದು ಬಿಡಿತಾ?

ರಾಮು–ಬಂತು.

ಗುಂಡ–ಓ...

ರಾಮು–ನಾವು ಈ ಊರಿನಲ್ಲಿ ಒಬ್ಬರ ಮನೆಗೆ ಹೋಗಬೇಕಾಗಿದೆ. ಒಂದು ಒಂದು ಇಂಪಾರ್ಟೆಂಟ್ ಕೆಲಸ ಅಂತ ಇಟ್ಟುಕೋ.

ಸುಬ್ಬ–ಓಹೋ!

ರಂಗ–ಹುಂ–?

ಗುಂಡ–ಸಾರ್, ತಮ್ಮ ಹೆಸರು, ಹೇಳಬಹುದಾದರೆ–

ರಾಮು–ಅಯ್ಯೋ...ಹೇಳದೆ ಏನಯ್ಯ? ನನ್ನ ಹೆಸರು ರಾಮರಾವ್ ಅಂತ.

ಗುಂಡ–ರಾಮರಾವ್? ಗುಡ್ಡು.... ಗುಡ್ಡು...ತುಂಬ ಸಂತೋಷ...ತಾವು ಯಾರ ಮನೆಗೆ ಹೋಗಬೇಕು–ಹೇಳಬಹುದಾದರೆ–

ಕಿಟ್ಟಿ–ಅಲ್ಲವೋ, ನನ್ನ ಕೂಡ ಹೀಗೆ ಮಾತಾಡೊಕ್ಕೆ ಏನಾಗಿತ್ತೋ ನಿನಗೆ?

ಗುಂಡ–ಇವರ ಹಾಗೆ ನನ್ನನ್ನು ಮಾತಾಡಿಸೊಕ್ಕೆ ನಿಮಗೇನಾಗಿತ್ತೋ, ನಿಮ್ಮ ಕೂಡ ಮಾತಾಡೊಕ್ಕೂ ನನಗೂ ಅದೇ ಆಗಿತ್ತು. (ರಾಮುಗೆ) ಮಿಸ್ಟರ್ (ಕಿಟ್ಟಿಯನ್ನು ತೋರಿಸುತ್ತಾ) ಇವರು ಯಾರು?

ರಾಮು–ನನ್ನ ಸ್ನೇಹಿತ, ಕೃಷ್ಣಮೂರ್ತಿ ಅಂತ.



ಗುಂಡ–ಏನು ಪ್ಯಾಸು ಮಾಡಿದ್ದಾರೆ?

ರಾಮು–ಬಿ.ಎ.

ಗುಂಡ–ಅದಕ್ಕೇ ಬಾಯಿ, ಜಾಸ್ತಿ.

ರಾಮು–ಅಲ್ಲಯ್ಯಾ, ಹಸಿವು ಜಾಸ್ತಿ. ನಾವು ಬೆಳಗ್ಗೆ ಊರು ಬಿಟ್ಟವರು. ಈಗ ನಡೆದದ್ದು ಬೇರೆ. ನಾವು ಗೋವಿಂದರಾಯರು ಅಂತ ಇದಾರಂತೆ. ಅವರ ಮನೆಗೆ–

ಗುಂಡ–ಉಂ...

ಸುಬ್ಬ, ರಂಗ–ಹೌದಾ?

ಗುಂಡ–ಶ್...ತಾವು ಗೋವಿಂದರಾಯರ ಮನೇಗೆ ಹೋಗಬೇಕಾಗಿದೆಯಾ?

ರಾಮು–ಹೌದಯ್ಯಾ? ನಿನಗೆ ಗೊತ್ತಾ ಅವರು?

ಸುಬ್ಬ–ಗೊತ್ತು.

ರಂಗ–ಓ, ಗೊತ್ತು.

ಗುಂಡ–ಗೊತ್ತಿಲ್ಲದೆ ಏನು? ಅವರದೂ ನನ್ನದೂ ಒಂದೇ ಗೋತ್ರ. ನಾನು ಹುಟ್ಟಿದಾಗಿನಿಂದ (ಸ್ನೇಹಿತರಿಗೆ) ಏನ್ರೋ, ನನಗೂ ಅವರಿಗೂ ತೀರಾ ಹತ್ತಿರದ....

ರಾಮು–ಹಾಗಾದರೆ ನಿನಗೆ ಚೆನ್ನಾಗೇ ಪರಿಚಯ ಇರಬೇಕು?

ಗುಂಡ–ಇದೆ. ಇದೆ. ಯಾಕೆ, ನಾನು ಅವರ ಮನೆ ಅಂಗಳದಲ್ಲೇ ಬೆಳೆದೆ ಅಂದರೂ ತಪ್ಪಾಗೊಲ್ಲ.

ರಾಮು–ಹಾಗಾದರೆ ತುಂಬ ಸಂತೋಷ. ನಾವು ಅದೃಷ್ಟವಂತರು. ಈಗ ನಾವು ಅವರ ಮನೆಗೆ ಹೇಗೆ ಹೋಗಬೇಕು ಅಂತ ದಾರಿ ತೋರಿಸಿದರೆ ತುಂಬ ಉಪಕಾರ ಮಾಡಿದ ಹಾಗಾಗುತ್ತಯ್ಯಾ.

ಗುಂಡ–ಅಲ್ರೀ, ನೀವು ಅದರ ಮನೇಗೆ ಬರುತ್ತೀರಿ ಅಂತ ಅವರಿಗೆ ಗೊತ್ತಿದೆಯಾ?

ರಾಮು–ಗೊತ್ತು, ಗೊತ್ತು.

ಗುಂಡ–ಹಾಗಿದ್ದರೆ, ಅವರ ಮನೆಯಲ್ಲಿ ಒಳ್ಳೆ ಕಾರಿದೆ. ಕಳುಹಿಸಬೇಕಾಗಿತ್ತಲ್ಲಾ ಸ್ಟೇಷನ್ನಿಗೆ?

ರಾಮು–ಕಳುಹಿಸಿದ್ದರು.

ಕಿಟ್ಟಿ–ಆದರೆ ಮಧ್ಯ, ಟೈರು ಕುದುರೆ ಲಾಳಕ್ಕೆ ಸಿಕ್ಕಿ ಬರ್ಸ್ಟ್ ಆಗಿ ಹೋಯಿತು.

ಗುಂಡ–ಆಂ? ಲಾಳ ಬರ್ಸ್ಟ್ ಆಯಿತೇ?

ರಾಮು– (ನಕ್ಕು) ಲಾಳ ಅಲ್ಲಯ್ಯಾ.

ಗುಂಡ–ಅಯ್ಯೋ, ಕುದುರೇನಾ?

ರಾಮು–ಛೀ, ಛೀ, ಕುದುರೆ ಅಲ್ಲಯ್ಯಾ? ಕುದುರೆ ಲಾಳಕ್ಕೆ, ಟೈರು ಸಿಕ್ಕಿ–

ಕಿಟ್ಟಿ–ಟೈರು, ಟೈರು ಬರ್ಸ್ಟ್ ಆಗಿದ್ದು.

ರಾಮು–ಆ ಡ್ರೈವರ್ರು, "ಸ್ಟೆಪನಿ ಇದೆ. ಕಾಲು ಗಂಟೆಯಲ್ಲಿ ಹಾಕುತ್ತೀನಿ" ಅಂದ. "ಮನೆ ಎಷ್ಟು ದೂರ?" ಅಂತ ಕೇಳಿದೆವು. "ಹತ್ತಿರವೇ ಸಾರ್, ಒಂದು ಮೈಲಿಯ ಒಳಗೇ" ಅಂದ.

ಗುಂಡ–ಉಂ?

ಕಿಟ್ಟಿ–ನಿಮ್ಮ ಮಲೆನಾಡು ಮಗ್ಗಿಯಲ್ಲಿ ಮೈಲಿಗೆ ಇಪ್ಪತ್ತನಾಲ್ಕು ಫರ್ಲಾಂಗುಗಳೋ ಏನೋ–

ರಾಮು–ನಾವು ನಡೆಕೊಂಡು ಹೋಗುತ್ತಿರುತ್ತೇವೆ ಅಂತ ಹೇಳಿ ಹೊರಟವರು–

ಕಿಟ್ಟಿ–ನಡಿಯುತ್ತಲೇ ಇದ್ದೇವೆ.

ಗುಂಡ–ಮನೆ ಸಿಗಲಿಲ್ಲ?

ಕಿಟ್ಟಿ–ಮನುಷ್ಯರೂ ಸಿಗಲಿಲ್ಲ. ನೀವೇ–

ಗುಂಡ–(ನಗುತ್ತಾ) ಥ್ಯಾಂಕ್ಸ್.

ರಾಮು–ಯಾಕೆ?

ಗುಂಡ–ಅಲ್ಲ, ಆವಾಗ ಹುಶ್ ಹುಶ್ ಅಂದವರು ಈಗ ನಮ್ಮನ್ನು ಮನುಷ್ಯರು ಅಂದಿದ್ದರೆ ಥ್ಯಾಂಕ್ಸ್ ಅಂದೆ....ಉಂ...ಈಗ–

ರಾಮು–ಈಗ ನಾವು ದಾರಿ ತಪ್ಪಿದೇವೇನೋ ಅಂತ ಅನುಮಾನ ಪಡುತ್ತಾ ಇದ್ದೆವು–ನಿಮ್ಮನ್ನು ಕಂಡೆವು.

ಗುಂಡ–ಹೌದಾ? ತ್ಸು ತ್ಸು ತ್ಸು...ಅನುಮಾನ ಬಹಳ ಕೆಟ್ಟದ್ದು, ಸಾರ್...ಅದು ಒಂದು ಮನೋರೋಗ. ತಕ್ಷಣ ವಾಸಿ ಮಾಡಬೇಕು. ಇಲ್ಲದಿದ್ದರೆ ನಮ್ಮನ್ನೇ ತಿಂದುಬಿಡುತ್ತೆ ಅದು. (ಸ್ನೇಹಿತರಿಗೆ) ಅಲ್ಲವೇನ್ರೋ?

ಸುಬ್ಬ–ಹೌದು.

ರಂಗ–ಪರಿಹಾರ ನಾಳೆ ಅನ್ನಬಾರದು.

ಗುಂಡ–ಅಲ್ಲವಾ? (ರಾಮೂ ಕಿಟ್ಟಿಗೆ) ನಮ್ಮ ಕೈಯಲ್ಲಿ ಆಗುವಷ್ಟು ನಾವು ಮಾಡುತ್ತೀವಿ, ಸಾರ್...ಈಗ ತಾವು ಎಲ್ಲಿಂದ ಬಂದ್ರಿ ಗೊತ್ತಿದೆಯೇ?

ರಾಮು–ಊಹು. ಅಲ್ಲೊಂದು ಮೂಲೆ ಹೀಗೆ ತಿರುಗಿತು.



ಗುಂಡ–ಊಹು. ಉಪಯೋಗವಿಲ್ಲ. ಮಲೆನಾಡಿನಲ್ಲಿ ಮೂಲೆಗಳು ಹೀಗೆ ತಿರುಗುತ್ತಲೇ ಇರುತ್ತವೆ. ನೀವು "ಹೀಗೆ ತಿರುಗಿತು" ಅಂದಿರಿ. ಇನ್ನೂ ಹೀೀಗೂ ತಿರುಗುತ್ತವೆ, ಹೆಂಗಸರ ಹೇರ್‌ಪಿನ್ನಿನ ಹಾಗೆ...ಅಷ್ಟಕ್ಕೂ ನಿಲ್ಲದೆ, ಕನ್ನಡದ "ಉ" ಕಾರವಾಗಿ ಕೊಂಬಿನ ದೀರ್ಘವನ್ನೂ ಕೊಡಿಸಿಬಿಡತ್ತೆ–ಅದೂ ಹೋಗಲಿ, ಈಗ ನೀವೆಲ್ಲಿದ್ದೀರಿ ಗೊತ್ತಾ?

ರಾಮು– ಈ ಸ್ಥಳ?

ಗುಂಡ–ಉಂ.

ರಾಮು–ಊಹು. ನಾವಿದೇ ಮೊದಲು ಸರ್ತಿ ಈ ಕಡೆ ಬರುತ್ತಿರುವುದು.

ಗುಂಡ–ಸರಿ. ಇದೂ ಬಿಡಿ. ಈಗ ಹೀಗೆ ಮುಂದೆ ಹೋದರೆ ಏನು ಸಿಗುತ್ತೆ–ಅದಾದರೂ?

ರಾಮು–ಗೊತ್ತಿಲ್ಲಯ್ಯಾ...ಕತ್ತಲೊಂದು ಬಿಟ್ಟರೆ ಏನೂ ಕಾಣೊಲ್ಲ.

ಗುಂಡ–ಸರಿ. ಅಲ್ಲಿಗೆ, ಸಾರ್, ನೀವು ಹಾದಿ ತಪ್ಪಿರುವುದು ಖಂಡಿತ, ಅನುಮಾನ ಇಲ್ಲ.

ರಾಮು–ಕಿಟ್ಟಿ–ಆಂ?

ಗುಂಡ–ಅಲ್ಲವೇ, ಸಾರ್? ಎಲ್ಲಿಂದ ಬಂದಿರಿ, ಗೊತ್ತಿಲ್ಲ; ಎಲ್ಲಿದೀರಿ, ಗೊತ್ತಿಲ್ಲ; ಎಲ್ಲಿಗೆ ಹೋಗುತ್ತೀರಿ, ಗೊತ್ತಿಲ್ಲ; ಕ್ವಾಡ್–ಇ ರಾಟ್–ಡಿಮಾನ್ಸ್ಟ್ರಾಂಡಂ! ಆಗಿ ಹೋಯಿತಲ್ಲಾ, ಸಾರ್!

ರಾಮು–ಅದು ಸರಿಯಯ್ಯಾ–

ಗುಂಡ–ಅದೊಂದೇ ಅಲ್ಲ, ನಾನು ಹೇಳುವುದೆಲ್ಲಾ ಸರಿಯೇ; ಈಗ ನೀವು ಹೆಣ್ಣಿನ್ನ ನೋಡೊಕ್ಕೆ ಬಂದಿರುವವರು–

ರಾಮು–ಕಿಟ್ಟಿ–ಆಂ?

ಗುಂಡ–ಆಶ್ಚರ್ಯವಿಲ್ಲ, ನನಗೆ ಗೊತ್ತು. ನನಗೂ ಆ ಗೋವಿಂದರಾಯರಿಗೂ ಚೆನ್ನಾಗಿ ಗುರುತು ಅಂತ ಹೇಳಲಿಲ್ಲವಾ? ಇವತ್ತು ಸಾಯಂಕಾಲ–

ಸುಬ್ಬ–ಅವರ ಮನೆಯಲ್ಲಿ ಮಾತಾಡಿಕೊಳ್ಳುತ್ತಾ ಇದ್ದರು.

ರಂಗ–ನಾವು ಅಲ್ಲೇ ಆಡಿಕೊಳ್ಳುತ್ತಾ ಇದ್ದವು–

ಗುಂಡ–ಅಲ್ಲವಾ?....(ರಾಮು ಕಿಟ್ಟಿಗೆ) ಈಗ ರೈಲಿನಲ್ಲಿ ಯಾರೋ ಮೈಸೂರಿನಿಂದ ಬರುತ್ತಾರೆ, ಅವರ ಮಗಳನ್ನು ನೋಡೋಕ್ಕೆ ಅಂತ.

ಸುಬ್ಬ–ರೈಲು ಬಂತು–

ರಂಗ–ನೀವು ಬಂದಿದ್ದೀರಿ–

ಗುಂಡ–ನೀವೇ ಆ ಮೈಸೂರಿನವರು ಅಂತ ಊಹಿಸುವುದು ಏನು ಕಷ್ಟ, ಸಾರ್?

ರಾಮು–(ನಗುತ್ತಾ) ಹೌದು, ಹೌದು, ಹೌದು...ನೀವು ಹೇಳಿದ ಹಾಗೇ, ನಾವೇ ಅವರು. ಆದರೆ ನೀನು ಹೇಳಿದ ಗೋವಿಂದರಾಯರು ನಾವು ಕೇಳುವ ಗೋವಿಂದರಾಯರು ತಾನೇ?

ಕಿಟ್ಟಿ–ಇಬ್ಬರು ಹೆಣ್ಣು ಮಕ್ಕಳು–

ರಾಮು–ಒಬ್ಬ ಮಗ–

ಕಿಟ್ಟಿ–ಆ ಮದುವೆ ಹುಡುಗಿ ರೂಪವತಿ, ಗಂಭೀರೆ–

ರಾಮು–ಸುಶೀಲೆ, ಸುಶಿಕ್ಷಿತೆ–ಆದರೆ ಆ ಹುಡುಗ–ಮಗ, ಶುದ್ಧ ಪುಂಡ, ಘಟಿಂಗ–

ಗುಂಡ–ಆಂ?

ಸುಬ್ಬ–ಸಾರ್?

ರಂಗ–ಓ!

ರಾಮು–ಕೆಲಸಕ್ಕೆ ಬರದವನು, ಉಂಡಾಡಿ–

ಗುಂಡ–ಉಂಡಾಡಿ?....ಓ ಹಾಗಂತ ನಿಮಗೆ ಯಾರು ವರ್ತಮಾನ ಕೊಟ್ಟರೋ!...ತ್ಸು ತ್ಸು, ಪಾಪ ! ಪಾಪ ! ಪಾಪ !

ರಾಮು–ಕಿಟ್ಟಿ– ಯಾಕಯ್ಯ?

ಗುಂಡ–(ಸ್ವಗತದಂತೆ) ಹೀಗೂ ಉಂಟೆ ಪ್ರಪಂಚದಲ್ಲಿ? ಆಂ? ಮೋಸಕ್ಕೆ ಮಿತಿಯೇ ಬೇಡವೇ?

ರಾಮು–ಮೋಸ?

ಗುಂಡ–(ಎಚ್ಚೆತ್ತವನಂತೆ) ಓ ! ನಾನು ನನ್ನಷ್ಟಕ್ಕೆ ಮಾತಾಡಿಕೊಳ್ಳುತ್ತಿದ್ದೇನೆ ಅಂತ ಇದ್ದೆ. ಕೇಳಿಸಿಕೊಂಡಿರಿ. ಊಂ....ನಿಮ್ಮನ್ನ ಡಿಸ್ಕರೇಜ್ ಮಾಡೊಕ್ಕೆ ಮನಸ್ಸಿಲ್ಲ, ಆದರೂ ಕೇಳೊಲ್ಲ–

ರಾಮು–ಏನು?

ಕಿಟ್ಟಿ–ಏನದು?

ಗಂಡು–ಆ ಹೆಣ್ಣು, ಸಾರ್–

ರಾಮು–ಹುಂ?

ಗುಂಡ–ಕೊಕ್ಕರೆ !... ಗುಡಿಯ ಮುಂದಿನ ಗರುಡಗಂಬ ನೋಡಿದ್ದೀರಲ್ಲಾ ನೀವು? ಅದಕ್ಕೊಂದು ಸೀರೆ ಒಣಗು ಕಟ್ಟಿ, ಅದೇ ವಧು! ಅದಕ್ಕೆ ನೀವೇ ವರ? ಮನ್ಮಥನ ಹಾಗೆ ಇದ್ದೀರಿ....ಇನ್ನು ಆ ಹುಡುಗ–



ಸುಬ್ಬ–ಅದೇ–

ರಂಗ–ಮಗ–

ಗುಂಡ–ಹೂಂ...ಅವನು ನಿಮ್ಮ ಹಾಗೇ, ಸಾರ್! ಹೊಟ್ಟೆಯ ಕಿಚ್ಚಿಗೋಸ್ಕರ ಜನ ಇಲ್ಲದ್ದು ಸಲ್ಲದ್ದು ಹೇಳುತ್ತಾರೆ. ಹೆಣ್ಣು ಚೆನ್ನಾಗಿದಾಳೆ ಅಂತ ಕೊಂಡಾಡಿ, ಅವಳ ಮುಖಕ್ಕೆ ಫೇಸ್ ಪವ್ಡರ್ ಹಚ್ಚುವ ಉತ್ಸಾಹದಲ್ಲಿ–

ಸುಬ್ಬ–ಆ ಹುಡುಗನ ಮುಖಕ್ಕೆ–

ರಂಗ–ಇಂಕ್ ಪವ್ಡರ್ ಬಳೆದು ಬಿಟ್ಟಿದ್ದಾರೆ.

ಗುಂಡ–ಕರ್ರೆಕ್ಟ್. ನಾವು ನೋಡಿಲ್ಲವಾ ಅವನ್ನ? (ರಾಮು ಕಿಟ್ಟಿಗೆ) ಚಿನ್ನದ ಹಣೆಬರಹ ಕಲ್ಲ ಮೇಲೆ ತಿಕ್ಕಿ ಕಂಡು ಹಿಡಿಯಬಹುದು, ಇವನ ಕ್ಯಾರಟ್ಟಿಲ್ಲ, ಕ್ಯಾರೆಕ್ಟರ್ ಒರೆ ಇಟ್ಟ ಅಕ್ಕಸಾಲಿ ಇನ್ನೂ ಹುಟ್ಟಿಲ್ಲ, ಸಾರ್ ! ಎತ್ತಲಾಗಾದರೂ ಹೋಗಲಿ, ತಮಗೆ ಯಾಕೆ? ತಮಗೆ ಬ್ರದರ್ ಇನ್ ಲಾ, ನಿಮಗೆ ಬೇಕಾದರೂ, ನಮಗೆ ಯಾಕೆ? (ರಂಗ : ಸುಬ್ಬನನ್ನು ನೋಡಲು)

ಸುಬ್ಬ–ಯಾಕೆ ?

ರಂಗ–ಯಾ–ಕೆ?

ಗುಂಡ–ಅಲ್ಲವಾ? (ರಾಮು : ಕಿಟ್ಟಿಗೆ) ಜನಗಳ ಸ್ವಭಾವ ಹೇಳಿದೆ ಅಷ್ಟೆ. ಅವರವರ ಮೂಗಿನ ನೇರಕ್ಕೆ ಅವರವರು ಮಾತಾಡುತ್ತಾರೆ–ತಮ್ಮ ಮೂಗು ನೇರವಾಗಿದೆಯೋ–

ಸುಬ್ಬ–ಇಲ್ಲವೋ, ನೋಡಿಕೊಳ್ಳುವ–

ರಂಗ–ಗೋಜಿಗೆ ಹೋಗೊಲ್ಲ.

ಗುಂಡ–ಬೆಳುಳ್ಳಿ ಕೆಲವರಿಗೆ ಒಗ್ಗರಣೆ, ಕೆಲವರಿಗೆ ವಾಕರಿಕೆ, ಏನು ಮಾಡೊಕ್ಕಾಗುತ್ತೆ? ಅಂತೂ ಈಗ ಮುಖ್ಯವಾಗಿ, ಸಾರ್, ನಮಗೂ ನಿಮಗೂ ಇಷ್ಟು ಪರಿಚಯವಾದ ಮೇಲೆ ತಮ್ಮನ್ನು ಆ ಗೋವಿಂದರಾಯರ ಮನೆಗೆ–

ರಾಮು–ಹುಂ ಹುಂ....ಅಷ್ಟು–

ಗುಂಡ–ಸೇರಿಸುವದು ಸಾಧ್ಯವಿಲ್ಲ, ಸಾರ್...

ಸುಬ್ಬ–ಸಾಧುವಲ್ಲ.

ಗುಂಡ–ಕ್ಕರ್ರೆಕ್ಟ್. ಥಾಂಕ್ ಯೂ.

ರಾಮು–ಏನು–?

ಗುಂಡ–ಹೌದು, ಸಾರ್....ಅದು ಅನ್ಯಾಯ ಮಾಡಿದ ಹಾಗಾಗತ್ತೆ. ನೀವು ಆ ಕೊಕ್ಕರೆಯ ಕುತ್ತಿಗೆಗೆ ತಾಳಿ ತಗಲಿಸುವುದು ಅನ್ಯಾಯ, ಸಾರ್.... ನಾನು ಹೇಳುವುದು ನಿಮ್ಮ ಇಂಟರೆಸ್ಟಿನಲ್ಲೇ. ಆದರೆ....ನಿಮಗೆ ಕೊಕ್ಕರೆಯೇ ಪ್ರಿಯವಾದರೂ, ಅಲ್ಲಿಗೆ ಈಗ ತಲುಪುವುದು– ನಿಮಗೆ ಈ ಕಡೆ ವಿಚಾರ ಗೊತ್ತಿಲ್ಲ. ಪಟ್ಟಣವಾಸದವರು. ಸುಮ್ಮಸುಮ್ಮನೆ ಗಾಬರಿ ಮಾಡುತ್ತೇನೆ ಅಂದುಕೊಳ್ಳಬೇಡಿ. ಇಲ್ಲಿ–

ರಾಮು–ಹುಂ–?

ಕಿಟ್ಟಿ–ಹುಂ–?

ಗುಂಡ–ಹುಲಿ ಕಾಟ ಬಹಳ ಜಾಸ್ತಿ.

ರಾಮು–ಹುಲಿ?

ಕಿಟ್ಟಿ–ಹು–ಹುಲಿ?

ಗುಂಡ–ಹುಲಿ. ಅದರಲ್ಲೂ ಎಂಥ ಹುಲಿ? ಅಂಥಿಂಥವಲ್ಲ ನಮ್ಮವು–ಈ ಕಡೆ ತಲೆ, ಈ ಕಡೆ ಬಾಲ–

ಕಿಟ್ಟಿ–(ನಗುತ್ತಾ) ಅಯ್ಯಾ, ನಮ್ಮ ಮೈದಾನದ ಕಡೆ ಹುಲಿಗಳಿಗೂ ಈ ಕಡೆ ತಲೆ ಆ ಕಡೆ ಬಾಲವೇ ಇರುತ್ತವೆ. ಎರಡೂ ಒಂದೇ ಕಡೆ ಇರೊಲ್ಲ.

ಗುಂಡ–ತ್ಸು ತ್ಸು ತ್ಸು ತ್ಸು ತ್ಸು, (ರಾಮೂಗೆ) ಸಾರ್, ಅದು ಯಾವ ಯೂನಿವರ್ಸಿಟಿ, ಸಾರ್, ಇವರಿಗೆ ಬರಿ ಬಿ.ಎ. ಕೊಟ್ಟಿದ್ದು? ಆನರ್ಸೂ ಸೇರಿಸಬೇಕಾಗಿತ್ತು...ಆಲ್ರೀ, ನಾನು ಹೇಳಿದ್ದು, ನಮ್ಮ ಮಲೆನಾಡ ಹುಲಿಗಳು ರಸ್ತೆಯಲ್ಲಿ ಬಂದುವು ಅಂದರೆ, ಅಷ್ಟು ಅಗಲಕ್ಕೂ, ರಸ್ತೆಯ ಈ ಕಡೆ ತಲೆ, ಆ ಕಡೆ ಬಾಲ ಬೀಸಿ ನಿಂತಿರುತ್ತವೆ ಅಂತ. ರಾಸು, ಭಾರಿ ಅಂತ, ಮೊದಲೆಲ್ಲಾ ಅವು ನಮ್ಮ ಎಮ್ಮೆ–

ಸುಬ್ಬ–ಹುಂ, ಎಮ್ಮೆ, ದನ, ಜಿಂಕೆ ತಿಂದುಕೊಂಡು ತೆಪ್ಪನಿರುತ್ತಿದ್ದವು.

ರಂಗ–ಈಗ ನಾವು ನಮ್ಮ ನಮ್ಮ ಜಾನುವಾರುಗಳನ್ನು ಭದ್ರಮಾಡಿ ಬರೋಬಸ್ತು ಮಾಡಿದೆವು.

ಗುಂಡ–ಈಗ ಜನವಾದರೇನು ದನವಾದರೇನು ಅಂತ ನಮ್ಮ ಮೇಲೇ ತಿರುಗಿವೆ ಅವುಗಳ ದೃಷ್ಟಿ. ವಿಚಾರ ಹೀಗಿದೆ.

ರಾಮು–ತುಂಬ ಸಮಾಧಾನವಾಯಿತಯ್ಯಾ ಕೇಳಿ. ಈಗ ನಮ್ಮ ಗತಿ ಏನು ಹೇಳು. ಹಸಿವೆ, ಪ್ರಾಣ ಹೋಗುತ್ತಾ ಇದೆ, ಹತ್ತಿರವೋ ದೂರವೋ ಅಪಾಯವೋ ಅಲ್ಲವೋ, ಅವರ ಮನೆಗೆ ನಾವು ಹೋಗಲೇ ಬೇಕಲ್ಲಪ್ಪಾ!



ಗುಂಡ–ಯಾಕೆ? ಯಾಕೆ ಅಂತ ನಾನು ಕೇಳುವುದು? ಅವರ ಮನೆಗೇ ಹೋಗಬೇಕು ಅನ್ನುವುದೇನು? ಅಲ್ಲ, ಸಾರ್, ನೀವು ಹುಟ್ಟಿದಾಗಿನಿಂದ ನಿಮ್ಮ ಹಸಿವು ಬಾಯಾರಿಕೆ ಅವರೇ ಏನು ತೀರಿಸುತ್ತಾ ಇದ್ದದ್ದು? ಅವರ ಮುದುಕಿ ಕೋಳಿ ಕೂಗದೆ ಹೋದರೆ, ಸೂರ್ಯ ಹುಟ್ಟುವುದೇ ಇಲ್ಲವೇ? ನಿಮಗೆ ಬೆಳಿಗ್ಗೆ ಆಗುವುದೇ ಇಲ್ಲವೇ?...ಅಲ್ಲದೆ, ಇನ್ನೊಂದು–ಅಳಿಯ ಅಂದ ಮೇಲೆ ಇಷ್ಟು ಚೀಪ್ ಆಗಿರಬಾರದು, ಸಾರ್....ಬೀಗರಲ್ಲಿ ಬಿಗುಮಾನ ಇದ್ದಷ್ಟೂ ಬಿಗಿ ಜಾಸ್ತಿ.

ಕಿಟ್ಟ–ಭಲೆ, ಭಲೆ, ಭಲೆ, ಒಪ್ಪಿಕೆ ಕಣಯ್ಯಾ...ಇನ್ನೂ ನೂರು ಸರ್ತಿ ಹೇಳು ಆ ಮಾತಿನ್ನ. ಕೇಳಿದೆಯೇನೋ, ರಾಮೂ–? ಇಷ್ಟು ಚಿಕ್ಕವನಿಗೆ ಗೊತ್ತಿರುವಷ್ಟು ತಿಳುವಳಿಕೆ ನಿನಗಿಲ್ಲವಲ್ಲೋ!

ಗುಂಡ–ಸಾರ್, ನಾನು ನೀವು ತಿಳಿದುಕೊಂಡಿರುವಷ್ಟು ಚಿಕ್ಕವನಲ್ಲ...ಎತ್ತರ ನೋಡಿ ಮೋಸ ಹೋಗಬೇಡಿ. ಬಲಿಚಕ್ರವರ್ತಿ ಕತೆ–ಓಹೋ, ನೀವು ಈಗಿನವರು, ಪುರಾಣದ ಗಂಧವಿಲ್ಲದವರು. ನೆಪೋಲಿಯನ್ನು ಸಾರ್, ಇಷ್ಟೇ ಎತ್ತರ–ಯೂರೋಪಿನ ಅಷ್ಟು ಅಗಲವನ್ನೂ ನುಂಗಿ ನೀರು ಕುಡಿದು ಬಿಟ್ಟನಲ್ಲಾ, ಸಾರ್...

ರಾಮು–ಹೌದು ಹೌದು...ನಿಜ, ಈಗ ನಮ್ಮನ್ನು ಏನು ಮಾಡು ಅನ್ನುತ್ತೀಯಯ್ಯಾ?

ಗುಂಡ–ಹಾಗೆ ಕೇಳಿ ಹೇಳುತ್ತೇನೆ. ಇವತ್ತು ರಾತ್ರಿ–

ರಾಮು–ಹುಂ?

ಗುಂಡ–ಗೋವಿಂದರಾಯರ ಮನೆ–

ರಾಮು–ಹುಂ?

ಗುಂಡ–ಮರೆತು ಬಿಡಿ,

ರಾಮು–ಕಿಟ್ಟಿ–ಆಂ? ಏನು?

ಗುಂಡ–ಮರೆತು ಬಿಡಿ. ಹೀಗೇ ಕಣ್ಣು ಮುಚ್ಚಿಕೊಂಡು ಉದ್ದಕ್ಕೆ ಹೋದರೆ,

ಸುಬ್ಬ–ಬಿಟ್ಟುಕೊಂಡು ಹೋದರೂ–

ರಂಗ–ಈ ಕತ್ತಲ್ಲಿ ಅಷ್ಟೇ ಉಪಯೋಗ–

ಗುಂಡ–ಕರ್ರೆಕ್ಟ್. ಹೀಗೇ ಹೋದರೆ, ಒಂದು ಹೋಟಲ್ಲಿದೆ.

ರಾಮು–ಹೋಟಲ್ಲು?

ಗುಂಡ–ಅಂದರೆ, ನಮ್ಮ ಪುಸ್ತಕಗಳಲ್ಲಿ ಇಂಗ್ಲೆಂಡಿನ ಕಡೆ ಕೆಲವರು

ಮನೆಗಳನ್ನೇ ಹೋಟಲುಗಳ ತರಹಾ ಇಟ್ಟುಕೊಂಡಿರುತ್ತಾರೆ–

ರಾಮು–ಇನ್ಸ್ ಅನ್ನುತ್ತಾರೆ ನೋಡಿ–

ಗುಂಡ–ಹೌದು. ಅಂಥ ಹೋಟಲು–ಮನೆ. ನಮ್ಮ ಕಡೆ ಕೆಲವರು ಗಂಡ ಹೆಂಡತಿ ಮಕ್ಕಳು ಎಲ್ಲಾ ಸೇರಿಕೊಂಡು ಇಂಥ ವ್ಯಾಪಾರ ನಡೆಸುತ್ತಾರೆ. ಇದಂತೂ ಸೊಗಸಾದ ಮನೆ...ಅಚ್ಚುಗಟ್ಟು ಅಡಿಗೆ...ಜಿಲೇಬಿ, ಕೇಸರಿ ಭಾತು, ಬೋಂಡ, ಉಪ್ಪೇರಿ, ಎಲ್ಲಾ–ರಾತ್ರಿಯಾದರೂ....ಸುಖವಾಗಿ ಹೊಟ್ಟೆ ತುಂಬ ಊಟ ಮಾಡಿ. ಒಳ್ಳೆ ರೂಮುಗಳಿವೆ. ಮಂಚ, ಹಾಸಿಗೆ, ಹೊದ್ದಿಗೆ ಚೆನ್ನಾಗಿ ನಿದ್ದೆ ಮಾಡಿ. ಬೆಳಗ್ಗೆ ಎದ್ದು, ಬ್ರೇಕ್ ಫಾಸ್ಟ್ ಮುಗಿಸಿ, ಹೋಟೇಲ ಮಾಲೀಕರನ್ನೇ ಕೇಳಿ, "ಗೋವಿಂದರಾಯರ ಮನೆ ಎಲ್ಲಿ?" ಅಂತ ಆತ ಯಾರಾದರೂ ಆಳನ್ನು ಜೊತೆಗೆ ಕೊಟ್ಟು ಕಳುಹಿಸುತ್ತಾನೆ. ಹೀಗೆ ಮಾಡುವುದು ಉತ್ತಮ ಅಂತ ನನಗೆ ತೋರತ್ತೆ. (ಸುಬ್ಬ ರಂಗಸ್ವಾಮಿ) ಏನ್ರೋ?

ಸುಬ್ಬ–ಹೌದು, ಹೌದು.

ರಂಗ–ಕರ್ರೆಕ್ಟ್, ಅದೇ ಸರಿ.

ರಾಮು–ಕಿಟ್ಟೀ, ಏನೋ?

ಕಿಟ್ಟಿ–ಇನ್ನೇನು? ಊಟ, ತಿಂಡಿ, ನಿದ್ದೆಯಾದರೂ ಪ್ರಾಮಿಸಿಂಗಾಗಿದೆಯಲ್ಲಾ!

ರಾಮು–ಕೊಕ್ಕರೆ, ಗರುಡ ಗಂಬದ ಪ್ರಾಸ್‌ಪೆಕ್ಟ್ಸಿಗಿಂತ ಕೇಸರಿಭಾತ್ ಬೋಂಡಾನೇ ವಾಸಿ. ಆಗಲಿ, ನಡಿ. (ಗುಂಡನಿಗೆ) ಹೀಗೇ ಹೋಗಬೇಕಾ?

ಗುಂಡ–ಹೋಗಬೇಕಾದ್ದೇನೋ ಹೀಗೆ....ಆದರೆ ನೀವು ನೀವೇ ಹೋದರೆ ಮತ್ತೆ ದಾರಿ ತಪ್ಪಿ ಇನ್ನು ಯಾರ ಮನೆಗೋ ಹೊರಟು ಹೋದೀರಿ. ಸ್ನೇಹ ಅಂದ ಮೇಲೆ ಸರಿಯಾದ ಮನೆ ತೋರಿಸುವುದು ನಮ್ಮ ಜವಾಬ್ದಾರಿ ಧರ್ಮ. ಬನ್ರೋ (ಗೆಳೆಯರಿಗೆ) ಅಷ್ಟು ದೂರ ಹೋಗಿ ತೋರಿಸಿ ಬರೋಣ. ಇನ್ನೆಲ್ಲಾದರೂ ಹೋದಾರು....

ಸುಬ್ಬ–ರಂಗ–ಎಸ್,ಎಸ್....ಪಾಪ....

ಗುಂಡ–(ಹೊರಟು ಮತ್ತೆ ನಿಂತು) ಇನ್ನೊಂದು ವಿಚಾರ, ಸಾರ್.

ರಾಮು–ಮತ್ತೇನಯ್ಯ ತಿರುಗೀ?

ಗುಂಡ–ಏನಿಲ್ಲ. ಆ ಹೋಟಲ್ಲಿಟ್ಟಿದಾನಲ್ಲ, ಮಾಲೀಕ–

ರಾಮು–ಹುಂ?

ಗುಂಡ–ಒಂದು ಥರಾ ಮನುಷ್ಯ. ಇರುವ ವಿಷಯ ಹೇಳಿಬಿಡುತ್ತೀನಿ. ಆಮೇಲೆ ನನ್ನನ್ನು ಆಡಿಕೊಳ್ಳಬಾರದು. ಅವನು ಜ್ಯೋತಿಷ್ಯದಲ್ಲಿ ಅದ್ವಿತೀಯ.



ರಾಮು–ಆ ಮಾಲೀಕ?

ಗುಂಡ–ಹೌದು. ವರಾಹ ಮಿಹಿರ ಅನ್ನಿ. ಅವನು ನಿಮ್ಮನ್ನು ನೋಡಿದ ತಕ್ಷಣ, ನೀವು ಯಾರು, ನಿಮ್ಮ ಹೆಸರೇನು, ಎಲ್ಲಿಂದ ಬಂದಿದ್ದೀರಿ, ಯಾವ ಕೆಲಸಕ್ಕೆ, ಅಷ್ಟೂ ಹೇಳಿಬಿಡಬಲ್ಲ. ಈ ವಿದ್ಯೆಯಿಂದ ಅವನಿಗೊಂದು ಥರಾ ಗರ್ವ, ಅಹಂಕಾರ, ಅಧಿಕ ಪ್ರಸಂಗತನ.

ರಾಮು–ಓಹೋ!

ಗುಂಡ–ನೀವು ಹೊಸಲೊಳಗೆ ಪ್ರವೇಶಿಸಿ ಕುರ್ಚಿಯಲ್ಲಿ ಕೂತಿರಿ ಅನ್ನಿ. ಪಕ್ಕದಲ್ಲಿ ಬಂದು ಕೂತುಬಿಡುತ್ತಾನೆ ತಾನೂ, ಸರಿ ಸಮಾನಸ್ಕನ ಹಾಗೆ!

ಕಿಟ್ಟಿ–ಓಹೋ !

ರಾಮು–ಎಲ ಎಲ !

ಗುಂಡ–ಅಷ್ಟಕ್ಕೆ ಬಿಡುತ್ತಾನೇನು? ನಿಮ್ಮ ತಂದೆ ಸ್ವಸ್ಥವಾಗಿದಾರೆಯೇ? ನಿಮ್ಮ ಮನೆ ಹಸು ಹೊತ್ತಿಗೆ ಎಷ್ಟು ಸೇರು ಹಾಲು ಕೊಡುತ್ತೆ, ನಾಯಿ ಮರಿ ಹಾಕಿತೇ–

ರಾಮು–ಅಲೆಲೆ–

ಗುಂಡ–ಹೀಗೇ ನಾನಾ ನಾನಾ ವಿಧವಾದ ಏನೇನೇನೋ ಪ್ರಶ್ನೆಗಳು !

ರಾಮು–ಇಷ್ಟೇ ತಾನೇ? ನಡಿ, ಚಿಂತಿಲ್ಲ, ನಾವು ವಿಚಾರಿಸಿಕೊಳ್ಳುತ್ತೇವೆ.

ಗುಂಡ–ಏನಿಲ್ಲ, ನೀವು ನಿಪ್ ಇಟ್ ಇನ್ ದಿ ಬಡ್ ಅಂತ ಇಂಗ್ಲಿಷಿನಲ್ಲಿ ಅನ್ನುತ್ತಾರಲ್ಲಾ–ಹಾಗೆ–

ಸುಬ್ಬ–ಹುಟ್ಟುತ್ತಿರುವ ಹಾಗೇ ಕನ್ನಡದಲ್ಲಿ–

ರಂಗ–ಹೂತು ಹಾಕಿ ಬಿಡಿ–

ಗುಂಡ–ಕರ್ರೆಕ್ಟ್–ಎರಡು ಸರ್ತಿ ಚುರು ಚುರು ಮುಟ್ಟಿಸಿ–ಚೇಳು ಬಾಣ–ತಾನಾಗಿ ದಾರಿಗೆ ಬರುತ್ತಾನೆ!

ರಾಮು–ಅದಕ್ಕೇನಂತೆ ಕಷ್ಟ? ಚೇಳು ಬಾಣ ಅಲ್ಲದಿದ್ದರೆ ಹಾವು ಬಾಣವೇ ಬಿಟ್ಟರಾಯಿತು. ಬಾಕಿ ವಿಷಯಗಳಲ್ಲಿ–

ಗುಂಡ–ಅದರಲ್ಲಿ ನೀವು ಎಳ್ಳಷ್ಟೂ ಸಂದೇಹ ಇಟ್ಟುಕೊಳ್ಳಬೇಡಿ. ಬಹಳ ಒಳ್ಳೆ ಮನುಷ್ಯರು. ತಂದೆಯಂಥಾ ಪ್ರಾಣಿ, ಸಾರ್....ಊಟ, ಉಪಚಾರ–

ರಾಮು–ಅಷ್ಟಾದರೆ ನಾವು ಬದುಕಿದೆವು...ನಡಿಯಪ್ಪಾ (ನಾಲ್ಕು ಹೆಜ್ಜೆ ಹಾಕಿ) ಅಂದ ಹಾಗೇ, ಇಷ್ಟೆಲ್ಲಾ ಮಾತಾಡಿದ್ದೀವಿ, ನಿನ್ನ ಹೆಸರೇ ಹೇಳಲಿಲ್ಲವಲ್ಲಯ್ಯಾ. ನಾವು ಯಾರ ಉಪಕಾರಕ್ಕೆ ಕೃತಜ್ಞರಾಗಿಬೇಕು ಅಂತ ತಿಳಿದುಕೊಳ್ಳಬೇಡವೇ?

ಗುಂಡ–ಯಾಕೆ ಬೇಕು? ಯಾಕೆ ಬೇಕು, ಸಾರ್? ಪರೋಪಕಾರಿಗಳು–ಅಂದರೆ ಅಕಲಾಯದಲ್ಲಿ ಬಂದ ದುಡ್ಡಿನ್ನ ದಾನ ಧರ್ಮ ಅಂತ ಕೊಟ್ಟ ಹಾಗೆ ಮಾಡಿ, ಆನರ್ಸ್ ಲಿಸ್ಟಿನಲ್ಲಿ ಬಿರುದು ಬಂತೇ ಅಂತ ಹುಡುಕುವವರ ವಿಷಯ ಅಲ್ಲ ನಾನು ಹೇಳುವುದು–ನಿಜವಾದ ಪರೋಪಕಾರಿಗಳು ಪರದೆಯ ಹಿಂದೆ ನಿಂತೇ ಪುಣ್ಯ ಕಟ್ಟಿಕೊಳ್ಳುತ್ತಾರೆ. ಇಷ್ಟಕ್ಕೂ, "ಹೆಸರಿನಲ್ಲೇನಿದೆ ನಾರದರೇ?" ಈ ಗುಲಾಬಿ ಹೂವಿನ್ನ ನೀವು ಗೊರಟೆ ಹೂವು ಅಂತ ಕರೆದರೆ, ನೀವು ಕರೆದಿರಿ ಅಂತ ಇದರ ಗಮ ಗಮ ಹೊರಟು ಹೋಗುತ್ತೆಯೇ, ಸಾರ್? ನನ್ನ ಹೆಸರು ಕಟ್ಟಿಕೊಂಡೇನು, ನಡೆಯಿರಿ–

(ನಿಷ್ಕ್ರಮಿಸುವರು)

## ದೃಶ್ಯ ೬

[ಮತ್ತೆ ಗೋವಿಂದರಾಯರ ಮನೆಯ ಹಾಲು. ಸ್ವಲ್ಪ ಕಾಲಾನಂತರ ತಿಮ್ಮ ಬೀದಿ ಬಾಗಿಲಿನಿಂದ ಓಡಿ ಬಂದು ಒಳ ಬಾಗಿಲು ಸೇರಿ]

ತಿಮ್ಮ–ಅಮ್ಮಾ, ಅವರು ಬಂದ್ರೋ....ಅವರು ಬಂದ್ರೋ ಸೋಮೇ–(ಬೀದಿಗೆ ಓಡುವನು)

ಗೋವು–(ಅವಸರದಿಂದ ಬಂದು ಒಳಗಡೆ ನೋಡುತ್ತಾ) ಬೇಗ ಬಾರೇ....ಬೇಗ....(ಮುಂದೆ ಬಂದು, ಪ್ರವೇಶಿಸಿ ರಾಮು ಕಿಟ್ಟಿಯರಿಗೆ) ಹ ಹ ಹ ಹ ಬನ್ನಿ, ಬನ್ನಿ, ಬನ್ನಿ....ಅಲ್ಲ ಯಾಕಿಷ್ಟು ತಡ? ರೈಲು ಬಂದದ್ದು ಹೊತ್ತಾಯಿತೇನು? (ಹಿಂದಿರುಗಿ–ಎರಡು ಹೆಜ್ಜೆ ಹೋಗುತ್ತಾ) ಲೇ, ಬಂದೆಯೇನೇ–?

ರಾಮು–(ಕಿಟ್ಟಿಗೆ) "ರೈಲು ಬಂದದ್ದು ತಡ?" ಕಿಟ್ಟಿ ಈ ಪ್ರಾಣಿಯೇ ಇರಬೇಕು, ಆ ನಮ್ಮ ಮೋಟುದ್ದದ ಲೈಟ್ ಹೌಸ್ ಹೇಳಿದ ಮಾಲೀಕ (ಗೋವು ಹಿಂತಿರುಗುತ್ತಿರಲು)ತಾವೇನೋ ಇಲ್ಲಿಯ ಯಜಮಾನರು?

ಗೋವು–ಆಂ?... (ನಗುವರು. ಭಾಗೀರಥಿ ಪ್ರವೇಶಿಸುವಳು. ತಿಮ್ಮ ಸೂಟುಕೇಸುಗಳನ್ನು ಹಿಡಿದು ರಾಮೂಗೆ ತಾಕಿಸಿಕೊಂಡು ಅವರಿಗಾಗಿ ಸಿದ್ಧಪಡಿಸಿರುವ ಕೋಣೆ ಕಡೆ ಹೋಗುತ್ತಿರಲು) ಲೋ, ಎಮ್ಮೆ, ಮನುಷ್ಯರು ನಿಂತಿರುವುದು ಕಣ್ಣು ಕಾಣೊಲ್ಲವೇ? ಮೈ ಮೇಲೆ ಜ್ಞಾನವಿಲ್ಲದೆ ನುಗ್ಗುತ್ತಿದ್ದೀಯೇ!

ರಾಮು–ಕಿಟ್ಟಿ, ನೋಡಿದೆಯಾ ಗಿಲೀಟು?....(ಗೋವೂಗೆ) ಹೋಗಲಿ ಬಿಡಿ, ಅವನ ತಪ್ಪಲ್ಲ. ನಾವು ಹಾದಿಯಲ್ಲಿ ನಿಂತಿರಬಾರದಾಗಿತ್ತು....ರೈಲು ಹೊತ್ತಿಗೆ ಸರಿಯಾಗೇ ಬಂತು, ನಾವು ಬರುವುದು ತಡವಾಯಿತು.



ಗೋವು–ಯಾಕೆ? ಕಾರು ಮಧ್ಯ ಕೆಟ್ಟುಹೋಯಿತೇನೂ?

ಕಿಟ್ಟಿ–ರಾಮು–ಆಂ?

ಕಿಟ್ಟಿ–ಸ್ವಾಮೀ, ಕ್ಷಮಿಸಿ. ನಾನು ಹುಟ್ಟಿದಾಗಿನಿಂದ ಜ್ಯೋತಿಷ್ಯವನ್ನು ನಂಬಿದವನಲ್ಲ. ಈಗ ನಮ್ಮ ಪಾಂಡಿತ್ಯಕ್ಕೆ ಬೆರಗಾಗಿ ಬಿದ್ದು, ಎರಡು ಕೈಯೂ ಮುಗಿಯುತ್ತಾ ಇದ್ದೇನೆ. ಇಡಿ ಮೈ ಸಾಷ್ಟಾಂಗ ಹಾಕುತ್ತೇನೆ ಬೇಕಾದರೆ, ಕ್ಷಮಿಸಿ.

ರಾಮು–ನಮ್ಮ ಕಾರು ಕೆಟ್ಟು ಹೋಗುತ್ತೆ ಅನ್ನುವುದೂ ಬರೆದಿರುತ್ತಯೇ ಜ್ಯೋತಿಷ್ಯದಲ್ಲಿ?

ಗೋವು–ಜ್ಯೋತಿಷ್ಯ? (ಭಾಗೀರಥಿ ಕಡೆ ನೋಡುವರು)

ಭಾಗಿ–ಕಾರು ಕೆಟ್ಟು ಹೋಯಿತೇ?

ರಾಮು–ಹೌದು. ಕುದುರೆ ಲಾಳ ಟೈರಿಗೆ ಸಿಕ್ಕಿ –ಬರ್ಸ್ಟ್ ಆಯಿತು.

ಕಿಟ್ಟಿ–ಲಾಳ ಅಲ್ಲ–

ರಾಮು–ಕುದುರೆಯೂ ಅಲ್ಲ–

ಕಿಟ್ಟಿ–ರಾಮು–ಟೈರು ! ಟೈರು !

ಭಾಗಿ–ತ್ಸು ತ್ಸು ತ್ಸು ತ್ಸು ತ್ಸು.

ಗೋವು–(ನಗುತ್ತಾ) ತಮಾಷೆಯಾಗಿ ಹೇಳಿದಿರಿ.

ಭಾಗಿ–ನೋಡಿದಿರಾ, ಹೇಗಾಯಿತು? ನಾನದಕ್ಕೇ ಅಂದೆ ಗುಂಡನ್ನ ಕಳುಹಿಸೋಣ ಅಂತ–

ರಾಮು–(ಕಿಟ್ಟಿಗೆ) ಗಂಡಹೆಂಡತಿ ಅಂತ ಕಾಣತ್ತೆ. ಚೆನ್ನಾಗಿದೆ ಜೋಡಿ.

ಕಿಟ್ಟಿ–ಸಪ್ಲಿಮೆಂಟರಿ ಅಂಡ್ ಕಾಂಪ್ಲಿಮೆಂಟರಿ ಅನ್ನುತ್ತಾರಲ್ಲಾ ಹಾಗೆ–

ರಾಮು–ಎಷ್ಟಾದರೂ ವರಾಹ ಮಿಹಿರ, ಜಾತಕ ನೋಡಿ ಜಮಾವಣೆ ಮಾಡಿಕೊಂಡಿದಾನೆ.

ಕಿಟ್ಟಿ–"ಕಾರು ಕೆಟ್ಟು ಹೋಯಿತೇ?" ಅಂತ ಇವನು! ತ್ಸು ತ್ಸು ತ್ಸು ತ್ಸು ಅಂತ ಲೊಚಗುಟ್ಟಿ "ಗುಂಡನ್ನ ಕಳುಹಿಸೋಣ ಅಂದೆ" ಅಂತ ಅವಳ ಭಾರ್ಯೆ–ಭಾರ್ಯೆ, ತಕ್ಕ ಮಟ್ಟಿಗೆ ಭಾರವೂ ! ಏನನ್ನುತ್ತಿ?

ಗೋವು–ಅಲ್ಲ. ಯಾಕೆ ನೀವಿನ್ನೀವೇ ಏನೋ...ಏನೂ ಸಂಕೋಚ ಬೇಡೀ...ನಾನೇ ಸ್ಟೇಷನ್ನಿಗೆ ಬಂದಿದ್ದರಾಗಿತ್ತು. ಆಗಿ ಹೋಯಿತು ಬಿಡಿ. ನೀವು ಹೇಗೆ ಬಂದಿರಿ ಮತ್ತೆ ಇಲ್ಲಿಗೆ?

ರಾಮು–(ಎಡ ಅಂಗೈ ಮೇಲೆ ಬಲಗೈ ಎರಡು ಬೆರಳುಗಳನ್ನು ನಡೆಸುತ್ತಾ)

ಹೀಗೆ ನಡೆದುಕೊಂಡು ಬಂದೆವು. ಯಾವನೋ ಒಬ್ಬ ಪುಣ್ಯಾತ್ಮ ಸಿಕ್ಕಿ, ದಾರಿ ತೋರಿಸಿದ.

ಗೋವು–ಛಿ ಛಿ ಎಂಥ ಇದಾಯಿತು...ಅಂತೂ ಸುರಕ್ಷಿತವಾಗಿ ಬಂದು ಸೇರಿದಿರಲ್ಲಾ. ಅಯ್ಯೋ, ಯಾಕೆ ನಿಂತಿದ್ದೀರಿ? ಕೂತುಗೊಳ್ಳಿ. (ರಾಮು ಕಿಟ್ಟಿ ಕೂಡುವರು. ರಾಮೂ ಪಕ್ಕದಲ್ಲಿ ಕೂತು) ಗಣೇಶ ಸ್ವಸ್ಥವಾಗಿದಾನಾ?

ರಾಮು–ಆಂ? ನಮ್ಮ ತಂದೆ?

ಗೋವು–ಹೂಂ. ಗಣೇಶ.

ರಾಮು–ಹುಂ. ಸ್ವಸ್ಥವಾಗಿದ್ದಾರೆ.

ಗೋವು–ಗಂಗೂ?

ಕಿಟ್ಟಿ–ರಾಮೂ!

ರಾಮು–ನಮ್ಮ, ನಮ್ಮ ತಾಯಿ?

ಗೋವು–ಹುಂ. ನಮ್ಮ ಗಂಗೂ–

ರಾಮು–ನಿಮ್ಮ....ಹುಂ...ಹುಂ....ಸ್ವಸ್ಥ–

ಕಿಟ್ಟಿ–ಅಲ್ಲ, ಅಲ್ಲ ಆರೋಗ್ಯ–

ರಾಮು–ಹೌದು. ಆರೋಗ್ಯದಿಂದಿದ್ದಾಳೆ. ಆಮೇಲೆ ನಮ್ಮ ಕೊಟ್ಟಿಗೆ ಹಸು–

ಗೋವು–ಆಂ?

ರಾಮು–ಹೊತ್ತಿಗೆ ನಾಲ್ಕು ಸೇರು ಹಾಲು ಕೊಡುತ್ತೆ...ಆಮೇಲೆ ನಮ್ಮ ಲಿಸ್ಸೀ...ಅಂದರೆ ಹೆಣ್ಣು ನಾಯಿ, ಹೋದ ವಾರ ಆರು ಮರಿ ಹಾಕಿತು–

ಗೋವು–ಆಂ?

ರಾಮು–ಎರಡನ್ನು ಅದೇ ತಿಂದುಬಿಟ್ಟಿತು. ಇನ್ನು ನಾಲ್ಕೂ–

ಕಿಟ್ಟಿ–ಸುರಕ್ಷಿತ–

ರಾಮು–ಸುರಕ್ಷಿತವಾಗಿದೆ.

ಗೋವು–ಆಂ?

ರಾಮು–ಸ್ವಾಮೀ, "ಆಂ" ಅಂತ ತೆಗೆದುಕೊಂಡಿರುವ ಬಾಯಿ ಮುಚ್ಚಿಕೊಳ್ಳಿ. ಮಲೆನಾಡಿನಲ್ಲಿ ಸೊಳ್ಳೆಗಳು ಜಾಸ್ತಿ ಅನ್ನುತ್ತಾರೆ. ಎಲ್ಲಾದರೂ ಒಳಗೆ ಹೊಕ್ಕು, ಹೊಟ್ಟೆ ತೊಳಸಿ–

ಕಿಟ್ಟಿ–ನೋಡಿ, ಯಜಮಾನರೇ, ನೀವು ಇದೇ ತರಹ ಪ್ರಶ್ನೆಗಳನ್ನು ಕೇಳುತ್ತೀರಿ ಅಂತ ನಮಗೆ ಒಬ್ಬ– ಅವನೂ ಒಬ್ಬ ಜೋತಿಷಿಯ ಮಗನೇ ಇದ್ದಾನು–

ರಾಮು– ಅವನು ಭವಿಷ್ಯ ನುಡಿದಿದ್ದ.



ಕಿಟ್ಟಿ–ನೀವೇನು ಕೇಳುವುದು ಅಂತ–

ರಾಮು–ನಾನೇ ಹೇಳಿಬಿಟ್ಟೆ.

ತಿಮ್ಮ–(ಕಾಣಿಸಿಕೊಂಡು) ತಮ್ಮ ಪೆಟ್ಗೆಗೋಳ್ನ ಕೋಣ್ಯಾಗೆ ಮಡಗೀವ್ನಿ.

ರಾಮು–ಓಹೋ. ಅದೇನೋ ನಮಗೆ ರೂಮು? ಒಳ್ಳೆಯದು. (ಹೊರಟು, ನಿಂತು) ರಿ, (ಚಿಟಕಿ ಹೊಡೆದು ಕರೆಯುತ್ತಾ) ಮಿಸ್ಟರ್, ಇಲ್ಲಿ ಬನ್ನಿ...ಉಂ, ನಾನು ಹೇಳಿದೆನಲ್ಲಾ, ಕಾರಿನ ಟೈರು ಬರ್‍ಸ್ಟಾಗಿ ಕೆಟ್ಟಿತು ಅಂತ–ನಮಗೆ ಹಾಸಿಗೆ ಹೊದಿಕೆ ಎಲ್ಲಾ ಇಲ್ಲೇ ಸಿಗುತ್ತೆ ತಾನೇ.

ಗೋವು–ಅದೇನು ಮಹಾ ಸಾಮ್ರಾಜ್ಯವೋ–ಹೋಗು, ಬಟ್ಟೆ ಬದಲಾಯಿಸು ಮೊದಲು...ಆಮೇಲೆ ಎಲ್ಲಾ ಆಗತ್ತೆ.

ರಾಮು–ಕಿಟ್ಟಿ, ಏನೋ ಈ ಪ್ರಾಣಿ "ನೀನು ತಾನು" ಅಂತ ಪ್ರಾರಂಭಿಸಿಬಿಟ್ಟಿತು?... ಅವನು ಹೇಳಿದ್ದು ಸರಿಯೇ. ಒಂದು ಸಣ್ಣ ಗುಳಿಗೆ ತಿನ್ನಿಸೋಣ, ಟು ಸ್ಟಾರ್ಟ್ ವಿತ್...(ಗೋವುಗೆ) ಇಲ್ಲಿ ನೋಡಿ ರೀ, ಯಜಮಾನರೇ, ನಮಗೆ ನಾವು ಏನು ಮಾಡಬೇಕು ಬಿಡಬೇಕು ನಮಗೆ ಗೊತ್ತಿದೆ, ತಾವೇನೂ ಹೇಳಿ ಬರೆಯಿಸಿ ಮಾಡಬೇಕಿಲ್ಲ. ಅಲ್ಲದೆ, ತಾವು ಹೇಳಿದ ಹಾಗೆ, ನಾವು ಅಲ್ಲಿ ಬಟ್ಟೆ ಬದಲಾಯಿಸಿ ಪುನಃ ಇಲ್ಲಿಗೆ ಬರುವುದರೊಳಗೆ ತಾವು ತಮ್ಮ ಏಕವಚನದ ಸಂಬೋಧನೆಗೆ ಪೂರ್ಣ ವಿರಾಮ ಹಾಕಿ ಬಹುವಚನಕ್ಕೆ ಬದಲಾಯಿಸಿ... ಅರ್ಥವಾಯಿತೇನತ್ರೀ? ಊಂ...(ನಿಷ್ಕ್ರಮಿಸುವನು)

ಕಿಟ್ಟಿ–(ಅರ್ಥವಾಗದೆ ಬೆರಗಾಗಿರುವ ಗೋವೂ ಬೆನ್ನು ತಟ್ಟಿ) ಸ್ವಾಮಿ.... ಮಹಾಸ್ವಾಮೀ...ತಮಗೆ ಇಷ್ಟು ವಯಸ್ಸಾಗಿದೆ, ಎಷ್ಟು ಅನುಭವ ಇರಬೇಕು!....ಜನಗಳಲ್ಲಿ ಯಾವ ತರಹ ನಡೆದುಕೊಳ್ಳಬೇಕು ಅನ್ನುವುದೇ ತಿಳಿಯದಲ್ಲಾ ! ಹೋಗಿ ಬರುವವರನ್ನೆಲ್ಲಾ "ಹೋಗು", "ಬಾ", ಅಂದರೆ ಸುಮ್ಮನಿರುತ್ತಾರೆಯೇ? ಮನೆ ಅಳಿಯನೇ ಮಣೆ ಹಾಕದಿದ್ದರೆ ಮುನಿಸಿಗೊಂಡು ಹೊರಟು ಹೋಗುವ ಕಾಲ–ಕೇಳಿಲ್ಲವೇ ಗಾದೆ?–"ಆನೆಯನ್ನಾದರೂ ಸಾಕಬಹುದು, ಅಳಿಯನ್ನ ಸುಧಾರಿಸೊಕ್ಕಾಗೊಲ್ಲ" ಅಂತ? ಹೀಗಿರುವಾಗ...ಬಹಳ ಹುಷಾರಾಗಿರಬೇಕು, ಸ್ವಾಮೀ, ಬಹಳ ಹುಷಾರಾಗಿರಬೇಕು. (ತಾನು ನಿಷ್ಕ್ರಮಿಸುವನು)

ಭಾಗಿ–(ಪತಿಯನ್ನು ಸಮೀಪಿಸಿ) ಏನೂಂದ್ರೆ ಇದು?

ಗೋವು–ಮ ಮ ಮ ಮ ಮರ್ಯಾದೆ ಇಲ್ಲದ ಮುಂಡ್ಘೇವುಗಳು ! ಜ್ಯೋತಿಷ್ಯವಂತ, ಭವಿಷ್ಯವಂತೆ ! ಇವನ ಮನೆ ಹಸು ಹೊತ್ತಿಗೆ ನಾಲ್ಕು ಸೇರು

ಹಾಲು ಕರೆದರೆಷ್ಟು, ಹದಿನಾಲ್ಕು ತಂಬಿಗೆ ಗಂಜಲ ಹಾಕಿದರೆಷ್ಟೇ? ಇವನ ನಾಯಿ ಎಷ್ಟು ಮರಿ ಇಟ್ಟರೆ ನಮಗೇನು? ನೀನೇನು ಬಾಣಂತನಕ್ಕೆ ಹೋಗಬೇಕಾಗಿತ್ತಾ? ಯಾರು ಕೇಳಿದರೇ ಇವನ್ನಿದೆಲ್ಲಾ? ಅವನು....ಆ...ಆ ತಲೆ ಹೋಕ, ನನ್ನ ಬೆನ್ನು ತಟ್ಟಿದನಲ್ಲೇ! ನನ್ನ ಬೆನ್ನು !....ಮನೆ ಅಳಿಯ ಮಣೆ ಹಾಕಲಿಲ್ಲ ಅಂತ ಮುನಿಸಿಕೊಂಡು ಹೋಗುವ ಕಾಲವಂತೆ! ಬೀದಿಯಿಂದಿನ್ನೂ ಈಗ ತಾನೇ ಬರುತ್ತಿದ್ದಾನೆ. ಇವನು ತಾಳಿ ಕಟ್ಟಿದ ಅಂದರೆ ಮನೆಯನ್ನೇ ತೊಳೆಯುವುದು ಖಂಡಿತ. ನನಗೆ ಅವನು ವ್ಯಾಕರಣ ಹೇಳಿಕೊಡೊಕ್ಕೆ ಬಂದನಲ್ಲೇ! "ಹೇಳಿ ಬರೆಯಿಸಿ", "ಏಕ ವಚನ", "ಪೂರ್ಣ ವಿರಾಮ", "ಬಹುವಚನ"–ಅವನ ಕುತ್ತಿಗೆಗೆ, ಇಬ್ಬರ ಕುತ್ತಿಗೆಗಳಿಗೂ ಅರ್ಧರ್ಧ ಚಂದ್ರ ಹಾಕಿ ಹೊಸಿಲಾಚೆ ತಳ್ಳಿಬಿಡೋಣ ಅನ್ನುವಷ್ಟು–

ಭಾಗಿ–ಹೋಗಲಿ, ಸಮಾಧಾನ ಮಾಡಿಕೊಂಡಿರಲ್ಲಾ....ಈಗಿನ ಕಾಲದ ಹುಡುಗರು....ಹಸಿವೆ ಹೊತ್ತು, ದೂರ ನಡೆದುಕೊಂಡು ಬಂದದ್ದು – ಎಲ್ಲಾ ಸೇರಿ–ಇಷ್ಟಕ್ಕೂ ಇವರನ್ನು ಯಾಕೆ ಅನ್ನಬೇಕು? ನಿಮ್ಮ ಮದುವೆಯಲ್ಲಿ–

ಗೋವು–ಏನೂ?

ಭಾಗಿ–ನನಗಿನ್ನೂ ಚೆನ್ನಾಗಿ ಜ್ಞಾಪಕ ಇದೆ. ವರಪೂಜೆ ರಾತ್ರಿ ನಿಮ್ಮ ರುಮಾಲಿನ ಜರ್ತಾರಿ ಸ್ವಲ್ಪ ಕಡಿಮೆ ಇತ್ತು ಅಂತ ನೀವು ಆಕಾಶವನ್ನ ಭೂಮೀಗಿಳಿಸಿದ್ದು–ನನಗೆ ಚೆನ್ನಾಗಿ ಜ್ಞಾಪಕ ಇದೆ. ಆಗ ನಮ್ಮ ತಂದೆ, ಪಾಪ–

ಗೋವು–ಲೇ, ಲೇ, ಏನು? ತೀರಿಸಿಕೊಳ್ಳುತ್ತಿದ್ದೀಯೇನೇ ಸಾಲವನ್ನ?...ಆಗ ನಾನು ಆಕಾಶವನ್ನು ಭೂಮಿಗೆ ಇಳಿಸಿದ್ದಕ್ಕೆ ಈಗ ನಾನು ಭೂಮಿಯಿಂದ ಆಕಾಶಕ್ಕೆ ಹಾರಿ ಹೋಗಲೇನೇ?

(ಕೋಣೆಯಲ್ಲಿ ರಾಮು "ನವವಿಧ ಸುಮ ಸೌರಭದಿಂ" ಕಂದವನ್ನು ಶಿಳ್ಳೆ ಹಾಕುವನು)

ಅಯ್ಯಯ್ಯೋ, ಇದೇನೇ? ಸಂಸಾರವಂದಿಗರ ಮನೆಯಲ್ಲಿ ಶಿಳ್ಳಿ...ನಾಟಕದ ಕಂದ ಪದ್ಯವೇ ಅದು!...ಏನು ಗತಿಯೇ? ನಮ್ಮ ಮನೆ ಕಂಪೆನಿ ಮನೆ ಆಗಿ ಹೋಯಿತಲ್ಲೇ, ದೇವರೇ ಗತಿ...ಉ ಹು ಹು. ನನ್ನಿಂದ ಸಾಧ್ಯವಿಲ್ಲ. ನನ್ನಿಂದ ಸಾಧ್ಯವಿಲ್ಲ. ಸ್ವಲ್ಪ ಸುಧಾರಿಸಿಕೊಳ್ಳುತ್ತೇನೆ. (ನಿಷ್ಕ್ರಮಿಸುವರು)

ಶಾಂತಿ–(ಓಡಿ ಬಂದು) ಅಮ್ಮಾ, ಅಮ್ಮಾ, ತುಪ್ಪದ್ದು ತೆಗೆದುಕೊಡಬೇಕಂತೆ–

(ರೂಮಿನಲ್ಲಿ ರಾಮು "ಎಲ್ಲಿ ನೋಡಲು ಶೋಭಿಕುಂ" ಹಾಡಲು)



ಓ, ಭಾವ ಬಂದರೇನಮ್ಮ? ನನಗೆ ಹೇಳಲೇ ಇಲ್ಲ ಪದ್ದಕ್ಕಾ–(ಓಡುವಳು ಭಾಗೀರಥಿ ಅಟ್ಟ ಹಿಡಿದು) ಶಾಂತಿ, ನೀನು ಅವರ ಮುಂದೆ ಸುಮ್ಮಸುಮ್ಮನೆ ನಿಂತು ಚೆಲ್ಲು ಚೆಲ್ಲಾಗಾಡಬಾರದು...ನಡಿ.

(ಭಾಗೀರಥಿ ಮತ್ತು ಶಾಂತಿ ನಿಷ್ಕ್ರಮಿಸುವರು. ರಾಮು ಹಾಡುತ್ತಾ ಪ್ರವೇಶಿಸುವನು)

ರಾಮು–"ಮಲ್ಲೇ ಮಲ್ಲಿಕಾ ಜಾಜಿ ಬಳ್ಳಿಗಳೆಲ್ಲವು–"

ಕಿಟ್ಟಿ–(ಹಿಂಬಾಲಿಸಿ) ಲೋ, ಲೋ, ಲೋ, ಸಾಕೋ, ಹೊಟ್ಟೆಯಲ್ಲಿ ಜಾಗಟೆ ಬಾರಿಸುತ್ತಾ ಇದೆ, ನೀನು ಮಲ್ಲೆ ಮಲ್ಲಿಕಾ ಜಾಜಿ–ಸಿಗಿಯುತ್ತಿದ್ದೀಯಲ್ಲೋ!

ರಾಮು–ಅಲ್ಲವೋ, ಇಂಥ ಸನ್ನಿವೇಶ, ಇಂಥ ಎನ್ವಿರನ್ಮೆಂಟು–ಹಸಿವೆ ಹಸಿವೆ ಅನ್ನೊಕ್ಕೆ ನೀನು ನಾಟಕದ ವಿದೂಷಕನೇನೋ? ಸುಂದರವಾದ ಮನೆ; ಅಂದವಾದ ಕೋಣೆ; ಅಲ್ಲಿ ಕಿಟಕಿ; ಆಚೆ ಉದ್ಯಾನ; ಅಲ್ಲಿ

"ಮಲ್ಲೆ ಮಲ್ಲಿಕಾ ಜಾಜಿ
ಬಳ್ಳಿಗಳೆಲ್ಲವು
ಫುಲ್ಲ ಪುಷ್ಪವ ಚೆಲ್ಲಿರೇ
ಅಲ್ಲಲ್ಲಿ. ಎಲ್ಲಿ ನೋಡಲು ಶೋಭಿಕುಂ"

ಹೇಗಿದೆ?

ಕಿಟ್ಟಿ–ಚೆನ್ನಾಗಿದೆ. ಸುಂದರವಾದ ಮನೆ. ಅಂದವಾದ ಕೋಣೆ. ಅಲ್ಲಿ ಕಿಟಕಿ. ಆಚೆ ಉದ್ಯಾನ. ಅಲ್ಲಿ ನೀನು, ನಿನ್ನ ಮುತ್ತಾತನ ಕಾಲದ ಮಲ್ಲೆ ಮಲ್ಲಿಕಾ ಜಾಜಿ! ಚೆನ್ನಾಗಿದೆ. ಆದರೆ ಈ ಸರಪಣಿ ಪೂರ್ತಿಯಾಗಬೇಕಾದರೆ, ಆ ಜಾಜಿ ಬಳ್ಳಿಗಳ ನಡುವೆ ಓರ್ವ ಲಲನೆ ಕಾಣಿಸಿಕೊಂಡು, ನಿನ್ನನ್ನು ನೋಡಿ, "ಇವನೇಂ ಮಾರನೋ ಮೇಣ್" ಅಂತ ಕಂದ ಹಾಡಿದರೆ–ಲೋ, ಅಂದ ಹಾಗೇ ನೀನು ಮದುವೆಯಾಗುವ ಪ್ರಾಣಿ, ಅಲ್ಲ, ಪ್ರಾಣ ಕಾಂತೆ, ಸಂಗೀತದಲ್ಲಿ ಸುಬ್ಬುಲಕ್ಷ್ಮಿಯೇ ಅಂತಲ್ಲೋ!

ರಾಮು–ಹಾಗಂತ ಅವಳಪ್ಪ ನಮ್ಮಪ್ಪನಿಗೆ ಕಾಗದದಲ್ಲಿ ಬರೆದಿದ್ದರು. ಹಾಗಿದ್ದರೂವೆ ಆ ಸಂಗೀತ ಇಲ್ಲಿ ಎಲ್ಲಿ–

(ಒಳಗೆ ವೀಣೆ ಶೃತಿ ಮಾಡುತ್ತಿರುವ ಶಬ್ದ)

ಲೋ !

ಕಿಟ್ಟಿ–ವೀಣೆ ! ಯಾರೋ–

ರಾಮು–ವೀಣೆ ಶೃತಿ ಮಾಡುತ್ತಿದ್ದಾರೆ ! ಸಂಗೀತ ಕೇಳುವ ಹಾಗೇ ಇದೆಯಲ್ಲೋ !

ಕಿಟ್ಟಿ–ಹೂಂ. ಇಲ್ಲೂ ಒಬ್ಬಳು ಪದ್ಮಾವತಿ ಇದ್ದಾಳೇನೋ ! ಊರಿಗೊಬ್ಬಳೇನೇ ಯಾಕೆ?

ರಾಮು–ಕರ್ರೆಕ್ಟ್. ನಾದ ಕೇಳಿದೆಯಾ? ಎಷ್ಟು ಶುದ್ಧವಾಗಿ–ಕಿಟ್ಟೀ, ಇಲ್ಲೂ ಪದ್ಮಾವತಿ ಇದ್ದರೆ–

ಕಿಟ್ಟಿ–ಹೊಡೆಸೋಣ ಸುಮ್ಮನಿರು ಬಿಟ್ಟಿ ಕಚೇರಿಯನ್ನ. ಆದರೆ ಸ್ವಲ್ಪ ಗಿಲೀಟಿಗೆ ಬದಲಾಯಿಸಬೇಕು ನಮ್ಮ ಧಾಟಿ. ಇಲ್ಲ ಅಂತ ಅನ್ನಲಾರರು. ಜನ ಎಲ್ಲಾ ಫಾರ್‌ವರ್ಡ್‌ಹಾಗೇ ಕಾಣಿಸುತ್ತಾರೆ.

ರಾಮು–ಅಷ್ಟೆಲ್ಲಾ ಯಾಕೆ? ಸೈಡ್ವರ್ಡ್ಡು, ಬ್ಯಾಕ್ವರ್ಡ್ಡು, ಒಟ್ಟಿನಲ್ಲಿ ರೌಂಡ್ವರ್ಡ್ಡು ಅಂತ ಹೇಳಬಹುದು. ಅದರಲ್ಲೂ ಆ ಗಜಗಮನೆ, ಅಜಮಹಾರಾಜನ ರಾಣಿ, ಚಕ್ರವರ್ತಿನಿ, ಆ ಹಾಹಾಹಾಹಾ ಏನು ಆಕಾರವೋ! ಐರಾವತಕ್ಕೆ ಸೀರೆ ಉಡಿಸಿದ ಹಾಗೆ ! ಅಲ್ಲದೆ ಇದು ನೋಡು, ಜನ್ಮಜನ್ಮಾಂತರದಿಂದ ನಮ್ಮನ್ನು ಬಲ್ಲವರ ಹಾಗೆ "ತ್ಸು ತ್ಸು ತ್ಸು ತ್ಸು" ಅಂತ ಲೊಚಗುಟ್ಟಿದ್ದು!...ಎಕ್ಸ್‌ಪ್ಲಾಯಿಟ್ ಮಾಡೋಣ ಸುಮ್ಮನಿರು ಹೂ...ಈಗ ಊಟಕ್ಕೆ ಮುಂದೆ ಏನಾದರೂ ಒಂದಷ್ಟು ಉಪಾಹಾರ ಹಾಕಿಕೊಳ್ಳಬಹುದು...ಎಲ್ಲಿ....ಲ್ರೀ....ಮಿಸ್ಟಾರ್ ರೀ–

ಕಿಟ್ಟಿ–ಯಜಮಾನರೇ...ಸ್ವಾಮೀ....ಮಹಾಸ್ವಾಮಿ...

ಗೋವು–(ಪ್ರವೇಶಿಸಿ) ಆಂ?

ರಾಮು–ಏನ್ರೀ, ಎಲ್ರೀ, ನಿಂತ ನಿಂತ ಹಾಗೇ ಅದೃಶ್ಯವಾಗಿ ಹೋಗುತ್ತೀರಲ್ರೀ...ಏನ್ರೀ ಇದೆ ಒಳಗೆ?

ಗೋವು–ಆಂ?

ಕಿಟ್ಟಿ–ರಾಯರು, ಒಳಗೆ ತಿಂಡಿ ಏನಿದೆ ಅಂತ ಕೇಳುತ್ತಾರೆ.

ಗೋವು–ತಿಂಡಿ ಯಾಕೆ? ಅಡಿಗೆ ರೆಡಿಯಾಗಿದೆ. ಊಟಕ್ಕೇ ಏಳಬಹುದಲ್ಲಾ!

ರಾಮು–ಲ್ರೀ, ಬೇಡ್ರೀ, ನಾನು ಏನ್ರೀ ಹೇಳಿದೆ ನಿಮಗೆ ಆಗಲೇ? ಬೇಡ್ರೀ ಈ ಅಧಿಕ ಪ್ರಸಂಗತನ, ಹೇಳಿದಷ್ಟು ಮಾಡ್ರೀ ಸಾಕು.

ಕಿಟ್ಟಿ–ಹೌದಪ್ಪಾ, ಅಷ್ಟು ಮಾಡಿ. ತಿಂಡಿ ಏನಿದೆ ಹೇಳಿ.

ಗೋವು–ಕೇಸರಿಭಾತು, ಬೋಂಡ, ಉಪ್ಪೇರಿ, ಜಿಲೇಬಿ–

ರಾಮು–ಸಾಕು, ಸಾಕು, ಸಾಕು, ಪೂರ್ತಿಪಟ್ಟಿ ಒಪ್ಪಿಸಬೇಡಿ, ಎರಡರ್ಧ ಕೇಸರಿಭಾತು, ಒಂದೊಂದು ಪ್ಲೇಟು ಬೋಂಡ–



ಕಿಟ್ಟಿ–ಪ್ಲೇಟ್ಯಾಕೋ, ಒಂದೊಂದೇ ಸಾಕು.

ರಾಮು–ಇರಲಿ ಬಿಡೋ. ಹ್ಯಾಗೂ ಮದುವೆ ಖರ್ಚಿಗೆ ತಾನೇನೋ ಡೆಬಿಟ್ಟು?...ರೀ, ಎಷ್ರೀ ಒಂದು ಪ್ಲೇಟಿಗೆ?

ಗೋವು–ಆಂ?

ರಾಮು–ಆಂ? ಏನು ಆಂ? ಏನ್ರೀ, ಕೇಳಿದ್ದಕ್ಕೆಲ್ಲಾ "ಆಂ ಆಂ ಆಂ" ಅನ್ನುತ್ತೀರಿ?

ಕಿಟ್ಟಿ–ಹೋಗಲಿ ಬಿಡೋ. (ಗೋವೂಗೆ) ಸ್ವಾಮೀ, ತಾವು ತೊಗೊಂಡು ಬನ್ನಿ, ಹೋಗಿ.

(ಗೋವು ನಿಷ್ಕ್ರಮಿಸುವರು)

ರಾಮು–ಯಕೋ ಇವನು ಏನು ಕೇಳಿದರೂ ಪೆಕರ ಪೆಕರನ ಹಾಗಾಡುತ್ತಾನೆ?

ಕಿಟ್ಟಿ–ಅದು, ಬಹುಶಃ ಇವನಿಗೆ ಇದುವರೆಗೂ ನಮ್ಮಂಥ ಗಿರಾಕಿಗಳು ಗಂಟು ಬಿದ್ದಿರಲಿಲ್ಲ ಅಂತ ಕಾಣತ್ತೆ. ಬಂದವರಿಗೆಲ್ಲಾ ಪಂಚಾಂಗ ತೋರಿಸಿ, "ನಿಮಗೆ ಕೇತು ಕ್ರೂರ, ರಾಹು ನೀಚ, ಕುಚ ಕುಲಗೆಟ್ಟು ಹೋಗಿದ್ದಾನೆ:" ಅಂತ ಹೆದರಿಸಿ ಕತೆ ಹೇಳಿ ಕಾಸು ಕದಿಯುತ್ತಿದ್ದ ಅಂತ ಕಾಣತ್ತೆ. ಈಗ ನಾವು ಇವನಿಗೇ ರಾಹು, ಕೇತು, ಕುಜ ಚೌಚೌಭಾತಿನ ಹಾಗೆ ಬಂದು, ಗಂಟಲಡಚಿ–ಶ್–

(ಗೋವು ಬೆಳ್ಳಿ ತಟ್ಟೆಗಳಲ್ಲಿ ಉಪಾಹರ ತರುವರು)

ರಾಮು–ಕಿಟ್ಟೀ, ಬೆಳ್ಳೀ!

(ಗೋವು ತಟ್ಟೆ ಟೀಪಾಯಿ ಮೇಲಿಡುವರು. ಭಾಗೀರಥಿ ಬಾಗಿಲ ಬಳಿ ನಿಂತು ಶಾಂತಿ ಕೈಯಲ್ಲಿ ಎರಡು ಬಟ್ಟಲು, ಹೂಜಿಯಲ್ಲಿ ನೀರು, ಕಳುಹಿಸುವರು. ಶಾಂತಿ ಅವನ್ನು ಟೀಪಾಯಿ ಮೇಲಿಟ್ಟು ದೂರ ನಿಲ್ಲುವಳು)

ಕಿಟ್ಟೀ, ಕೇಸರಿಭಾತು ಪರವಾಗಿಲ್ಲ, ಬಿಸಿಯಾಗೇ ಇದೆ. (ಗೋವೂಗೆ) ಏನ್ರೀ, ಬೆಳಗ್ಗೆ ಮಾಡಿದ್ದನ್ನ ಒಲೆ ಮೇಲಿಟ್ಟು ಬಿಸಿ ಮಾಡಿಕೊಂಡು ತಂದಿರೋ ಇಲ್ಲವೋ?

ಗೋವು–(ಕೋಪದಿಂದ) ಬೆಳಗ್ಗೆ ಅಲ್ಲ ಮಾಡಿದ್ದು. ಈಗ...ಅಡಿಗೆಗೆ...ನಿಮಗೋಸ್ಕರ–

ರಾಮು–ಓ !

ಕಿಟ್ಟಿ–ಓ ಹೋ !

ರಾಮು–ಕಿಟ್ಟಿ–ಓ ಹೋ ಹೋ !

ರಾಮು–ಕೇಳಿದೆಯೇನೋ ? ನಮ್ಮ ಮೋಟಾರು ಕೆಡುತ್ತೆ ಅಂತ ಇವರಿಗೆ ಗೊತ್ತಿತ್ತು. ದಾರಿ ತೋರಿಸೊಕ್ಕೆ ಒಬ್ಬ ಗೈಡು ಗುಂಡನ್ನು ತಯಾರಿ ಮಾಡಿದ್ದರು; ಯಾವ ನರಿ ಸೀನಿತೋ, ಬೆಕ್ಕು ಕೆಮ್ಮಿತೋ, ಕಳುಹಿಸಲಿಲ್ಲ. ದಾರಿ ಹೋಕ ಪುಣ್ಯಾತ್ಮ ಯಾವನೋ ನಮ್ಮನ್ನ ಇಲ್ಲಿಗೆ ಕರೆಕೊಂಡು ಬರುತ್ತಾನೆ ಅಂತ ಗೊತ್ತಿತ್ತು. ನಮ್ಮ ಔತಣಕ್ಕೆ ಕೇಸರಿಭಾತು, ಜಿಲೇಬಿ, ಬೋಂಡ, ಎಲ್ಲಾ ಮಾಡಿಸಿದ್ದರು. ನಮ್ಮ ಜ್ಯೋತಿಷ್ಯ ಶಾಸ್ತ್ರದ ಮುಂದೆ ಶಾಸ್ತ್ರವೇನೂ?....ಸ್ವಾಮೀ, ನಮೋ ನಮಃ.

ಗೋವು–.... .... ಲೇ, ಶಾಂತಿ ನೀನಿಲ್ಲೇ ಇರು. ಇವರು ಯಾವಾಗ ಊಟಕ್ಕೆ ಏಳುತ್ತಾರೋ ಏಳಲಿ. ಬಂದು ಹೇಳು. (ನಿಷ್ಕ್ರಮಿಸುವರು)

ಕಿಟ್ಟಿ–ಲೋ, ಪೆದ್ದಾ, ಪೆದ್ದಾ, ಪೆದ್ದಾ–

ರಾಮು–ಯಾಕೋ?

ಕಿಟ್ಟಿ–ಯಾಕಂತೆ....ನಾನು ಸಂಗೀತಕ್ಕೆ ಏರ್ಪಾಟು ಮಾಡೋಣ ಅಂತ ಗಿಲೀಟಿನ ತಳಹದಿ ಕಟ್ಟೊಕ್ಕೆ ಹವಣಿಸುತ್ತಾ ಇದ್ದರೆ, ನೀನು ಬಾಯಿಗೆ ಬಂದ ಹಾಗೆ–

ರಾಮು–ಹೌದೋ, ಎಸ್. ತಪ್ಪಾಯಿತು...ಕರ್ರೆಕ್ಟ್ ಮಾಡೋಣ. (ಕೇಸರಿಭಾತು ತಿನ್ನುತ್ತಾ) ಪರವಾಗಿಲ್ಲ, ಡಾಲ್ಡಗೀಲ್ಡ ಹಾಕಿಲ್ಲ, ಒಳ್ಳೆ ತುಪ್ಪವೇ ಹಾಕಿರುವ ಹಾಗಿದೆ.

ಕಿಟ್ಟಿ–(ತಿನ್ನುತ್ತಾ) ಹುಂ, ಮಲೆನಾಡಿನಲ್ಲಿ ಮೇವಿಗೆ ತಾಪತ್ರಯ ಇರೊಲ್ಲ. ಬೇಕಾದಷ್ಟು ಎಮ್ಮೆ ಕಟ್ಟಿಕೊಂಡಿರುತ್ತಾರೆ.

ಶಾಂತಿ–ನಮ್ಮ ಕೊಟ್ಟಿಗೆಯಲ್ಲಿ ಹನ್ನೆರಡು ಎಮ್ಮೆ ಇವೆ ಕಂಡ್ರೀ.

ರಾಮು–ಓ...ನಿನ್ನ ನೋಡಲೇ ಇಲ್ಲವಲ್ಲಮ್ಮಾ....ಬಾ.... ಇಲ್ಲಿ ಕೂತುಕೋ, ಬಾ, ಕೂತುಕೋ.

ಶಾಂತಿ–(ಸಮೀಪಿಸುವಳು. ಕೂಡದೆ) ಪರವಾಗಿಲ್ಲ ಕಂಡ್ರೀ.

ರಾಮು–ಯಾಕೆ, ಕೂತುಕೋ. (ಕೂಡಿಸಿಕೊಂಡು) ತೊಗೋ. (ಒಂದು ಬೋಂಡ ನೀಡುವನು)

ಶಾಂತಿ–ಬೇಡಿ ಕಂಡ್ರೀ, ನೀವು ತಿನ್ನಿ. ತುಂಬ ಇದೆ ಒಳಗೆ. ನಾನು ಆಮೇಲೆ ಊಟದ ಜತೆಗೆ ತಿನ್ನುತ್ತೇನೆ.

ಕಿಟ್ಟಿ–ತಿನ್ನುವೆಯಂತೆ, ಈಗ ನಮ್ಮ ಜೊತೆಗೆ ಒಂದು ತೊಗೋ, ಪರವಾಗಿಲ್ಲ.

(ಶಾಂತಿ ತೊಗೊಂಡು ತಿನ್ನುತ್ತಿರುವಳು)

ಕಿಟ್ಟಿ–ನಮ್ಮ ಯಜಮಾನರ ಮಗಳಲ್ಲವೇನಮ್ಮಾ ನೀನು?

ಶಾಂತಿ–ಹೂಂ.



ರಾಮು–ನಿನ್ನ ಹೆಸರೇನಮ್ಮಾ?

ಕಿಟ್ಟಿ–(ಬಾಯಿಲಿ ಬೋಂಡವಿಟ್ಟುಕೊಂಡು) "ಶಾಂತೀ" ಅಂದರಲ್ಲೋ, ಆಗ ಅವರು ಆಶಾಂತಿಯಿಂದ ನಿಷ್ಕ್ರಮಿಸುವಾಗ ಶಾಂತ ಅಲ್ಲವೇ ನಿನ್ನ ಹೆಸರು?

ಶಾಂತಿ–ಹುಂ.

ರಾಮು–ಸ್ಕೂಲಿಗೆ ಹೋಗುತ್ತೀಯಾ ನೀನು?

ಶಾಂತಿ–ಇಲ್ಲ ಕಂಡ್ರೀ. ನಮ್ಮ ತಂದೆ ಬೇಡ ಅನ್ನುತ್ತಾರೆ.

ರಾಮು–ಕಿಟ್ಟಿ–ಯಾಕೆ?

ಶಾಂತಿ–ಹೆಂಗಸರಿಗೆ ಇಸ್ಕೂಲಿನಲ್ಲಿ ಹೇಳಿಕೊಡುವುದೆಲ್ಲಾ ದಂಡವಂತೆ.

ರಾಮು–ಏನು?

ಕಿಟ್ಟಿ–ದಂಡ?

ಶಾಂತಿ–ಹೂ ಕಂಡ್ರೀ. ಅಡಿಗೆ ಮಾಡುವವಳಿಗೆ ಉಂ....ಉಂ....ಅದೆಂಥದೋ ಜೀಬ್ರ–?

ಕಿಟ್ಟಿ–ಜೀಬ್ರ?

ರಾಮು–ಜೀಬ್ರ–ಓಹೋ, ಆಲ್ಜೀಬ್ರ ! ಆಲ್ಜೀಬ್ರಾನಾ?

ಶಾಂತಿ–ಹೂಂ ಹುಂ...ಅದೇ ಕಂಡ್ರೀ. "ಅಡಿಗೆ ಮಾಡುವವಳಿಗೆ ಆಲ್ಜೀಬ್ರ ಯಾಕೇ?" ಅನ್ನುತ್ತಾರೆ.

ರಾಮು–ಭಲೆ, ಸ್ಪೆಂಡಿಡ್ಡಾಗಿದೆ ಸೇಯಿಂಗು. ಕಿಟ್ಟೀ, ಸ್ಕೂಲು ಮೇಷ್ಟರು ನೀವು, ನಿಮ್ಮ ವಿದ್ಯಾರ್ಥಿನಿಯರ ಮುಂದೆ ಹೇಳಿಪ್ಪಾ.

ಕಿಟ್ಟಿ ಯಾಕೆ? ಈ ಹೋಲಾಗಿರುವ ಒಂದು ಬಾಡಿಯನ್ನ ಫಾಕ್ಟರೈಸ್ ಮಾಡಿ ಬೇರೆ ಬೇರೆ ಬ್ರಾಕೆಟ್ಟಿನಲ್ಲಿ ಹಾಕಿ ಬಿಸಾಡಲಿ ಅನ್ನುತ್ತೀಯೇನೋ! ಬೇಡ. ನನಗಿನ್ನೂ ಜೀವದ ಮೇಲೆ ಜುಗುಪ್ಸೆ ಹುಟ್ಟಿಲ್ಲ. (ಶಾಂತಿಗೆ) ಹುಂ, ಆಮೇಲೆ?

ಶಾಂತಿ–ಆಮೇಲೆ ಮತ್ತೆ...."ನೀವು ಗಂಡನ ಮನೆಗೆ ಹೋಗಿ ಗಣಿತ ಕಾಗುಣಿತ ಏನೂ ಒಪ್ಪಿಸಬೇಕಾಗಿಲ್ಲ, ಅವೆಲ್ಲಾ ಅವನೇ ಕಲಿತಿರುತ್ತಾನೆ; ಅವನಿಗೆ ಸಹಾಯಕ್ಕೆ ಅಷ್ಟು ಇಷ್ಟು ಸಂಸಾರಕ್ಕೆ ಬೇಕಾದದ್ದು ಕಲಿತುಕೊಳ್ಳಿ, ಸಾಕು" ಅನ್ನುತ್ತಾರೆ.

ರಾಮು–ಭೇಷ್, ಮುದುಕ ಪರವಾಗಿಲ್ಲ. (ಪಾರ್ಶ್ವ)

ಕಿಟ್ಟಿ–ಉಂ...ಆಮೇಲೆ.

ಶಾಂತಿ–ಅದಕ್ಕೇನೇ ನಮ್ಮ ಅಕ್ಕನ್ನ ಕೂಡ ಇಸ್ಕೂಲಿಗೆ ಸೇರಿಸಲೇ ಇಲ್ಲ.

ರಾಮು–ನಿನ್ನ ಅಕ್ಕ?

ಕಿಟ್ಟಿ–ಅಕ್ಕ?

ಶಾಂತಿ–ಹೂರೀ. ನಮ್ಮ ಪದ್ದಕ್ಕ...ಪದ್ಮಾದೇವೀ.

ರಾಮು–ಪ....ಪ....

ಕಿಟ್ಟಿ–ಪದ್ಮಾದೇವೀನೇ?

ಶಾಂತಿ–ಹೂರೀ. ನಾವು ಮನೆಯಲ್ಲಿ ಪದ್ದೂ, ಪದ್ಮಾ, ಪದ್ದೀ, ಪದ್ದಕ್ಕಾ ಅಂತ ಕರೆಯುತ್ತೇವೆ.

ಕಿಟ್ಟಿ–ಓಹೋ. ರಾಮೂ, ಊರಿಗೆ ಒಬ್ಬಳೇ ಅಲ್ಲ ಪದ್ಮಾವತಿ ! (ಶಾಂತಿಗೆ) ಆಗ ಸ್ವಲ್ಪ ಹೊತ್ತಿಗೆ ಮುಂಚೆ ಒಳಗೆ ಯಾರೋ ವೀಣೆ ಶೃತಿ ಮಾಡುತ್ತಿದ್ದ ಹಾಗಿತ್ತು–

ಶಾಂತಿ–ಅವಳೇರೀ....ತುಂಬ ಚೆನ್ನಾಗಿ ನುಡಿಸುತ್ತಾಳೆ.

ಕಿಟ್ಟಿ–ಭೇಷ್.....ರಾಮೂ–

ಶಾಂತಿ–ಆಮೇಲೆ, ಕೇಳ್ರೀ, ಈ ಕೇಸರಿಭಾತು, ಅವಳೇ ಮಾಡಿದ್ದು. ಸಿಹಿಯಾಗಲ್ಲವೇನ್ರೀ?

ರಾಮು–ತುಂಬ ಸ್ವೀಟಾಗಿದೆ.

ಕಿಟ್ಟಿ–ಅಯ್ಯೋ ಪಾಪ. ಇರದೇ ಉಂಟೆ, ಶಾಂತಿ?...ತುಂಬ ಸ್ವೀಟಾಗಿದ್ದೇ ಇರತ್ತೆ.

ಶಾಂತಿ–ನಮ್ಮ ಪದ್ದಕ್ಕ ಅಂದರೆ ಏನು ಅಂದುಕೊಂಡಿರಿ?...ಆದರೆ ನಮ್ಮ ಮನೆಯಲ್ಲಿ ಅಡಿಗೆಯವನಿಲ್ಲ ಅಂದುಕೊಳ್ಳಬೇಡಿ, ಇದಾನೆ. ಅವನಿದ್ದರೂ ಇವೆಲ್ಲಾ ನಮಗೂ ಮಾಡೊಕ್ಕೆ ಬರುತ್ತೆ.

ರಾಮು–ಹಾಂ? ಪರವಾಗಿಲ್ಲ.

ಶಾಂತಿ–ಆಮೇಲೆ ಈ ಜರ್ತಾರಿ ಲಂಗ ಅವಳೇ ಹೊಲಿದಿದ್ದು. ಈ ಟೇಬಲ್ ಕ್ಲಾತು, ಆ ಬಾಗಿಲು ಪರದೆ, ಎಲ್ಲಾ ಅವಳೇ–

ಕಿಟ್ಟಿ–ಹೌದಾ? ಭಲೆ ಭಲೆ ಭಲೆ....ಏನೋ, ಕ್ವಾಲಿಫಿಕೇಷನ್ಸ್ ತುಂಬ ಅರ್ರೆಸ್ಟಿಂಗಾಗಿವೆ.

ಶಾಂತಿ–ಮತ್ತೆ ಇಸ್ಕೂಲಿಗೆ ಹೋಗದೆ ಇದ್ದರೆ ಇಂಗ್ಲಿಷು ಬರೊಲ್ಲ ಅಂತ ತಿಳಿದುಕೊಳ್ಳಬೇಡಿ. ನಮ್ಮ ಪಂಕಜನಿಗಿಂತ ಜೋರಾಗೇ ಮಾತಾಡುತ್ತಾಳೆ.

ಕಿಟ್ಟಿ–(ಬಾಯಲ್ಲಿದ್ದ ಬೋಂಡ ಹೊರಗೆ ಬೀಳುವುದು) ಪಂ....ಪಂ....?

ರಾಮು–ಪಂಕಜಾ?

ಶಾಂತಿ–ಹೂ ಕಂಡ್ರೀ. ಪಂಕಜಕುಮಾರಿ.



(ಭಾಗೀರಥಿ ಒಳಗಿಂದ "ಶಾಂತಿ" ಎಂದು ಕೂಗುವರು. ಶಾಂತಿ ಸೋಫಾ ಇಳಿದು ಓಡುವಳು)

ಕಿಟ್ಟಿ–(ಓಡಿ ಹಿಡಿದು) ಶಾಂತೀ, ಶಾಂತೀ ಒಂದು ಮಾತು–

ಶಾಂತಿ–ಬಂದೆ ಕಂಡ್ರೀ, ಅಮ್ಮ ಕರೆಯುತ್ತಾಳೆ. (ಓಡುವಳು)

ಕಿಟ್ಟಿ–(ಹಿಂತಿರುಗಿ ಬರುತ್ತಾ) ರಾಮೂ, ಪಂಕಜ !

ರಾಮು–ಕಿಟ್ಟೀ, ಪದ್ಮ !

ಕಿಟ್ಟಿ–ಈ ಸಂಗಮ ನನಗೆ ಯಾಕೋ ಅರ್ಥವಾಗುತ್ತಾ ಇಲ್ಲ.

ರಾಮು–ಒಳ್ಳೆಯದಾಯಿತು ಬಿಡು. ಅಕಸ್ಮಾತ್ ಸಂಭವಿಸಿದ ಸಂಗಮಕ್ಕೆ ನಾವು ಜವಾಬ್ದಾರರಲ್ಲ. ಮೇಲೆ ಕೂತಿದಾನಲ್ಲ, ಚತುರ್ಮುಖ ಬ್ರಹ್ಮ ಹೀಗೆ ಆ ಕಡೆ ಈ ಕಡೆಯಿಂದ ತಂದು ಸೇರಿದರೆ, ನಾವೇನು ಮಾಡುವ ಹಾಗಿದ್ದೇವೋ?

ಕಿಟ್ಟ–ಏನು ಮಾಡುವುದೂ ಬೇಡ, ಸುಮ್ಮನೆ ಕೂಡಿಕೊಂಡು ಹೋಗೋಣ.

(ಶಾಂತಿ ಎರಡು ಕೈಯಲ್ಲೂ ಎರಡು ಕಾಫಿ ಲೋಟಗಳನ್ನು ಹಿಡಿದು ಪ್ರವೇಶಿಸುವಳು)

ಶಾಂತಿ–ಶ್, ಬಿಸಿ, ಬಿಸಿ, ಬಿಸಿ....ಹಾಂ–

ರಾಮು–(ಓಡಿ) ತ್ಸು ತ್ಸು ತ್ಸು ತ್ಸು, ಕೊಡು ಕೊಡು ಕೊಡು(ತೆಗೆದುಕೊಂಡು) ಇಷ್ಟು ಬಿಸಿ, ನೀನೇ ತಂದೀಯಾಮ್ಮ?

ಕಿಟ್ಟಿ–ಇನ್ನು ಯಾರು ತರಬೇಕಾಗಿತ್ತಪ್ಪಾ?

ರಾಮು–ಕಿಟ್ಟೀ!

ಕಿಟ್ಟಿ–(ಲೋಟ ಇಸಗೊಂಡು) ಶಾಂತಿ, ಇಲ್ಲಿ ಬಾ, ಇಲ್ಲಿ ಬಾ ಶಾಂತಿ, ಪಂಕಜ ಅಂದರೆ ಯಾರಮ್ಮಾ?

ರಾಮು–(ನಗುತ್ತಾ) ದೇವರೇ ಗತಿ ! ಆ ಹೆಸರನ್ನು ಇಟ್ಟುಕೊಳ್ಳುವುದೇ ಜನಗಳಿಗೆ ಕಷ್ಟವಾಗಿ ಹೋಯಿತೇ !....

ಕಿಟ್ಟಿ–ರಾಮು !

ರಾಮು–ಐ ಆಮ್ ಸಾರಿ...ಶಾಂತಿ, ಹೇಳಮ್ಮ, ಪಂಕಜ ಅಂದರೆ ಯಾರು, ಹೇಳಮ್ಮಾ.

ಶಾಂತಿ–ಅವಳು.... ಅವಳು... ಮತ್ತೆ... ನಮ್ಮ ತಾಯಿಗೆ ಉಂ... ಅದೇನೋ ಆಗಬೇಕೂರೀ....ನನಗೆ ಸರಿಯಾಗಿ ಗೊತ್ತಿರಾ. ಅಂತೂ ಅವಳನ್ನು ನಮ್ಮ ಗುಂಡಣ್ಣನಿಗೆ ಕೊಟ್ಟು ಮದುವೆ ಮಾಡಬೇಕೂ ಅಂತ ಇದಾರೆ. ಅಷ್ಟು–

ರಾಮು–ಕಿಟ್ಟೀ, ಬಾ, ಇಲ್ಲಿ ಬಾ. ಅವಳು ಬೇರೆಯವರ ಸ್ವತ್ತು. ಪರನಾರೀ ವಿಷಸಮ. ಬಿಡು ಆ ಯೋಚನೆಯನ್ನ.

ಶಾಂತಿ–(ರಾಮೂಗೆ) ಏನ್ರೀ, ಅವಳ ಮದುವೆಯನ್ನ ನಿಮ್ಮ ಮದುವೆಯ ಜೊತೆಗೇ ಮಾಡುತ್ತಾರಂತ್ರೀ...

ರಾಮು–ನನ್ನ ಮದುವೆ?

ಕಿಟ್ಟಿ–ಶಾಂತೀ–?

(ಭಾಗೀರಥಿ ಮತ್ತೆ "ಶಾಂತೀ" ಎಂದು ಕೂಗಲು ಶಾಂತಿ ಓಡುವಳು)

ರಾಮು–(ಹಿಂಬಾಲಿಸುತ್ತಾ) ಶಾಂತೀ, ಶಾಂತೀ, ಒಂದು ಮಾತು–

ಶಾಂತಿ–ಬಂದೆ ಕಂಡ್ರೀ...ಕೂಗಿದ ತಕ್ಷಣ ಹೋಗದಿದ್ದರೆ ಅಮ್ಮ ಚಟ್ಣಿ ಅರೆದುಬಿಡುತ್ತಾಳೆ. (ಓಡುವಳು)

ರಾಮು–ನನ್ನ ಮದುವೆ ಜೊತೆಯಲ್ಲಿ? ಏನೋ ಇದು?

ಕಿಟ್ಟಿ–ನನ್ನ ಏನು ಕೇಳುತ್ತೀಯಾ? (ಧೂಲ ತೋರುತ್ತಾ) ಅಲ್ಲಿ ಕೇಳು, ಭಗವಂತನ್ನ !

ರಾಮು–ಭಾವಾ ?

ಕಿಟ್ಟಿ–ಭಾವಾ ?

ರಾಮು–ಭಾವಾ ?

ಕಿಟ್ಟಿ–ಭಾವಾ ?

–ತೆರೆ–

## ದೃಶ್ಯ ೭

[ಸುಬ್ಬ, ರಂಗ್ಸಾಮಿ ಮತ್ತು ಗುಂಡ ರಸ್ತೆಗೆ ಪ್ರವೇಶಿಸುತ್ತಾ]

ಸುಬ್ಬ–ದಡ್ಡ ಬಡ್ಡಿಯಹೈದರು–

ರಂಗ–ದೇವರಿಲ್ಲ ಅನ್ನುತ್ತಾರೆ !

ಗುಂಡ–"ನಂಬಿ ಕೆಟ್ಟವರಿಲ್ಲವೋ ನಂಬದೆ ಕೆಟ್ಟರೆ ಕೆಡಲಿ"

ರಂಗ–ಕೆಡಲಿ.

ಸುಬ್ಬ–ನೆಗೆದು ಬಿದ್ದು ಹೋಗಲಿ.



ಗುಂಡ–ಅಲ್ರೋ, ಅವನಿಲ್ಲದೆ ಇದ್ದಿದ್ದರೆ, ಯಾರಾದರೂ ಡ್ರೈವರ್ ಒಬ್ಬನನ್ನೇ ಸ್ಟೇಷನ್ನಿಗೆ ಕಳುಹಿಸುತ್ತಿದ್ದರೇನೋ ಹೊಸದಾಗಿ ಮೊದಲ ಸರ್ತಿ ಮಗಳನ್ನು ನೋಡಕ್ಕೆ ಬರುತ್ತಿರುವವನ್ನ ರಿಸೀವ್ ಮಾಡೊಕ್ಕೆ?

ಸುಬ್ಬ–ಯಾರೂ ಹೀಗೆ ಮಾಡುತ್ತಿರಲಿಲ್ಲ. ನ್ಯಾಯವಾಗಿ ನಿಮ್ಮ ಫಾದರ್ರೆ ಸ್ಟೇಷನ್ನಿಗೆ ಹೋಗಬೇಕಿತ್ತು.

ಗುಂಡ–ಹೋಗಲಿಲ್ಲ. ಯಾಕೆ?

ರಂಗ–ಬಿಕಾಸ್ ದೇರ್ ಈಸ್ ಗಾಡ್ !

ಗುಂಡ–ಕರ್ರೆಕ್ಟ್ !

ಸುಬ್ಬ–ಆಮೇಲೆ– ಅವರ ಪಾಡಿಗೆ ಅವರು ಕಾರಿನಲ್ಲಿ ಮನೇಗೆ ಹೊರಟು ಹೋಗಿದ್ದರೆ ನಾವೇನು ಮಾಡೊಕ್ಕಾಗುತ್ತಿತ್ತೊ?

ರಂಗ–ದರಿದ್ರ ರೈಲು, ದಿನಾ ಅರ್ಧ ಗಂಟೆ ಲೇಟಾಗಿ ಬರುವುದು ಇವತ್ತು ಹೊತ್ತಿಗೆ ಸರಿಯಾಗಿ ಬಂದುಬಿಡುವುದೇ?

ಗುಂಡ–ದೇವರು ನೋಡಿದ. ನಮ್ಮ ಉದ್ಧಾರಕ್ಕೆ ತಟ್ ಅಂತ ಧರೆಗಿಳಿದ.

ಸುಬ್ಬ–ಕುದುರೆ ಲಾಳದ ಅವತಾರ ಎತ್ತಿ–

ರಂಗ–ಕಾರಿನ ಟೈರಿನ್ನ ಠೊಸ್ ಅನ್ನಿಸಿ–

ಗುಂಡ–ಕರ್ರೆಕ್ಟ್, ನಾವಾಗಿ ಹುಡುಕಿಕೊಂಡು ಹೋಗುತ್ತಿದ್ದ ಅಳಿಯ ಗೆಳೆಯಂದಿರನ್ನ ತಾನಾಗಿ ನಮ್ಮ ಬಾಯಿಗೆ ಬಡಿಸಿದ !

ಸುಬ್ಬ–ಬಡಿಸಿ, "ನಂಬಿದವರಿಗೆ ತನ್ನ ತೆತ್ತಿಹನು ಎಂಬ ಬಿರುದನು"

ರಂಗ–ಮೆರೆದು ಬಿಟ್ಟ! ಮೆರೆದು ಬಿಟ್ಟ !

ಸುಬ್ಬ–ಲೋ, ಗುಂಡ, ಅದು ಸರಿ. ಮಾತು ಮಾತು ಬೆಳೆಯುತ್ತಾ ನಿಮ್ಮ ಮನೆಯನ್ನ ಅವರಿಗೆ ಹೋಟಲು ಅಂತ ಹೇಳಿ ಕಳುಹಿಸೋ ಯೋಚನೆ ನಿನಗೆ ಹೇಗೆ–?

ರಂಗ–ಹೌದೋ, ಹೌದೋ, ನನಗೂ ಮೊದಲು ನೀನು ಹಾಗೆ ಹೇಳಿದಾಗ ತಬ್ಬಿಬ್ಬಾಯಿತು. ಆಮೇಲೆ ನಿನ್ನ ರಾಗಕ್ಕೇ–

ಸುಬ್ಬ–ನಾವೂ ತಾಳ ಹಾಕಿದೆವು.

ಗುಂಡ–ಅದು....ನಾನು...ಆವಾಗ ರೂಪಾಯಿ ಇಸಗೊಂಡು ಬರೊಕ್ಕೆ ಮನೆಗೆ ಹೋದೆನಲ್ಲಾ–

ಸುಬ್ಬ–ಹುಂ–?

ಗುಂಡ–ಆಗ ಶಾಂತಿ ಹೇಳಿದಳು–ಕೇಸರಿಭಾತು, ಜಿಲೇಬಿ, ಬೋಂಡ ಉಪ್ಪೇರಿ ಎಲ್ಲಾ ಮಾಡಿದ್ದಾರೆ ಅಂತ. ಇವರಿಗೆ ಇಳಿದುಕೊಳ್ಳೊಕ್ಕೆ ಜಾಗ ಬೇಕು–ಅಲ್ಲಿ ಈ ತಿಂಡಿಗಳಿರಬೇಕು–ಹೋಟಲ್ಲೇ ಸರಿ ಅಂತ ಅದೇನೋ ಹೊಳೆಯಿತು–ಅಷ್ಟೇ–ಬಾಗಿಲು ತನಕ ಸೇರಿಸಿಯೂ ಬಿಟ್ಟೆವು.

ಸುಬ್ಬ–ಏನೇನ್ ಅನಾಹುತ ಆಗಿಹೋಗಿರಬಹುದೋ ಅಲ್ಲಿ ಇಷ್ಟು ಹೊತ್ತಿಗೆ?

ರಂಗ–ನಿಮ್ಮ ಅಪ್ಪ ಒಂದು ಕಡೆ– ಈ ತಲೆಹರಟೆ ಕೃಷ್ಣರಾವ್–ನಿನ್ನ ಭಾವೀ ಭಾವ ಕೂಡ – ಅಲ್ಲಿ ಏನು ಮಾಡಿರುತ್ತಾರೋ–!

ಗುಂಡ–ಚೇಷ್ಟೆ ನಿನ್ನ ಸೃಷ್ಟಿಯದಾಯ್ತು, ಇಷ್ಟ ಬಂದೆಡೆ ಪೋಗುಂ–ಅಂದೆವು–ಈಗ ನಾನು ಮೆಲ್ಲಗೆ ಹೋಗಿ–ಯಾವ ಕಡೆಯಿಂದಲಾದರೂ ಮನೆ ಹೊಕ್ಕು–ನೋಡುತ್ತೀನಿ ನಾಟಕ–ನಾಳೆ ಬೆಳಗ್ಗೆ–

ರಂಗ–ಓ–ನಾವು ಕಾದಿರುತ್ತೇವೆ–

ಸುಬ್ಬ–ಅಷ್ಟು ಹೊತ್ತಿಗೇ–ಯಥಾಪ್ರಕಾರ–ಹೆಡ್‌ಕ್ವಾರ್ಟರ್ಸ್–

ರಂಗ–ಹುಣಸೇಮರ....

ಗುಂಡ–ರೈಟ್...ಟಾ ಟಾ.. ಛೀರಿಯೋ.

(ಬೇರೆ ಬೇರೆ ನಿಷ್ಕ್ರಮಿಸುವರು)

## ದೃಶ್ಯ ೮

[ಗೋವಿಂದರಾಯರ ಮನೆಯ ಹಾಲು. ಊಟದ ನಂತರ ರಾಮು, ಕಿಟ್ಟಿ ಮತ್ತು ರಾಯರು ಪ್ರವೇಶಿಸುವರು]

ರಾಮು–ದಯಮಾಡಿಸಬೇಕು.

ಕಿಟ್ಟಿ–ದಯಮಾಡಿಸಬೇಕು.

ರಾಮು–ಕೋಪಿಸಿಕೊಳ್ಳಬಾರದು, ನಾವು ಬಾಲಕರು, ಏನೋ ಅಂದೆವು.

ಕಿಟ್ಟಿ–ಅವರಿಗೆ ಗೊತ್ತಿಲ್ಲವೇನೋ? ಅವರೂ ನಮ್ಮ ಹಾಗೇ ಬಾಲಕರಾಗಿದ್ದವರೇ ಅಲ್ಲವೇನೋ?

ರಾಮು–ಹಾಳು ಹಸಿವೆ ಹೊತ್ತು. ಹೊಟ್ಟೆ–



ಕಿಟ್ಟಿ–ಎಂಥ ತಲೆಯುನ್ನಾದರೂ ಕೆಡಿಸಿಬಿಡುತ್ತೆ. ಕೂಡಿ. ಸಂಕೋಚಪಟ್ಟುಕೊಳ್ಳಬೇಡಿ.

ರಾಮು–ತಾವು ದೊಡ್ಡವರು, ನೀವು ಕೂತ ಮೇಲೇ–

ಕಿಟ್ಟಿ–(ಗೋವೂನ ಕೂಡಿಸಿ) ನಮ್ಮ ಬುದ್ಧಿ ಈಗ ಊಟವಾದ ಮೇಲೆ–

ರಾಮು–ಅದೂ ಎಂಥ ಊಟ ! ಅದು ಹೇಳು. ಆ ಪಾಯಿಸ–

ಕಿಟ್ಟಿ–ಆ ಚಿತ್ರಾನ್ನ–

ರಾಮು–ಆ ಕೂಟು–

ಕಿಟ್ಟಿ–ಆ ಗೊಜ್ಜು–

ರಾಮು–ಸಾರೊಂದೇ ಸಾಕೋ–

ಕಿಟ್ಟಿ–ಹಪ್ಪಳ ! ಬಾಯಿಲಿ ಇಡುತ್ತಿದ್ದ ಹಾಗೇ ಕರಗಿ–

ರಾಮು–ಪಲ್ಯ, ಕೋಸಂಬರಿ–

ಕಿಟ್ಟಿ–ಲಾಸ್ಟ್ ಬಟ್ ನಾಟ್ ಲೀಸ್ಟ್ ಅನ್ನುವ ಹಾಗೆ ಮೊಸರು–

ರಾಮು–ಇಂದ್ರ ಭವನ, ಚಂದ್ರಭವನ–

ಕಿಟ್ಟಿ–ಆನಂದ ಭವನಕ್ಕೂ ಇಂಪಾಸಿಬಲ್ಲು ಅನ್ನಬಾರದೇ? ಒಂದೇ ಮಾತಿನಲ್ಲಿ?

ರಾಮು–ಅಲ್ಲದೆ, ಎಷ್ಟು ಹೋಮ್ಲಿಯಾಗಿತ್ತೋ? ನಮ್ಮ ಮನೆಯಲ್ಲೇ ಊಟ ಮಾಡುತ್ತಿದ್ದ ಹಾಗಿತ್ತು. ಸ್ವಾಮೀ, ನಮ್ಮ ದೇಶ ಇಷ್ಟು ಮುಂದುವರಿದಿದೆ ಅಂತ ನಾವು ತಿಳಿದಿರಲಿಲ್ಲ.

(ಶಾಂತಿ ಊದಿನಕಡ್ಡಿ, ದಾನಿ, ವೀಳೆಯದೆಲೆ ತರುವಳು)

ಕಿಟ್ಟಿ– ಓ ಹೋ ಹೋ ಇವೆಲ್ಲಾ–?

ಗೋವು–ಏನಿಲ್ಲ, ಊಟವಾದ ಮೇಲೆ ವೀಳೆಯದೆಲೆ....ನಮ್ಮ ಮನೆ ಹಿತ್ತಲ ತೋಟದ್ದೇ. ಎಳೆ ಚಿಗುರು, ತೊಗೊಳ್ಳಿ.

ರಾಮು–ನಾವೇ?

ಕಿಟ್ಟಿ–ಛೀ ಛೀ.

ರಾಮು–ನಾವಿನ್ನೂ ಬ್ರಹ್ಮಚಾರಿಗಳು

ಕಿಟ್ಟಿ–ಅದರಲ್ಲೂ ವೀರವೈಷ್ಣವ ಬ್ರಹ್ಮಚಾರಿಗಳು.

ರಾಮು–ಮುಂಜಿಯ ಮುಹೂರ್ತದಲ್ಲಿ ಮುಸುಕಿನಲ್ಲಿ ಮಾತು ಕೊಟ್ಟಿದ್ದೇವೆ, ಮರ ಹತ್ತೊಲ್ಲ, ಎಲೆ ತಿನ್ನೊಲ್ಲ–ಅಂತ,

ಕಿಟ್ಟಿ–ಕೊಟ್ಟ ಮಾತಿಗೆ ತಪ್ಪಬಹುದೇ? ಲಗ್ನ ಮಂಟಪದಲ್ಲಿ ಕೂತುಕೊಳ್ಳಬೇಕು; ಹೊರಗೆ ಓಲಗ ಊದುತ್ತಿರಬೇಕು. ತಾಂಬೂಲ ಭಾವ ಮೈದುನನ ಕಡೆಯಿಂದ ಹೊರಟು ಬರಬೇಕು. ಆಗ ನಾವು ಅದನ್ನು ಚರ್ವಣಿಸಬೇಕೇ ಹೊರತು–

ಗೋವು–ಆ ಹಾಹಾಹಾಹಾಹಾ, ನಿಮಗೆ ನಿಮ್ಮ ಕಡೆ ಹೋಟಲುಗಳಲ್ಲಿ ಬೀಡ ಅಂತ ಮಡಚಿ, ಅದಕ್ಕೆ ಕುಲಗೆಟ್ಟ ಮಸಾಲೆಗಳನ್ನೆಲ್ಲಾ ಬೆರಸಿ ಕೊಟ್ಟರೆ, ಸೋಟೆ ಹರಿದು ಹೋಗುವ ಹಾಗೆ ತುರುಕಿಕೊಳ್ಳುತ್ತೀರೇನೋ? ತೊಗೊಳ್ಳಿ, ತೊಗೊಳ್ಳಿ, ಕಂಡಿದ್ದಾರೆ.

ರಾಮು–ಕಿಟ್ಟಿ, ಹಿರಿಯರು ಇಷ್ಟು ಹೇಳಿದ ಮೇಲೆ–

ಕಿಟ್ಟಿ–ಕಿರಿಯವರು ಅವರ ಮಾತನ್ನು ಉಲ್ಲಂಘಿಸುವುದು ಸರಿಯಲ್ಲ. ಆದ್ದರಿಂದ–

ರಾಮು–ರಾಯರೇ, ಒಪ್ಪಿಸಿಕೊಂಡೆವು. (ಅಡಿಕೆ ಬಾಯಿಗೆ ಹಾಕಿಕೊಳ್ಳುವನು)

ಕಿಟ್ಟಿ–(ಅಡಿಕೆ ಬಾಯಿಗೆ ಹಾಕಿಕೊಳ್ಳುತ್ತಾ) ಡಿಟ್ಟೋ!

ರಾಮು–ಸುಣ್ಣ–?

ಗೋವು–(ನಕ್ಕು) ಸುಣ್ಣ ಎಲ್ಲಿರತ್ತೆ ಇಲ್ಲಿ?

ಕಿಟ್ಟಿ–ಮತ್ತೆ?

ಗೋವು–(ನಗುತ್ತಾ) ಅದೇ, ಅದೇ ವ್ಯತ್ಯಾಸ, ನಿಮ್ಮ ಕಡೆಗೂ ಇಲ್ಲಿಗೂ.

ಶಾಂತಿ–ನಿಮ್ಮ ಕೈಯೆಲ್ಲಾ ಕೊಳೆಯಾಗತ್ತೆ, ಆಮೇಲೆ ಆ ಎಲೆನಾರೆಲ್ಲಾ ಇಲ್ಲಿ ಕಸ ಬೀಳತ್ತೆ ಅಂತ ನಾವೇ ಸುಣ್ಣ ಹಚ್ಚಿ ರೆಡಿ ಮಾಡಿಟ್ಟಿರುತ್ತೇವ್ರೀ. ಇಲ್ಲಿ ನೋಡಿ. (ಒಂದು ಎಲೆ ಎತ್ತಿ ಅದರ ಹಿಂಭಾಗ ತೋರುವಳು)

ಗೋವು–ನೋಡಿದಿರಾ?

ರಾಮು–ವಂಡರ್‌ಫುಲ್. ನಮ್ಮ ಕಡೆ ಖಂಡಿತ ಇಷ್ಟು ಯೋಚನೆ ಮಾಡೊಲ್ಲ.

ಕಿಟ್ಟಿ–ನಿಜ, ನಿಜ. ನಿಜ. ಯಜಮಾನ್ರೇ, ಈ, ಈ, ಈ ನಿಮ್ಮ ಹುಡುಗಿ, ಇವಳು, ಈ ಚೋಟಿ, ಬಲು ಚೂಟಿ !

ಗೋವು–ಇವನೇ ? ಶಾಂತಿನೇ?

ರಾಮು–ಹುಂ. ಮಾತು ತುಂಬ ಚಮತ್ಕಾರವಾಗಿ ಆಡುತ್ತಾಳೆ.

ಗೋವು–ಆದರೂ ಸ್ಕೂಲಿಗೆ ಕಾಲಿಟ್ಟಿಲ್ಲ!

ರಾಮು–ಹೌದು ಹೌದು. ಅದೇನು ನೀವು ಇವರನ್ನು ಸ್ಕೂಲಿಗೆ ಹೋಗಕೂಡದು ಅನ್ನುತ್ತೀರಂತಲ್ಲಾ?



ಕಿಟ್ಟಿ–ಈಗ ಎಲ್ಲಾ ಕಡೆಯೂ ಸ್ತ್ರೀವಿದ್ಯಾಭ್ಯಾಸ, ಸ್ತ್ರೀ ವಿದ್ಯಾಭ್ಯಾಸ ಅಂತ ಕೂಗುತ್ತಾ ಇರುವಾಗ–

ಗೋವು–ಕೂಗಲಿ, ಕೂಗಲಿ, ಸುಮ್ಮನೆ ಕೂಗಿದರಾಗಲಿಲ್ಲ. ನಾನೂ ಸ್ತ್ರೀ ವಿದ್ಯಾಭ್ಯಾಸ ಬೇಡ ಅನ್ನೊಲ್ಲ. ಗಂಡ ಬರೆದ ಕಾಗದ ಬೇರೆಯವರ ಕೈಯಲ್ಲಿ ಓದಿಸಬೇಕು ಅನ್ನೊಲ್ಲ.

ರಾಮು–(ನಗುತ್ತಾ) ಚೆನ್ನಾಗಿ ಹೇಳಿದಿರಿ.

ಕಿಟ್ಟಿ–(ನಗುತ್ತಾ) ಹುಂ? ಹುಂ?

ಗೋವು–ಹೆಂಗಸರಿಗೆ ವಿದ್ಯೆ ಅಂದರೆ ನನ್ನ ಅರ್ಥ ಬೇರೆ. ಈಗ ಅವರು ಮಾಡುತ್ತಿರುವುದು ವಿದ್ಯಾಭ್ಯಾಸ ಅಲ್ಲ, ವಿದ್ಯಾಭ್ಯಾಸ–ವಿದ್ಯ–ಅಭಾಸ !

ಕಿಟ್ಟಿ–...ಉಂ...ಒಂದು ವಿಧದಲ್ಲಿ ನೀವು ಹೇಳುವುದು ಸರಿ ಅಂತಲೇ ಅನ್ನಬಹುದು. ನಾನೂ ಸ್ಕೂಲು ಮೇಷ್ಟರೇ. ನಾವು ಹೇಳಿಕೊಡುವ ಪಾಠ ಅವರಿಗೆ ಲೈಫಿನಲ್ಲಿ ಅಷ್ಟು ಪ್ರಯೋಜನ ಅಂತ ನನಗೂ ಅನ್ನಿಸೊಲ್ಲ.

ಗೋವು–ಪ್ರಯೋಜನವಾಗೋಕ್ಕೆ ಅಲ್ಲಿ ಏನಾದರೂ ಇದ್ದರೆ ತಾನೇ? ಒಂದು ಅಡಿಗೆಗೆ ಪ್ರಯೋಜನವೇ? ಒಂದು ಕೆಲಸಕ್ಕೆ ಪ್ರಯೋಜನವೇ?– ಇಷ್ಟೆಲ್ಲಾ ಯಾಕೆ, ನಿಮ್ಮ ಪಂಕಜ–

ಕಿಟ್ಟಿ–ಆಂ?

ಗೋವು–ಅಂದರೆ ನಿಮ್ಮ ಸ್ಕೂಲಿನಲ್ಲಿ ಓದಿದ ಪಂಕಜ–ಮೆಟ್ರಿಕ್ಯುಲೇಷನ್ ಪ್ಯಾಸು ಮಾಡಿದಾಳೆ–

ರಾಮು–ಕಿಟ್ಟೀ–

ಕಿಟ್ಟಿ–ಹೂಂ?

ಗೋವು–ಇಲ್ಲಿ ಕೇಳಿ. ಮೊನ್ನೆ ಅಗ್ಗಿಷ್ಟಿಕೆಯ ಮೇಲೆ ಹಾಲಿಟ್ಟಿತ್ತು ಕಾಯೋಕ್ಕೆ. ಉಕ್ಕು ಬಂತು. ಅದನ್ನು ಇಳಿಸೋಕ್ಕೆ ಕೈಯಲ್ಲಿ ಹರಿಯದೆ, "ಅವಳೇ" "ಇವಳೇ" ಅಂತ ಮನೆ ಮಂದಿಯವರನ್ನೆಲ್ಲಾ ಕೂಗಾಡಿದಳು. ಕೊನೆಗೆ ಎಲ್ಲೋ ಇದ್ದ ನಮ್ಮ ಪದ್ಮ ಬಂದು ಇಳಿಸಿದಳು.

ರಾಮು–ತ್ಸು ತ್ಸು ತ್ಸು ತ್ಸು ತ್ಸು, ನೋಡೀ–

ಗೋವು–ಎಂದಾದರೂ ಒಲೆ ಮುಂದೆ ಹೋಗಿದ್ದರಲ್ಲವೇ ಭಕ್ಷಭೋಜ್ಯ ಬೇಡ, ಲಕ್ಷಣವಾಗಿ ಒಂದು ಬಟ್ಟಲು ಕಾಫಿ ಮಾಡೊಕ್ಕೆ ಬರುತ್ತೇನು ಕೇಳಿ. ಊಹು. ಇದು...ಏನಾಗಿ ಹೋಗಿದೆ ಅಂದರೆ, ಕೆಲಸಕ್ಕೆ ಬಾರದ ವ್ಯಾಕರಣ, ಆ ಕಲನ, ಈ ಕಲನ, ಸಂಕಲನ, ಅಂತ ಕಲಿತು ಮುಗಿಸುವುದರೊಳಗೆ ಗಂಡನ

ಮನೆಗೆ ಹೋದ ತಕ್ಷಣ ಸಂಸಾರ ಸಾಗಿಸೊಕ್ಕೆ ಬೇಕಾಗುವ ಒಂದು ವಿದ್ಯೆಯನ್ನು ಕಲಿಯಕ್ಕೂ ಪುರಸೊತ್ತು ಸಿಗೊಲ್ಲ.

ಕಿಟ್ಟಿ–ಹೌದು ಅನ್ನಿ...ಅದಕ್ಕೇ ತಾವು ತಮ್ಮ ಹಿರಿಯ ಮಗಳನ್ನೂ–

ಗೋವು–ಪದ್ದೂನೇ?

ಕಿಟ್ಟಿ–ಹೂಂ...ಪದ್ಮಾದೇವಿಯವರನ್ನ....ಅವರನ್ನ ಸ್ಕೂಲಿಗೆ ಕಳುಹಿಸಿಯೇ ಇಲ್ಲವಂತೆ.

ರಾಮು–ಆದರೂ ಇಂಗ್ಲಿಷು ಚೆನ್ನಾಗಿಯೇ ಮಾತಾಡುತ್ತಾರಂತೆ?

ಗೋವು–(ನಕ್ಕು) ಯಾರು ಹೇಳಿದರು ನಿಮಗೆ?

ಕಿಟ್ಟಿ–ಇಗೋ! (ಶಾಂತಿಯ ಬೆನ್ನು ಚಪ್ಪರಿಸುವನು)

ಗೋವು–ಏನೇ, ಎಲ್ಲ ಪುರಾಣವೂ ಊದಿಬಿಟ್ಟಿದ್ದೀಂಯಾ ಆಗಲೇ?...ಆಂ?...ಬಲು...ಬಲು ಹರಟೆಮಲ್ಲಿ ಇವಳು....ಪದ್ದೂ ದೊಡ್ಡ ದೊಡ್ಡ ಇಂಗ್ಲಿಷು ಪುಸ್ತಕಗಳನ್ನೂ ನೀರು ಕುಡಿದ ಹಾಗೆ ಓದುತ್ತಾಳೆ. (ಕಿಟ್ಟಿಗೆ) ನಿಮ್ಮ ಮೆಟ್ರಿಕ್ಯುಲೇಷನ್ ಪಂಕಜನಿಗಿಂತ ಚೆನ್ನಾಗಿ ಮಾತಾಡುತ್ತಾಳೆ.

ಕಿಟ್ಟಿ–ಓ....ಆಮೇಲೆ, ಈ ಲಂಗ ಅವರೇ ಹೊಲಿದಿದ್ದಂತೆ?

ಗೋವು–ಈ ಷರಟು ! ನೀವು ನಂಬುತ್ತೀರೋ ಇಲ್ಲವೋ, ಇದನ್ನೂ ಅವಳೇ ಹೊಲಿದಿದ್ದು. ಮೆಷೀನಿದೆ ಮನೆಯಲ್ಲಿ. ಎರಡು ವರ್ಷ ದರ್ಜಿಯನ್ನ ಮನೆಗೆ ಕರೆಸಿ ಪಾಠ ಹೇಳಿಸಿದೆ. ಉಳಿಯಿತೋ ಕೂಲಿ ! ಹೊಲಿಗೆ ಏನು ಕಡಿಮೆಯಾಗಿದೆ? ಅಥವಾ ಸ್ವಲ್ಪ ಕಡಿಮೆ ಇತ್ತು, ಇರಲಿ ಏನಂತೀಗ? ಮಗಳು ಹೊಲಿದಿದ್ದು ಅಂತ ಹೆಮ್ಮೆಯಿಂದ ಹಾಕಿಕೊಳ್ಳಬಹುದೋ?...ಎಲ್ಲಿ, ಅದೇ ನಿಮ್ಮ ಪಂಕಜನ ಕೈಯಲ್ಲಿ ಒಂದು ಹೊಲಿಗೆ ಹಾಕಿಸಿ ನೋಡೋಣ ! ಸೂಜಿಗೆ ದಾರ ಪೋಣಿಸಲಿ ಸಾಕು ! (ನಕ್ಕು) ಅದು ಯಾವ ಪಾಪಿ ಅವಳನ್ನು ಮದುವೆ ಮಾಡಿಕೊಳ್ಳುತ್ತಾನೋ ಕಾಣೆ. ಒಂದು ಕೋಟಿನ ಗುಂಡಿ ಅಕಸ್ಮಾತ್ ಕಿತ್ತು ಹೋದರೆ, ಅಂಗಿಯನ್ನು ಕೈಯಲಿ ಹಿಡಿದುಕೊಂಡು ಅಂಗಡಿ ಬೀದಿ ಉದ್ದ ಓಡಬೇಕು ಅವನು, ದರ್ಜಿಯನ್ನು ಹುಡುಕಿಕೊಂಡು !

ರಾಮು–ಏನು ಮಾಡುವುದು? ಅವನ ಹಣೆಬರಹ ! ಏನೋ, ಕಿಟ್ಟೀ–?

ಕಿಟ್ಟಿ–ಹುಂ...ಏನು ಮಾಡುವುದು? ...ಉಂ....ರಾಯರೇ...ಎಲ್ಲಕ್ಕಿಂತ ಮುಖ್ಯವಾದ್ದೇ ನೀವು ಹೇಳಲಿಲ್ಲವಲ್ಲಾ–

ಗೋವು–ಏನು?

ಕಿಟ್ಟಿ–ಅವರು ವೀಣೆ ತುಂಬ ಸೊಗಸಾಗಿ ನುಡಿಸುತ್ತಾರಂತಲ್ಲಾ?



ಗೋವು–ಎರಡು, ಎರಡು ಸಾವಿರ ರೂಪಾಯಿ–

ಕಿಟ್ಟಿ–ಆಂ? ಓಹೋ, ಒಂದು ಕಚೇರಿಗೆ ಎರಡು ಸಾವಿರ ರೂಪಾಯೇ?

ಗೋವು–ಕಚೇರಿಗಲ್ಲ, ಕಲಿಸೊಕ್ಕೆ, ಕಲಿಸೊಕ್ಕೆ ಎರಡು ಸಾವಿರ ರೂಪಾಯಿ ಖರ್ಚು ಮಾಡಿದೆ ಅಂದೆ.

ಕಿಟ್ಟಿ–ಓಹೋ, ಅದೇ ಆಗ...ಒಳಗೆ ಶ್ರುತಿ ಮಾಡುತ್ತಿದ್ದ ಹಾಗೆ ಕೇಳಿಸಿತು. ಒಳ್ಳೆ ನಾದ.

ಗೋವು–ಶೇಷಣ್ಣನವರ ಕಾಲದ್ದು, ನಾನ್ನೂರು ರೂಪಾಯಿ ಕೊಟ್ಟು ಸ್ಪೆಷಲ್ಲಾಗಿ ತರಿಸಿದ್ದು.

ಕಿಟ್ಟಿ–ಇರಬೇಕಿರಬೇಕು ನಾನಂದುಕೊಂಡೇ ನಮ್ಮ ಮೈಸೂರು ಕಡೆಯ ನಾದ ನಮಗೆ ಗೊತ್ತಾಗೊಲ್ಲವೇ?...ಯಜಮಾನರೇ, ತಾವೇನೂ ತಿಳಿದುಕೊಳ್ಳದೆ ಹೋದರೆ, ಹುಡುಗರು, ಮೈಸೂರು ಹುಡುಗರು, ವೀಣೆ ಹುಚ್ಚು....ನೀವು ಕ್ಷಮಿಸುತ್ತೀರಿ, ನಿಮ್ಮ ಮಗಳು ನುಡಿಸುವುದನ್ನು ಕೇಳುವ ಭಾಗ್ಯ–

ಗೋವು–ಅಯ್ಯೋ ಯ್ಯೋ ಯ್ಯೋ ಯ್ಯೋ–ಎಷ್ಟೆಷ್ಟು ಉದ್ದ ಮಾತು ಬೆಳೆಸುತ್ತೀರೋ ಸುಮ್ಮಸುಮ್ಮನೆ? ವೀಣೆ ಕೇಳಬೇಕು ಅಂದರೆ ಮುಗಿಯಿತು. (ಶಾಂತಿ ಒಳಗೆ ಓಡುವಳು) ಅಗೋ, ಟೆಲಿಗ್ರಾಫ್ ತಂತಿ–ಓಡಿತು...ಮುಟ್ಟಿಸಿ ಬಿಡುತ್ತಾಳೆ ಮೆಸ್ಸೇಜು. ಇನ್ನು ನಾಲ್ಕು ನಾಲ್ಕು ಎಲೆ ಜಗಿಯಿರಿ, ಅಷ್ಟರಲ್ಲಿ–ಬಂದೆ (ಹೊರಟು ಬಾಗಿಲು ಮುಟ್ಟಿ, ಹಿಂತಿರುಗಿ ನೋಡುತ್ತಾ, ಕಿಟ್ಟಿಗೆ) ರ್ರೀ, ಹೈಸ್ಕೂಲು ಮೇಷ್ಟರೇ, ನಿಮ್ಮ ಹೈಸ್ಕೂಲು ಗ್ರಾಜುಯೇಟು, ಪಂಕಜ, ಸಂಗೀತದಲ್ಲೂ ಅಷ್ಟೇ! (ಮರೆಯಾಗುವರು)

ರಾಮು–ಕಿಟ್ಟೀ, ಕೇಳಿದೆಯೇನೋ? ನಿಮ್ಮಪಂಕಜ, ನಿಮ್ಮ ಪಂಕಜ ನಿಮ್ಮ ಪಂಕಜ ಅಂತ ಮೂರು ಮುಕ್ತಾಯ ಹೊಡೆದೇಬಿಟ್ಟ ಮುದುಕ, ಲೋ, ಈಗ ನಳ ಆ ದಮಯಂತಿಯನ್ನ ಅರ್ಧ ದಾರಿಯಲ್ಲಿ ಬಿಟ್ಟು ಹಾಗೇ, ನೀನೂ ನಿನ್ನ ಆ ಪಂಕಜನ್ನ ಬಿಟ್ಟು ಈ ಪಂಕಜನ್ನೇ ಯಾಕೀ ಕಟ್ಟಿಕೊಳ್ಳಬಾರದು?

ಕಿಟ್ಟಿ–ಹೇಗೋ? ನೀನೇ ಹೇಳಿದಿ ಮೂರು ಮುಕ್ತಾಯ ಅಂತ. ಮಾತು ಮಾತಿಗೆ ಅವಳ ಮುಖಕ್ಕೆ ಮಂಗಳಾರತಿ ಎತ್ತುತ್ತಲೇ ಇದಾನೆ, ಹೇಗೆ ಅವಳ ಕುತ್ತಿಗೆಗೆ ತಾಳಿ ಕಟ್ಟಲೋ? ಅಲ್ಲದೆ, ರಾಮೂ, ಅಷ್ಟು ಹೊತ್ತಿನಿಂದ ಈ ರಮಣೀಮಣಿಯರು ಅವರಿವರ ಬಾಯಿಲಿ ಉಸಿರಾಡುತ್ತಾ, ನಾಲಿಗೆಗಳ ಮೇಲೆ ನಲಿದಾಡುತ್ತಾ ಇದ್ದರೇ ಹೊರತು ಕಣ್ಣು ಮುಂದೆ ಪ್ರತ್ಯಕ್ಷವೇ ಆಗವಲ್ಲರಲ್ಲೋ!...ಅಂದ ಹಾಗೇ, ಭಾವಾ–

ರಾಮು–ಭಾವಾ?

ಕಿಟ್ಟಿ–ಹೂಂ. ಆಗ ನಿನ್ನ ನಾದಿನಿ ಊಟಕ್ಕೆ ಎಬ್ಬಿಸಿದಳಲ್ಲೋ, "ಭಾವಾ" ಅಂತ ಕೂಗಿ–

ರಾಮು–ಹೌದೋ, ಗಲಾಟೆಯಲ್ಲಿ ಮರೆತಿದ್ದೆ. ಏನು ಇದ್ದೀತು ಇವರ ಮಸಲತ್ತು ಅನ್ನುತ್ತೀನಿ?

ಕಿಟ್ಟಿ–ಏ–ನಿಲ್ಲ. ಇಲ್ಲಿ ಕೇಳು. ಪಂಕಜನ್ನ ನನಗೆ ಕಟ್ಟಿ, ಪದ್ಮನ್ನ ನಿನ್ನ ಕುತ್ತಿಗೆಗೆ ತೂಗಿ ಹಾಕುವ ಹಾಗೆ ಕಾಣುತ್ತೆ ಪ್ಲಾನು. ಇಷ್ಟರಲ್ಲೇ ಮುದಿಗಿಣಿ ಮದುವೆ ಮಾತು ಎತ್ತುತ್ತೆ ನೋಡುತ್ತಿರು.

ರಾಮು–ಕಿಟ್ಟೀ–

ಕಿಟ್ಟಿ–ಆಂ?

ರಾಮು–ಒಂದು ವಿಚಾರ–

ಕಿಟ್ಟಿ–ಏನು?

ರಾಮು–ಈ ಪದ್ಮ, ಒಂದು ವೇಳೆ ನೋಡೊಕ್ಕೆ ಲಕ್ಷಣವಾಗಿದ್ದು, ಸಂಗೀತವೂ ಚೆನ್ನಾಗಿತ್ತು ಅಂದರೆ, ಯಾಕಾಗಬಾರದು?

ಕಿಟ್ಟಿ–ಏನು?

ರಾಮು–ಮದುವೆ,

ಕಿಟ್ಟಿ–ಯಾರ?

ರಾಮು–ನಮ್ಮ. ಏನೋ ಮಾವ ಹೋಟಲ್ಲಿಟ್ಟಿದ್ದನೆ ಅಂತ ಜನ ಅಂದುಕೊಳ್ಳಬಹುದು. ಅಂದುಕೊಳ್ಳಲಿ. ಹೋಟಲ್ಲನ್ನು ನಾವು "ಮಾವನ ಮನೆ" ಅಂತ ಹೇಗೋ ಅಂದೇ ಅನ್ನುತ್ತೇವಲ್ಲಾ?

ಕಿಟ್ಟಿ–ಸರಿ ಹೋಯಿತು. ಇದೀಗ ಸರಿ ಹೋಯಿತು. ಅಲ್ಲವೋ, ಅಲ್ಲಿ ಕಾದಿದ್ದಾನಲ್ಲೋ ನಿಮ್ಮ ಮಾವ, ಅಳಿಯ ಬರಲಿಲ್ಲವೇ ಅಂತ, ಗೋವಿಂದರಾಯ, ಅವನ ಗತಿ ಏನೋ?

ರಾಮು–ಗೋ–ವಿಂದ! ನಾವೇನು ಮಾಡೊಕ್ಕಾಗತ್ತೆ? ಕಾರು ಕೆಟ್ಟಿತು, ಅಪಶಕುನ ಆಯಿತು ಅಂದರೆ ಮುಗಿಯಿತು.

ಕಿಟ್ಟಿ–ಸರಿ. ಸರಿ ಮುಗಿಯಿತು.

(ಗೋವು ಪ್ರವೇಶಿಸಿ)

ಗೋವು–ಅಂ...ನಾವು ಸ್ವಲ್ಪ ಹೀಗೆ ಹೀಗೆ ಕೂತರೆ, ಅವರು ಹಾಗೆ ಹಾಗೆ ಕೂತುಕೊಳ್ಳೊಕ್ಕೆ ಸರಿ ಹೋಗುತ್ತೆ....ತಿಮ್ಮಾ....ತಿಮ್ಮಾ....



ತಿಮ್ಮ–(ಪ್ರವೇಶಿಸಿ) ಸೋಮೇ?

ಗೋವು–ಆ ವೀಣೆ ತಂದು ಇಲ್ಲಿರೋ..... (ತಿಮ್ಮ ನಿಷ್ಕ್ರಮಿಸುವನು)

ಕಿಟ್ಟಿ–ರಾಯರೇ, ನನಗೆ ಒಂದು ಲೋಟ ಸೀನೀರು ಅಪ್ಪಣೆಯಾದರೆ–

ಗೋವು–ಲ್ರೇ....ಬಂದೆ. (ತಾವೇ ಹೋಗುವರು)

ರಾಮು–ಏನೋ, ಬಾರಿ ಕಚೇರಿಗೇ ಏರ್ಪಾಡು ಮಾಡುವ ಹಾಗಿದೆ!

ಕಿಟ್ಟಿ–ಮಾಡಲೇಳು. ಮುಕಸಟ್ಟೆ ಪುಣ್ಯ–ಕೂತು ಸುಖವಾಗಿ ಕೇಳೋಣ.

(ತಿಮ್ಮ ವೀಣೆ ತಂದಿಟ್ಟು ಹೋಗುವರು. ಗೋವು ಪ್ರವೇಶಿಸಿ ಹಿಂದೆ ನೋಡುತ್ತಾ)

ಗೋವು–ಬಾ, ಬಾ, ಪರವಾಗಿಲ್ಲ, ಬಾ.

(ಪದ್ಮ ಪ್ರವೇಶಿಸುವಳು, ಸೆರಗಿಗೆ ಶಾಂತಿ)

ಅಲ್ಲಿ ಕೂತುಗೋ. ನೀನೂ ಅಲ್ಲೇ ಕೂತುಕೊಳ್ಳೇ ಮಗ್ಗುಲಲ್ಲಿ. (ಪದ್ಮ, ಶಾಂತಿ ಕೂಡುತ್ತಿರಲು) ಅವಳೆಲ್ಲೇ?

ಶಾಂತಿ–ಅಮ್ಮನಾ? ಬರುತ್ತಿದ್ದಾಳೆ.

ಕಿಟ್ಟಿ–ರಾಯರೇ, ಒಂದು ಕಪ್ಪು ಸೀನೀರು ಅಂದಿದ್ದೆ.

ಗೋವು–ಓ...(ಬಾಗಿಲಲ್ಲಿ ಕಾಣಿಸಿಕೊಂಡ ಭಾಗೀರಥಿಗೆ) ಆ ಪಂಕಜ ಏನು ಮಾಡುತ್ತಿದ್ದಾಳೇ? ಒಂದು ಲೋಟ ನೀರು ತೊಗೊಂಡು ಬಾರೇ–

ಭಾಗೀ–(ಒಳಭಾಗ ನೋಡಿ) ತಂದಳು. (ಮುಂದೆ ಬರುವರು)

ಗೋವು–ಪಂಕಜಾ !

(ಪಂಕಜ ಹೊಸಿಲ ಬಳಿ ನಿಂತು, ಕಿಟ್ಟಿಯನ್ನು ನೋಡಿ, 'ಓ' ಎಂದವಳೇ ಲೋಟವೆತ್ತಿ ಹಾಕುವಳು!)

ಭಾಗಿ–ಪಂಕಜಾ !

ಗೋವು–ಯಾಕೇ? ಏನಾಯಿತೇ?

ಪಂಕ–ಕೈ...ಕೈ ಜಾರಿತು...ಬೇರೆ ತರುತ್ತೇನೆ. (ಲೋಟವೆತ್ತಿ ಮರೆಯಾಗುವಳು)

ಗೋವು–(ಕಿಟ್ಟಿಯನ್ನು ನೋಡಿ) ಯಾಕೆ? ಯಾಕೆ? ನಿಮಗೇನಾಯಿತು?

ರಾಮು–ಏನಿಲ್ಲ, ಏನಿಲ್ಲ, ಗಾಬರಿಯಾಗಬೇಡಿ. ಇವನಿಗೆ ಒಂದೊಂದು ಸರ್ತಿ ಹೀಗಾಗುತ್ತಾ ಇರುತ್ತೆ. ಈ ಹೃದಯ ಇದೆಯಲ್ಲಾ....ಇದು ಜಾಗ ಬಿಟ್ಟು ಎಲ್ಲೆಲ್ಲೋ ಹೋದ ಹಾಗೆ ಆಗಿ, ಒಂದು ಥರಾ ಆಗುತ್ತೆ. ಅವರು ನೀರು ತಂದರೆ, ಅದು ಸ್ವಸ್ಥಾನಕ್ಕೆ ಬರುತ್ತೆ. ಆದ್ದರಿಂದ ಸ್ವಲ್ಪ ಬೇಗ–

ಗೋವು–(ಎದ್ದು) ನಾನೇ ತರುತ್ತೇನೆ. (ಪಂಕಜ ನೀರು ತರುವಳು) ಇಲ್ಲಿ ಕೊಡಿಲ್ಲಿ, ತಿರುಗಿ ಎತ್ತಿಹಾಕಿ, ಅವರ ಮೈ ಮೇಲೆ ಸುರಿದೀಯೇ...ಹಹಹ, ಏನು ಹುಡುಗಿಯರು !...ನೀನೂ ಅಲ್ಲಿ ಕೂತುಕೋ....ತೊಗೊಳ್ಳಿ.

ಕಿಟ್ಟ–ಥಾಂಕ್ಸ್ (ಇಸಗೊಂದು ಕುಡಿಯುತ್ತಿರಲು)

ಭಾಗೀ–ಏನು ಹಾಡಲಿ ಅನ್ನುತ್ತಾಳೆ?

ರಾಮು–ಯಾವುದಾದರೂ, ಅವರ ಇಷ್ಟ. ಹೆಚ್ಚು ಶ್ರಮ ಬೇಡ.

ಗೋವು–ಶ್ರಮ ಗಿಮ ಏನಿಲ್ಲ....ಯಾವುದಾದರೂ ನುಡಿಸೇ. (ಪದ್ಮ ನುಡಿಸುವಳು) ಬಾಯಿಲೂ ಹೇಳು, ಪರವಾಗಿಲ್ಲ. (ಹಾಡುವಳು. ನಂತರ)

ರಾಮು–ಕಿಟ್ಟ–ಭೇಷ್, ಭೇಷ್, ತುಂಬ ಸೊಗಸಾಗಿತ್ತು. ಒಳ್ಳೆ ಕೈ, ಯಜಮಾನರೇ!

ಗೋವು–(ನಕ್ಕು) ಅವಳ ಮೇಷ್ಟರೂ ಅದೇ ಹೇಳುತ್ತಾರೆ. ಇನ್ನೂ ರಾಗ–ತಾನ–ಕೇಳಬೇಕು–

ಭಾಗಿ–ಕೇಳುತ್ತಾರೆ ಬಿಡಿ. ಎಲ್ಲಿ ಹೋಗಿದೆ? ಈಗ ನೀವು ಮಾತಿಗೆ ಆರಂಭಿಸಬೇಡಿ, ಬೆಳಗಾಗಿ ಹೋಗತ್ತೆ. ಅವರು ಮಲಗಿಕೊಳ್ಳಲಿ. ರೈಲು ಪ್ರಯಾಣ, ಆಯಾಸ. ನೀವು ನಡೆಯಿರೇ, (ಪದ್ಮ, ಪಂಕಜ, ಶಾಂತಿ ನಿಷ್ಕ್ರಮಿಸುವರು) ತಿಮ್ಮಾ, ವೀಣೆ ಎತ್ತಿಕೊಂಡು ಹೋಗಿ ಚಿಕ್ಕಮ್ಮಾವರ ರೂಮಿನಲ್ಲಿಡೋ. (ತಿಮ್ಮಾ ಬಂದು ತೆಗೆದುಕೊಂಡು ಹೋಗುವನು)

ಗೋವು–ನೀವು ಮಲಗಿಕೊಳ್ಳಿ ಹೋಗಿ. ತಿಮ್ಮ ಹಾಸಿಗೆಗಳು ಹಾಸಿದ್ದಾನೆ. ಬೆಳಗ್ಗೆ ಬೇಕಾದಷ್ಟು ಮಾತಾಡೋಣ. ಲೇ, ಹೂಜಿಯಲ್ಲಿ ನೀರು–(ಭಾಗೀರಥಿ ನಿಷ್ಕ್ರಮಿಸುವರು)

ರಾಮು–ಯಜಮಾನರೇ, ತಾವೇನೂ ತಿಳಿದುಕೊಳ್ಳದಿದ್ದರೆ ಇನ್ನೊಂದು ವಿಷಯ ತಮಗೆ ತಿಳಿಸಬೇಕು.

ಗೋವು–ಏನು?

ರಾಮು–ನಮ್ಮದು ಒಂದು ಕೆಟ್ಟ ಅಭ್ಯಾಸ.

ಗೋವು–ಆಂ? ಹೊಗೆ ಬಂಡಿ ತಾನೇ? ಊದುಬತ್ತಿ? ಬಿಳಿಯದು? ಬಾಗಿಲು ಹಾಕಿಕೊಂಡು ಏನಾದರೂ ಮಾಡಿಕೊಳ್ಳಿ.

ರಾಮು–ಉ ಹು ಹು...ಅದಲ್ಲ. ನಾವು ಸಿಗರೇಟು ಸೇದೊಲ್ಲ. ನಾಳೆ ಬೆಳಗ್ಗೆಯ ವಿಚಾರ...ತಿಂಡಿ ಏನು ಮಾಡಿಸುತ್ತೀರಿ?



ಗೋವು–ಆಂ?

ರಾಮು–ಅದೇ. ಕೆಟ್ಟ ಅಭ್ಯಾಸ ಅಂದೆನಲ್ಲಾ, ನಮಗೆ ಬೆಳಗಾಗಿ ಎದ್ದು ಹಾಸಿಗೆ ಬಿಡಬೇಕಾದರೆ, ಎರಡೆರಡು ಇಡ್ಲಿ, ಅಕ್ಕಿಯದಾದರೂ ಆಗಬಹುದು. ರವೆಯದಾದರೂ ಆಗಬಹುದು; ಬೆಣ್ಣೆ, ಹಸುವಿನದಾದರೂ ಆಗಬಹುದು, ಎಮ್ಮೆಯಾದಾದರೂ ಆಗಬಹುದು; ಸಿದ್ಧವಾಗಿರಬೇಕು.

ಕಿಟ್ಟಿ–ಲೋ, ಅಲ್ಲವೋ, ಈಗ ಅಲ್ಲಿ ಬಾಳೆ ಎಲೆ ಒಂದು ಬಿಟ್ಟು ಬಿಡಿಸಿದ್ದೆಲ್ಲಾ ಬಕಾಸುರನ ಹಾಗೆ ಹೊಟ್ಟೆಗೆ ತುಂಬಿಕೊಂಡು–

ರಾಮು–ನಾನು ಈಗಿನ ಮಾತು ಹೇಳುತ್ತಿಲ್ಲಯ್ಯಾ–ನಾಳೆ ಬೆಳಗ್ಗಿನ ತನಕ ಅವು ಹೊಟ್ಟೆ ಒಳಗೆ ಹಾಗೇ ಕೂತಿರುತ್ತೇನೋ? (ಗೋವೂಗೆ) ನಮ್ಮದು ಒಂದು ತರಹ ಮುಂಜಾಗ್ರತೆ ನೋಡಿ. ಆದ್ದರಿಂದ ಹೇಳಿದೆ. ನಮಗೆ ಇಷ್ಟ ಅಂತ ನೀವು ನಾಲ್ಕು ನಾಲ್ಕು ಸಾಗುಮಸಾಲೆ ಹಾಕಿಸಿ ಕಳುಹಿಸಿದರೆ–?

ಕಿಟ್ಟಿ–ಲೋ, ಸಾಕು ಸುಮ್ಮನಿರೋ, ಡೋಂಟ್ ಬಿ ಸಿಲ್ಲಿ. (ಗೋವೂಗೆ) ತಾವೇನೂ ತಿಳಿದುಕೊಳ್ಳಬೇಡಿ, ಇವನು ಯಾವಾಗಲೂ ಹೀಗೇ....ನಡಿಯೋ, ರಾಮು.

ಗೋವು–(ನಕ್ಕು) ಹುಡುಗರು...ಹುಡುಗರು...ಆಂ...ರಾತ್ರಿ ನೀವೇನಾದರೂ ಏಳಬೇಕಾದರೆ–

ರಾಮು–ನಾವೇ? ರಾತ್ರಿಯೇ? ಏಳುವುದೇ? ಊಹೂ, ಏಳೊಲ್ಲ. ರಾತ್ರಿ ಇರಲಿ, ಬೆಳಿಗ್ಗೆಯೂ ಏಳೊಲ್ಲ. ಮಧ್ಯಾಹ್ನವಾದರೂ ಏಳೊಲ್ಲ– ಆ ಇಡ್ಲಿ, ಕಾಫಿ, ಮಂಚದ ಮಗ್ಗುಲಲ್ಲಿ ಪ್ರತ್ಯಕ್ಷ ಕೂತು, "ನಾವಿಲ್ಲಿ ಇದ್ದೇವೆ, ಕಣ್ಣು ಬಿಡಿ" ಅಂತ ಅಭಯ ಕೊಡುವವರಿಗೂ–

ಗೋವು–(ನಕ್ಕು) ಕೆಟ್ಟ ಅಭ್ಯಾಸ ಆಗಲಿ...ಅದೇನು ಮಹಾ....ಮಲಗಿಕೊಳ್ಳಿ ಹೋಗಿ....(ತಾವೂ ನಿಷ್ಕ್ರಮಿಸುವರು)

ರಾಮು–ಕಿಟ್ಟಿ, ಏನು ಹೇಳುತ್ತೀಯಾ?

ಕಿಟ್ಟಿ–ಯಾವುದಕ್ಕೆ?

ರಾಮು–ಪದ್ಮ

ಕಿಟ್ಟಿ–ಪದ್ಮ ಬಿ ಹ್ಯಾಂಗ್ಡ್–

ರಾಮು–ಆಂ?

ಕಿಟ್ಟಿ–ಆಲ್ ರೈಟ್. ಟು ಯುವರ್ ನಕ್ಕು...ನಾಳೆ ಬಂದರೂ ಬರುತ್ತೇನೆ ಅಂತ ಹೇಳಿದ ನಿಮ್ಮ ಅಪ್ಪ ಬರದೆಯೇ ಹೋದರೆ, ಈ ಪದ್ಮನಿಗೇ ಒಪ್ಪಿಸುವ

ಪ್ಲಾನ್ ಯೋಚನೆ ಮಾಡಬಹುದು...ಮಾಡೋಣ...ಬಟ್, ವ್ಹಾಟ್ ಅಬೌಟ್ ಪಂಕಜ?

ರಾಮು–ಹೌದು. ಅವಳು ಯಾಕೆ ಇಲ್ಲಿಗೆ ಬಂದಳು?....ಲೋ, ಕಿಟ್ಟಿ, ನೀನು ಹೇಳಿದೆಯಲ್ಲಾ, ಅದು ಯಾರೋ –ಚಿಕನ್ ಪಾಕ್ಸೋ, ಸ್ಮಾಲ್ ಪಾಕ್ಸೋ– ಚಿಕ್ಕಮನ್ನೋ, ದೊಡ್ಡಮ್ಮನೋ ಇದಾರೆ–ಅಲ್ಲಿಗೆ ಹೋಗಿರಬಹುದು ಅಂದೆಯಲ್ಲಾ, ಇವರೇ ಇರಬಹುದಾ ಆ – ?

ಕಿಟ್ಟಿ–ಇವರಾ? ನೆವರ್. ಇಂಪಾಸಿಬಲ್.... ಅವಳು ಎಂಥ ಮನೆ ತನದವಳು, ಈ ಹೋಟಲಿನವರ ಸಂಬಂಧ.

ರಾಮು–ಮತ್ತೆ ಇಲ್ಲಿ ಯಾಕಿದ್ದಾಳವಳು? ಅಲ್ಲದೆ, ಅವಳನ್ನು ಅದು... ಆ ಚಿಲ್ವಾರಿ...ಅಣ್ಣನೋ ಯಾರೋ ಗುಂಡಣ್ಣನಿಗೆ ಕೊಟ್ಟು ಮದುವೆ ಅಂದಳು!

ಕಿಟ್ಟಿ–ಹೌದು...ಒಂದೂ ಅರ್ಥವೇ ಆಗುತ್ತಾ ಇಲ್ಲವಲ್ಲೋ! ಈಗ ಏನಾದರೂ ಮಾಡಿ ಅವಳನ್ನು ಮೀಟ್ ಮಾಡಿದರೆ ವಿಷಯ ಗೊತ್ತಾಗುತ್ತೆ. ಹೇಗೆ–?(ಶಾಂತಿ ಒಂದು ಹೂಜಿ ನೀರು ಲೋಟ ತರುವಳು)

ಶಾಂತಿ–ರಾತ್ರಿ ಕುಡಿಯೊಕ್ಕೆ ನೀರು ಬೇಕಾದರೆ ಕೊಟ್ಟು ಬಾ ಅಂದ್ರೂ ರೀ.

ರಾಮು–ಥಾಂಕ್ ಯೂ.

ಶಾಂತಿ–ನೋ ಮೆನ್ಷನ್....ನನಗೂ ಇಂಗ್ಲಿಷ್ ಬರುತ್ರೀ,

ರಾಮು–ಜಾಣೆ. ಜಾಣೆ. (ಶಾಂತಿ ಹಿಂತಿರುಗುತ್ತಿರಲು)

ಕಿಟ್ಟಿ–ಶಾಂತೀ, ಶಾಂತೀ–(ಹೋಗಿ ತಡೆದು) ಸ್ವಲ್ಪ ಬಾ....

ಶಾಂತಿ–ಏನ್ರೀ?

ಕಿಟ್ಟಿ–(ರಾಮೂಗೆ) ಮೆಲ್ಲಗೆ ಇವಳ ಹತ್ತಿರ ಒಂದು ಮೆಸೇಜ್ ಕಳುಹಿಸಿದರೆ, ರಾತ್ರಿ ಹನ್ನೆರಡು ಗಂಟೆಗೆ ಇಲ್ಲಿ ಮೀಟ್ ಮಾಟು ಅಂತ?

ರಾಮು–ಬಹಳ ಅಪಾಯ ಕಣೋ.

ಕಿಟ್ಟಿ–ಏನು ಮಾಡುವುದು? ದಿ ಕೋರ್ಸ್ ಆಫ್ ಟ್ರೂ ಲವ್ ಕೆನ್‌ನೆವರ್ ಸ್ಮೂತ್ ಶಾಂತಿ, ಒಂದು ನಿಮಿಷ ಇರಮ್ಮ, ಬಂದೆ, ಜಾಣೀ.... (ತನ್ನ ಕೋಣೆಗೆ ಓಡುವನು)

ರಾಮು–(ತನಗೂ ಇದು ಸುಸಮಯ!) ಏನಮ್ಮ, ಶಾಂತಿ, ನಿನಗೆ ಮಲಗಿಕೊಳ್ಳೊಕ್ಕೆ ತುಂಬ ಹೊತ್ತಾಯಿತಲ್ಲವಾ?

ಶಾಂತಿ–ದಿನಾ ಆಗುತ್ತೇನ್ರೀ....? ಇಂಥ ದಿವಸ ಆಗಲೇಬೇಕು....ಆಗುತ್ತೆ.

ರಾಮು–ನಿನಗೂ ಸಂಗೀತ ಬರುತ್ತಾ?



ಶಾಂತಿ–ಓ. ವರ್ಣಗಳೆಲ್ಲಾ ಆಗಿದೆ. ನನಗೆ ಬೇರೆ ಇನ್ನೊಂದು ಪುಟ್ಟ ವೀಣೆ ಇದೇರೀ.

ರಾಮು–ಓಹೋ. ನೀನೂ ನಿಮ್ಮಕ್ಕನ ಜೊತೆಗೇ ನುಡಿಸು. ಚೆನ್ನಾಗಿ ಅಭ್ಯಾಸ ಆಗುತ್ತೆ.

ಶಾಂತಿ–ಅವಳು ಜಂಭದ ಕೋಳಿ ಕಂಡ್ರೀ. "ನನ್ನ ಜೊತೆಗೆ ಈಗಲೇ ನುಡಿಸಬೇಡ, ಇನ್ನೂ ಕಲಿತುಕೊಳ್ಳಬೇಕು" ಅನ್ನುತ್ತಾಳೆ.

ರಾಮು–"ನಿನ್ನಷ್ಟು ದೊಡ್ಡವಳಾದರೆ ನಾನು ನಿನಗಿಂತ ಚೆನ್ನಾಗಿ ನುಡಿಸುತ್ತೇನೆ" ಅಂತ ದಬಾಯಿಸಬೇಕು.

ಶಾಂತಿ–ಆ ಹಾ ಹಾ, ಹಾಗೆ ದಬಾಯಿಸಿದರೆ, "ನಾಳೆಯಿಂದ ಪಾಠ ಹೇಳಿಕೊಡೊಲ್ಲ ಹೋಗಿ" ಅನ್ನುತ್ತಾಳೆ.

ರಾಮು–"ಬೇಡವೇ ಬೇಡ, ನಾನೂ ಬೇರೆ ಮೇಷ್ಟರ ಹತ್ತಿರವೇ ಕಲಿತುಕೊಳ್ಳುತ್ತೀನಿ" ಅನ್ನು.

ಶಾಂತಿ–ಉ ಹು ಹು ಅದು ಯಾಕ್ರೀ? ಅವಳಿಗೆ ಅಷ್ಟೊಂದು ದುಡ್ಡು ಖರ್ಚು ಮಾಡಿ ಹೇಳಿಸಿ, ತಿರುಗಿ ನನಗೂ ಯಾಕ್ರೀ ಖರ್ಚು? ಅವಳೇ ಹೇಳಿಕೊಡಬೇಕು.

ರಾಮು–ಹುಂ...ಹುಂ...ಹೌದು...ಶಾಂತಿ...ಇಲ್ಲಿ ಬಾ.. ಆ ಮಾತಿರಲಿ....ನೀನು....ಆಗ....

ಶಾಂತಿ–ಉಂ?

ರಾಮು–"ಕಾಫಿ ಕುಡಿದಾಗಿದ್ದರೆ ಊಟಕ್ಕೇಳಬೇಕಂತೆ. ಭಾವಾ" ಅಂದಿಯಲ್ಲಾ– ಅದೇನು ಹಾಗೆಂದರೆ?

ಕಿಟ್ಟ–(ಶಿವಪೂಜೆಯಲ್ಲಿ ಕರಡಿ ಬಿಟ್ಟಂತೆ ನುಗ್ಗಿ) ಆಂ, ಶಾಂತಿ, ಇಲ್ಲಿ ಬಾ– ಇಲ್ಲಿ ನೋಡು, ಈ ಕರ್ಚೀಫು, ನಿಮ್ಮ ಪಂಕಜಂದು.. ತೊಗೊಂಡು ಹೋಗಿ ಕೊಡುತ್ತೀಯಾ, ಜಾಣೆ?

ಶಾಂತಿ–ಓ ಎಲ್ರೀ? ಇದೇನ್ರಿ? ಕೆ.ಆರ್. ಅಂತ ಹಾಕಿದೆ ಮೂಲೆಯಲ್ಲಿ, ಅಗಸನ ಗುರುತು? ಪಂಕಜಂದಾಗಿದ್ದರೆ "ಪಿ" ಅಂತ ಇರಬೇಕಿತ್ತು ಅಲ್ಲವೇನ್ರೀ?

ಕಿಟ್ಟ–ಆಂ ಊಂ ಹೌದು ಹೌದು – ಹಾಗೇ ಇರಬೇಕಿತ್ತು. ಆದರೆ ಅವರ ಮನೆಯಲ್ಲಿ ಯಾವ ಕೆ.ಆರ್....ಅಂತೂ ಅದು ಅವರದೇ....ಅಲ್ಲಿ, ಅವರು ಕೂತಿದ್ದರಲ್ಲಾ, ಅಲ್ಲಿ ಬಿದ್ದಿತ್ತು. ಕೊಟ್ಟುಬಿಡಮ್ಮಾ, ಜಾಣೆ.

ಶಾಂತಿ–ಸರಿ, ಕೊಡುತ್ತೀನ್ರೀ.

ಕಿಟ್ಟ–ಅವರ ಕೈಗೇ ಕೊಡಬೇಕು.

ಶಾಂತಿ–ಹೂಂ. ನೀವು ಕೊಟ್ಟರಿ ಅಂತ ಹೇಳಿಯೇ ಕೊಡುತ್ತೀನಿ. (ಹೊರಡುವಳು)

ರಾಮು–ಶಾಂತಿ, ಶಾಂತಿ, ನಾನು ಕೇಳಿದ್ದು–

ಭಾಗಿ–(ಬಾಗಿಲ ಬಳಿ ಕಾಣಿಸಿಕೊಂಡು) ನೀರಿನ ಹೂಜಿ ಕೊಟ್ಟು ಬಾರೇ ಅಂದರೆ ಏನು ಮಾಡುತ್ತಿದ್ದೀಯೇ ಅಷ್ಟು ಹೊತ್ತಿನಿಂದ? ನಡಿಯೇ. (ರಾಮು : ಕಿಟ್ಟಿಗೆ) ಅತೀ ಹರಟೆ ಇವಳದು. (ಶಾಂತೀ ಸಮೇತ ನಿಷ್ಕ್ರಮಿಸುವರು)

ಕಿಟ್ಟ–ಅಬ್ಬ! ಏನು ಘಾಟೀನೋ ಅವಳು? ಕರ್ಚೀಫ್ ತೊಗೊಂಡು ಹೋಗಿ ಕೊಡು ಅಂದರೆ ಧೋಬಿ ಗುರುತು ನೋಡಿದಳಲ್ಲಾ !

ರಾಮು–ಮುದುಕ ಟೆರ್ರಿಬಲ್ ಫೆಲೋ! ಓಲ್ಡ್ ಕ್ಯೂರಿಯಾಸಿಟಿ ಷಾಪಿನ ಪ್ರೊಪ್ರೈಟರ್ ಕಂಡ ಹಾಗೆ ಕಂಡರೂನೂ, ಇಟ್ಟಿರುವ ಸರಕೆಲ್ಲಾ ಆಪ್ ಟು ಡೇಟೇ !

ಕಿಟ್ಟ–ಇನ್ನೂ ಒಂದು ಹೆಜ್ಜೆ ಮುಂದೇನೇ !

ರಾಮು–ಹೌದೋ, ಅದೇನೋ ಮೆಸೇಜ್ ಕಳುಹಿಸುತ್ತೇನೆ ಅಂದಿ. ಬರಿ ಕರ್ಚೀಫ್ ಕಳುಹಿಸಿದಿ?

ಕಿಟ್ಟಿ–ಬರಿ ಕರ್ಚೀಫಲ್ಲ ಅದು, ಬಿಳಿ ಕರ್ಚೀಫು. ಅದರ ಮೇಲೆ ಹಾರ್ಡ್ ಕಾಪೀಯಿಂಗ್ ಪೆನ್ಸಿಲ್ಲಿನಲ್ಲಿ ಬರೆದಿದೆ. ಬರಿ ಕಣ್ಣಿಗೆ ಕಾಣೊಲ್ಲ ಅಕ್ಷರಗಳು. ನೀರಿನಲ್ಲಿ ಅದ್ದಿದರೆ, ಚೆನ್ನಾಗಿ ಕಾಣಿಸಿಕೊಳ್ಳುತ್ತವೆ–ಅಂತ ಅವಳಿಗೆ ಗೊತ್ತಿದೆ.

ರಾಮು–ಓಹೋ, ನನಗೆ ಗೊತ್ತಿರಲಿಲ್ಲ. ನೀವಿಂಥ ರಿಸರ್ಚ್ ಸ್ಕಾಲರ್ರುಗಳು, ಅಲ್ಲ, ರಿಸರ್ಚ್ ಸ್ಕೌಂಡ್ರೆಲ್ಲುಗಳು ಅಂತ. ಹೋಗಲಿ ಬಿಡಿ ನಿಮ್ಮ ತಪ್ಪಲ್ಲ. ಹಳೆ ಕಾಲದ ಪದ್ಧತಿಯವರು. ಆ ದ್ವಾಪರಯುಗದಲ್ಲಿ, ದೇವರು ಅನ್ನಿಸಿಕೊಂಡಿರುವ ಆ ಕೃಷ್ಣ, ಮದುವೆ ಮನೆಗೇ ನುಗ್ಗಿ ರುಕ್ಮಿಣಿಯನ್ನು ಹಾರಿಸಿಕೊಂಡು ಹೋದನಂತೆ. ಆ ಕೃಷ್ಣನ ಹೆಸರನ್ನು ಹೊತ್ತಿರುವ ನೀನು ಈ ಕೆಟ್ಟ ಕಲಿಯುಗದಲ್ಲಿ ಹೀಗೆ ಸಿಂಪಲ್ಲಾಗಿ ಒಂದು ಸಂದೇಶ ಯಾಕೆ ಕಳುಹಿಸಬಾರದು? ತಪ್ಪಿಲ್ಲ. ಅಲ್ಲದೆ ಆಲ್ ಈಸ್ ಫೇರ್ ಇನ್ ಲವ್ ಆರ್ ವಾರ್! ಬಾ, ಬಾ, ಹನ್ನೆರಡು ಗಂಟೆಗೆ ಅಂತ ಬರೆದಿದ್ದಿ. ಬಳಲಿಕೆಗೆ ಗೊರಕೆ ಹಾಕುತ್ತಾ ಮಲಗಿದಿ ಅಂದರೆ, ಸದಾರಮೆ ನಾಟಕ ಆಗಿ ಹೋದೀತು. ಬಾ.

–ತೆರೆ–



## ದೃಶ್ಯ ೯

[ಅದೇ ಸ್ಥಳ. ರಾತ್ರಿ ಹನ್ನೆರಡು ಗಂಟೆ ಸಮಯ.
ಗುಂಡ ಕಳ್ಳನಂತೆ ಪ್ರವೇಶಿಸಿ ಅತ್ತಿತ್ತ ನೋಟ]

ಗುಂಡ–ಉಂಂ....ಮಗ ಮನೆ ಮಗ–ಒಬ್ಬನೇ ಮಗ ಮುಂದಿನ ಯಜಮಾನ. ವಂಶದ ಆಧಾರಸ್ಥಂಭ, ಕಂಭ. ಇಂಥ ನನ್ನ, ಎಲ್ಲಿ, ಎತ್ತ, ಏನಾದ, ಇದಾನೆಯೇ ಹೋದನೇ ಅಂತ ಒಂದಷ್ಟೂ ಮನಸ್ಸಿಗೆ ಹಚ್ಚಿಕೊಳ್ಳದೆ ಮಾಡಿದ ಅಡಿಗೆಯನ್ನು ಮೂಗು ಮಟ್ಟ ಹೊಡೆದು, ಸೂರು ಹಾರಿ ಹೋಗುವ ಹಾಗೆ ಗೊರಕೆ ಹೊಡೆಯುತ್ತಾ ಮಲಗಿದ್ದಾರಲ್ಲಾ ಎಲ್ಲರೂನೂ? ಇದು ನ್ಯಾಯವಾ? ನ್ಯಾಚುರಲ್ಲಾ? ನೋ. ಅಲ್ಲ. ಆ ಶಾಂತಿಯೇನಾದರೂ ರೂಪಾಯಿ ಕೊಡದೆ ಹೋಗಿದ್ದಿದ್ದರೆ ನನ್ನ ಗತಿ ಏನಾಗಬೇಕಿತ್ತು? ಉಂ.... ಹೋಗಲಿ, ಊಟವಂತೂ ಇಲ್ಲ, ನಿದ್ದೆಯಾದರೂ ಮಾಡೋಣ. (ಕೋಣೆ ಬಾಗಿಲು ಸೇರಿ, ಒಳಗೆ ತಲೆ ಚಾಚಿ ನೋಡಿ) ಓ ಹೋ ಹೋ! ಸರಿ, ನಿದ್ದೆಗೂ ಚಕ್ಕರ್ರು! ಅಳಿಯ ಗೆಳೆಯ ಅತಿಕ್ರಮಿಸಿದ್ದಾರೆ ನನ್ನ ಅಂತಃಪುರವನ್ನ! ಆಂ? ನಾನು ಎಲ್ಲಿಗೆ ಹೋಗುವುದೀಗ? ಗ್ಯಾರೇಜೇ ಗತಿಯೋ?..... ಇವರೆಲ್ಲಾ ಹೀಗೆ ನಿರಾತಂಕವಾಗಿ ನಿದ್ದೆ ಹೊಡೆಯುತ್ತಿರುವುದು ನೋಡಿದರೆ ನನ್ನ ಪ್ಲಾನು ಫಟ್ಟಾದ ಹಾಗೆ ಕಾಣುತ್ತಲ್ಲಾ ! (ಮತ್ತೆ ನನ್ನ ಕೋಣೆ ಕಡೆ ಹೋಗಿ, ನೋಡಿ, ಹಿಂತಿರುಗಿ) ಹೌದು, ಅಳಿಯನೇನೋ ಕುಂಭಕರ್ಣನ ಅಪರಾವತಾರದ ಹಾಗೆ ನಿದ್ರಾದೇವಿಯನ್ನು, ಪದ್ಮಾದೇವಿ ಬರುವವರೆಗೂ ಇರಲಿ ಅಂತ ವರಿಸಿ, ಮೈ ಮರೆತಿದಾನೆ. ಆಲ್‌ರೈಟ್....ಆದರೆ ಈ ಗೆಳೆಯ ಯಾಕೆ ತನ್ನ ಮೂತಿಯನ್ನ ತನ್ನ ಅಲಾರಂ ಗಡಿಯಾರದ ಮೂತಿಗೆ ತಾಕಿಸಿಕೊಂಡು ಪಿಳಿಪಿಳಿ ಪಿಳಿ ನೋಡುತ್ತಿದ್ದಾನೆ? (ಗಡಿಯಾರ ಹನ್ನೆರಡು ಹೊಡೆಯುವುದು. ಅಲಾರಂ ಹೊಡೆಯುವುದು. ಒಡನೆ ನಿಲ್ಲಿಸಲ್ಪಡುವದು) ಓ, ನೋಡುತ್ತಿರುವುದು ಸಾಲದೂ ಅಂತ ಇಟ್ಟುಕೊಂಡೂ ಇದಾನೆ! ಅಲಾರಮ್ಮು ! ಅರ್ಧ ರಾತ್ರಿಗೆ ! (ಈ ಕಡೆ ನೇಪಥ್ಯದಲ್ಲಿ ಲೋಟ ಎಡವಿದ್ದ ಸದ್ದು) ಅಲೆಲೆ, ಈ ಕಡೆ ಯಾರೋ ಲೋಟ ಎಡವಿದರು ! (ವಾಸನೆ ಎಳೆದು) ಕುಂತಳ ರಂಜನಿ! ಕಾಮಿನಿಯಾ ಯಿಲ್ ವಾಸನೆ ! (ಕಿವಿಗೊಟ್ಟು ಕೇಳಿ) ಬಳೆ ಶಬ್ದ? ! ಯಾವ ಲೋಲಲೋಚ ನಗೆ ಇಷ್ಟು ಹೊತ್ತಿನಲ್ಲಿ ಇಲ್ಲಿ ಕೆಲಸ ! ಆಂ? (ನೋಡಿ) ಅಲೆಲೆಲೆ ಇವಳು? ಬಾಲಿಕಾ ಮಣಿ ! ನನ್ನ ಒಲ್ಲದ ನಲ್ಲೆ ! ಪಂಕಜ ! ಇವಳು ಯಾಕೆ ಬರುತ್ತಾ ಇದಾಳೆ ? ಏನೋ ಸ್ವಾರಸ್ಯವಾಗಿರುವ ಹಾಗಿದೆಯೇ ನಾಟಕ!

ಇಲ್ಲಿ ಮರೆಯಾಗಿ ನೋಡೋಣ. (ಸೋಫಾ ಹಿಂದೆ ಅವಿತಿಟ್ಟುಕೊಳ್ಳುವನು)

ಪಂಕಜ–(ಹೆದರಿದ ಜಿಂಕೆಯಂತೆ ಅತ್ತಿತ್ತ ನೋಡುತ್ತ ಪ್ರವೇಶಿಸಿ, ಕರ್ಚೀಪು ಬಿಚ್ಚಿ) ರಾತ್ರಿ....ಹನ್ನೆರಡು ಗಂಟೆಗೆ....ಹನ್ನೆರಡು ಹೊಡೆಯಿತಲ್ಲಾ ! (ರೂಮಿನಿಂದ ಕಿಟ್ಟಿ ಬರುತ್ತಿರುವುದನ್ನು ಕಂಡು) ಓ!

ಕಿಟ್ಟಿ–(ಪ್ರವೇಶಿಸಿ) ಪಂಕಜ !

ಪಂಕಜ–ನೀವು? (ಅಳುವಳು)

ಕಿಟ್ಟಿ–ಯಾಕೆ, ಯಾಕೆ ಅಳುತ್ತೀ?

ಪಂಕಜ–ಯಾಕೂ ಇಲ್ಲ. ನೀವು ಯಾಕೆ ಬಂದಿರಿ ಇಲ್ಲಿಗೆ?

ಕಿಟ್ಟಿ– ರಾಮೂ ನನ್ನ ಸ್ನೇಹಿತ. ಅವನ ಜೊತೆಯಲ್ಲಿ ಬಂದೆ. ನಾನು ಬಂದಿದ್ದರಲಿ, ನೀನು ಯಾಕೆ ಬಂದಿ ಇಲ್ಲಿ?

ಪಂಕಜ–ನಾನು ನಾನು ಇಲ್ಲಿದ್ದೀನಿ ಅಂತ ನಿಮಗೆ ಹೇಗೆ ಗೊತ್ತಾಯಿತು?

ಕಿಟ್ಟಿ–ನನಗೆ ಗೊತ್ತಿರಲಿಲ್ಲ. ಅದಕ್ಕೇ ನಿನ್ನ ಕೇಳಿದ್ದು. ಆಗ ಆ ಶಾಂತಿ ಯಾರೋ "ಪಂಕಜ" ಅಂತ ಹೇಳಿದಳು. ನಾನು, ರಾಮು ತಮಾಷೆಗೆ ಏನೇನೋ ಮಾತಾಡಿಕೊಳ್ಳುತ್ತಿದ್ದೆವು. ನೀನೇ ಅವಳು ಅಂತ–ನೀನು ಆಗ ನೀರು ತಂದು ಎತ್ತಿ ಹಾಕಿದಾಗಲೇ ಗೊತ್ತಾದ್ದು.

ಪಂಕಜ–ನನಗೆ ನಿಮ್ಮನ್ನು ನೋಡುತ್ತಲೇ, ಏನೇನೋ ಆಗಿ ನಾನು ನಿಮಗೆ ಕಾಗದ ಬರಿಯುತ್ತೇನೆ ಅಂತ ಹೇಳಿದ್ದೆ. ಬರಿಯಲಿಲ್ಲ. ಬರಿಯೊಕ್ಕಾಗಲಿಲ್ಲ. (ಅಳು ತಂದುಕೊಳ್ಳುತ್ತಾ) ನಾನು ಇಲ್ಲಿಗೆ ಬರಬಾರದಾಗಿತ್ತು.

ಕಿಟ್ಟಿ–ಅಳಬೇಡ, ತಡಿ....ಏನಾಯಿತೀಗ? ನಾನೂ ರಾಮುನೂ ಅದೇ ಮಾತಾಡಿಕೊಳ್ಳುತ್ತಿದ್ದೆವು. ನೀನು ಯಾಕೆ ಇಲ್ಲಿ ಬಂದಿ, ನಿನಗೂ ಈ ಹೊಟಲ್ಲಿನವರಿಗೂ ಏನು ಸಂಬಂಧ–?

ಪಂಕಜ–ಹೋಟಲ್ಲಿನವರು?

ಕಿಟ್ಟಿ–ಇದೇ ಇವರು. ಆ ಪ್ರೊಪ್ರೈಟರ್ರೂ–

ಪಂಕಜ–ಪ್ರೊಪ್ರೈಟರು–? ಯಾವ ಪ್ರೊಪ್ರೈಟರ್ರು?

ಕಿಟ್ಟಿ–ಇನ್ನು ಯಾವ? ಈ ಹೋಟಲು ಪ್ರೊಪ್ರೈಟರ್ರು...ಆ ಮುದುಕ–

ಪಂಕಜ–ಛೀ, ಛೀ. "ಹೋಟಲ್ಲು", "ಪ್ರೊಪ್ರೈಟರ್ರು", "ಮುದುಕ"–ಏನು ಮಾತಾಡುತ್ತಿದ್ದೀರಿ? ಇದು ಹೋಟಲ್ಲಾ ಇದು?

ಕಿಟ್ಟಿ–ಅಲ್ಲವಾ?

ಪಂಕಜ–(ನಗು ಬರಲು) ಥೂ, ಯಾರು ಹೇಳಿದರು ನಿಮಗೆ ಹಾಗಂತ?



ಕಿಟ್ಟಿ–ಏನೇ ನೀನು ಹೇಳುವುದು? ಇದು ಹೋಟಲಲ್ಲವಾ?

ಪಂಕಜ–ಚೆನ್ನಾಯಿತು. ನಿಮಗೆ ಹುಚ್ಚುಗಿಚ್ಚು ಹಿಡಿದಿರಬೇಕಷ್ಟೇ, ಇದು ನಮ್ಮ ಸೋದರತ್ತೆ ಮನೇರೀ. ನಾನು ಹೇಳುತ್ತಿರಲಿಲ್ಲವಾ?

ಕಿಟ್ಟಿ–ಸೋದರತ್ತೆ? ಮನೆ? ಇದು ಮನೆ?

ಪಂಕಜ–ಹೂರೀ, ಯಾಕೆ–?

ಕಿಟ್ಟಿ–ಇದು ಖಂಡಿತ ಹೋಟಲಲ್ಲ? ಆ ಪ್ರೊಪ್ರೈಟರ್ರು–

ಪಂಕಜ–ಅದೇನ್ರೀ ಹಾಳು ಪ್ರೊಪ್ರೈಟರ್ರು ಪ್ರೊಪ್ರೈಟರ್ರು ಅನ್ನುತ್ತಿದ್ದೀರಿ ಅಷ್ಟು ಹೊತ್ತಿನಿಂದ? ಅವಲಕ್ಷಣ ! ನನ್ನ ಸೋದರ ಮಾವ. ಗೋವಿಂದರಾಯರು ಅವರು.

ಕಿಟ್ಟಿ–ಗೋ...ಗೋ...ಗೋವಿಂದರಾಯರು? ಯಾವ ಗೋವಿಂದರಾಯರು?

ಪಂಕಜ–ಚೆನ್ನಾಯಿತು. ರಾತ್ರಿಯೆಲ್ಲಾ ರಾಮಾಯಣ ಕೇಳಿ–ಅಲ್ರೀ ನಿಮ್ಮ ಸ್ನೇಹಿತರು ಇಲ್ಲಿಗೇ ಅಲ್ಲವೇ ಬಂದಿರುವುದು? ನಮ್ಮ ಪದ್ಮನ್ನ ನೋಡೊಕ್ಕೇ ಅಲ್ಲವೇ ಬಂದಿರುವುದು?

ಕಿಟ್ಟಿ–ಆ...ಆ ಗೋವಿಂದರಾಯರೇ ಅವರು? ಆ ಪದ್ಮಾನೇ, ಆಗ ವೀಣೆ ನುಡಿಸಿದವರು?

ಪಂಕಜ–ಹೂಂ. ಅವಳೇ. ಇನ್ನು ಯಾರು–

ಕಿಟ್ಟಿ–ತಡಿ....ತಡಿ... (ಕರ್ಚೀಫ್ ಎಳೆದು ಮುಖ ಒರೆಸಿಕೊಳ್ಳುತ್ತಾ) ಇದು ಹೋಟಲಲ್ಲ, ಮನೆ, ಗೋವಿಂದರಾಯರ ಮನೆ, ಅವರೇ ಆ ಗೋವಿಂದರಾಯರು–ಆ ಹೆಣ್ಣಾನೆ–ಕ್ಷಮಿಸು–ಆ ದೊಡ್ಡ ಹೆಂಗಸು ನಿನ್ನ ಸೋದರತ್ತೆ–? ಇವೆಲ್ಲಾ ಖಂಡಿತ ನಿಜವೇ?

ಪಂಕಜ–ಏನ್ರೀ ಹೀಗೆ ಕೇಳುತ್ತಿದ್ದೀರಿ? ಹೋಟಲ್ಲು ಹೋಟಲ್ಲು ಅನ್ನುತ್ತಿದ್ದೀರಿ–

ಕಿಟ್ಟಿ–ಡ್ಯಾಂ, ಸ್ಕೌಂಡ್ರೆಲ್ ! ಕೊಟ್ಟ ಕೆಲಸ ! ಒಳ್ಳೆ ಧೋಕ ತಿನ್ನಿಸಿದನೇ!....ಪಂಕಜ, ನಿಮ್ಮ ಗೋವಿಂದರಾಯರಿಗೆ ಜ್ಯೋತಿಷ್ಯ ಬರುತ್ತೆಯೇ?

ಪಂಕಜ–ಪಾಪ, ಪಂಚಾಂಗವೇ ನೋಡೊಕ್ಕೆ ಬರೊಲ್ಲ.

ಕಿಟ್ಟಿ–ಬ್ಲಡಿ ಸ್ವೈನ್....ಹಾಗಾದರೆ, ಪಂಕಜ, ನೀವೇನಾ ಸ್ಟೇಷನ್ನಿಗೆ ಕಾರು ಕಳುಹಿಸಿದ್ದದ್ದು?

ಪಂಕಜ–ಹೌದು. ನೀವೇ. ಮಧ್ಯ ಕೆಟ್ಟುಹೋಯಿತಂತೆ.

ಕಿಟ್ಟಿ–ಕೆಟ್ಟು ಹೋಯಿತು. ನಾವು ನಡೆದುಕೊಂಡು ಬರುತ್ತಿದ್ದೆವು. ದಾರಿ ತಪ್ಪಿದೆವೋ ಅಂತ ಭಯಪಡುತ್ತಿದ್ದೆವು. ಅಷ್ಟು ಹೊತ್ತಿಗೆ ಒಬ್ಬ ಬಂದ. ಅವನ ಜೊತೆಗೆ ಇನ್ನೂ ಇಬ್ಬರಿದ್ದರು. ಅವರನ್ನು ವಿಚಾರಿಸಿದ್ದಕ್ಕೆ "ಗೋವಿಂದ ರಾಯರ ಮನೆ ತುಂಬ ದೂರ, ಈ ಕಡೆ ಹುಲಿ ಕಾಟ, ಕತ್ತಲಲ್ಲಿ ಅವರ ಮನೆಗೆ ಅಷ್ಟು ಹೊತ್ತಿನಲ್ಲಿ ಹೋಗುವುದು ಕಷ್ಟ, ಇಲ್ಲೇ ಹತ್ತಿರವೇ ಒಂದು ಊಟ ವಸತಿ ಹೋಟಲಿದೆ. ಅಲ್ಲಿದ್ದು ಬೆಳಗ್ಗೆ ಮುಂದಕ್ಕೆ ಹೋಗಿ" ಅಂತ ಹೇಳಿ, ಇಲ್ಲಿ ಗೇಟಿನ ತನಕ ತಂದು ಬಿಟ್ಟು ಹೋದ.

ಪಂಕಜ–ಇಲ್ಲಿಗೇ? ಊಟ ವಸತಿ ಹೋಟಲು ಅಂತ?

ಕಿಟ್ಟಿ–ಹೂಂ. ರ್‍ಯಾಸ್ಕಲ್ !

ಪಂಕಜ–ಯಾರವನು? ಹೆಸರು ಏನು ಹೇಳಿದ?

ಕಿಟ್ಟಿ–ಹೇಳಲೇ ಇಲ್ಲ. ಕೇಳಿದೆವು. "ಹೆಸರಿನಲ್ಲೇನಿದೆ, ನಾರದರೇ?" ಅಂತ ಭೂಕೈಲಾಸದ ನಾಟಕ ಮಾಡಿ, ಗುಲಾಬಿ, ಗೊರಟೆ, ಗಮಗಮ, ಜನೋಪಕಾರಿ, ದೊಡ್ಡಣ್ಣ ಹಾಲು ಅಂತ ಏನೇನೋ ವಟವಟಿಸಿದ, ಬ್ಲಾಕ್ಗಾರ್ಡು !

ಪಂಕಜ–ತ್ಸು ತ್ಸು ತ್ಸು....ಹೋಗಲಿ ಅವನು ನೋಡೋಕ್ಕೆ ಹೇಗಿದ್ದ?

ಕಿಟ್ಟಿ–ಅಶ್ಶಿ ! ಇಷ್ಟೇ ಉದ್ದ ಕಣೇ! ಒಣಕಲು ಬೆಂಡೆಕಾಯಿಯ ಹಾಗೆ. ಮೂಗು ಕೊಂಚ ಉದ್ದ. (ಮೂಗಿನ ಮೇಲೆ ಒಂದು ಸ್ಥಳ ತೋರುತ್ತಾ) ಇಲ್ಲಿ ಹೀಗೊಂದು ಗೀಟು! ನನ್ನ ಅಂದಾಜು ನೋಡಿದರೆ, ಚಿಕ್ಕಂದಿನಲ್ಲಿ ಏನೋ ಘಟಿಂಗತನ ಮಾಡಿದ್ದಕ್ಕೆ ಅಪ್ಪನೋ ಅಮ್ಮನೋ ಸೌಟು ಕಾಯಿಸಿ ಬರೆಹಾಕಿರಬೇಕು!

ಪಂಕಜ–ಇ...ಇಂಥ ಕಡೆ?

ಕಿಟ್ಟಿ–ಹುಂ,

ಪಂಕಜ–ಒಂದು ಬಿಳಿ ಜುಬ್ಬ–ಅಲ್ಲ?

ಕಿಟ್ಟಿ–ಹುಂ ಹುಂ.

ಪಂಕಜ–ಕ್ರಾಪು, ಹೀಗೆ, ಬೈತಲೆ–

ಕಿಟ್ಟಿ–ಅವನೇ. ಅವನೇ.

ಪಂಕಜ–ಗಂಟಲು ಒಂದು ಥರಾ–

ಕಿಟ್ಟಿ–ಎಕ್ಸಾಟ್ಲಿ ! ಅವನೇ. ನಿನಗೆ ಗೊತ್ತಾ ಅವನು?

ಪಂಕಜ–ಅಯ್ಯೋ, ಅನಿಷ್ಟ ಮುಂಡೇಗಂಡ, ಅವನೇ ಗುಂಡ!

ಕಿಟ್ಟಿ–ಗುಂಡ ? ಯಾವ ಗುಂಡ?

ಪಂಕಜ–ಗೋವಿಂದರಾಯರ ಮಗ.



ಕಿಟ್ಟಿ–ಗೋವಿಂದರಾಯರ ಮ...ಮಗ? ಸ್ವಂತ ಮಗ?

ಪಂಕಜ–ಹೌದು.

ಕಿಟ್ಟಿ–ಸರಿ, ಹಾಗಾದರೆ ಅವನು ಹೇಳಿದ್ದು ಸರಿಯೇ.

ಪಂಕಜ–ಏನು ಹೇಳಿದ ?

ಕಿಟ್ಟಿ–"ಗೋವಿಂದರಾಯರು ನಿನಗೆ ಗೊತ್ತೇನಯ್ಯಾ?" ಅಂತ ಕೇಳಿದ್ದಕ್ಕೆ, "ಹೂಂ. ನನ್ನದೂ ಅವರದೂ ಒಂದೇ ಗೋತ್ರ" ಅಂತ ವರಲಿದವಿಲ್ಲನ್ನು.... ಹಾಗಾದರೆ, ಪಂಕಜ, ನಿನ್ನನ್ನು ಆ ಮಂಗನ ಕೈಗಾ ಕೊಡಬೇಕು ಅಂತ–? (ಪಂಕಜಳ ಕಣ್ಣಲ್ಲಿ ಮತ್ತೆ ನೀರು ಕಟ್ಟುವುದು) ಶಾಂತಿ ಹೇಳಿದಳು....ಪಂಕಜ..... ಆಳಬೇಡ....ನಾನಿದ್ದೇನೆ.

ಪಂಕಜ–ನಾನದಕ್ಕೇ ಹೇಳಿದ್ದು. ಇಲ್ಲಿಗೆ ಬರಬಾರದಾಗಿತ್ತು ಅಂತ. ಯಾರು ಏನು ಹೇಳುವುದೂ ಕಷ್ಟ. ಇವರೇ ದೊಡ್ಡವರು–

ಕಿಟ್ಟಿ–ಇರಲಿ, ನೀನು ಭಯಪಡಬೇಡ. ನಿನ್ನನ್ನು ಆ ಸುಂಡಿಲಿಯ ಕೈಗೆ ಬೀಳೊಕ್ಕೆ ನಾನು ಖಂಡಿತ ಬಿಡೊಲ್ಲ.

ಪಂಕಜ–ಹಾಗೇನಾದರೂ ಆಗದಿದ್ದರೆ, ನಾನಂತೂ ಜೀವದಿಂದಿರೊಲ್ಲ ಭಾವಿಯಲ್ಲಿ ಬಿದ್ದು ಪ್ರಾಣ ಕಳೆದುಕೊಳ್ಳುತ್ತೇನೆ.

ಗುಂಡ–(ಎದ್ದು ಸೋಫಾ ಮೇಲೆ ಎಗುರಿ ನಿಂತು) ಹಾ ಹಾ ಹಾ ಹಾ ಹಾ–(ಒಪ್ಪದಂತೆ ತಲೆಯಾಡಿಸುತ್ತಾ) ಊ ಹೂ ಹೂ ಹೂ ಹೂ "ಆತ್ಮಹತ್ಯಂ ಅತಿ ಪಾಪ ಕೃತ್ಯಂ" (ಮುಂದೆ ಬಂದು ಕಿಟ್ಟ ಪಂಕಜರ ನಡುವೆ ನಿಂತು) ಅಲ್ಲದೆ, ಪಂಕಜ, ಜಲದೋಳ್ ಮೀನಿರ್ಕುಮಲ್ಲದೆ ನೀನಿರ್ಕುಮೇ? ಎಗೈನ್ ನಾರಿಯು ಭಾವಿಗೆ ಹಾರಿದೊಡೆ ನೀರು ತಾ ಕೆಟ್ಟು ನಾರುವುದಲ್ಲದೆ, ನಾಕದ ಬಾಗಿಲು ಹಾ–ರ್‍ದೊಡೆದು ಬಾ–ರೆಂಬುದೇ? ಎಂದಂ (ಆ ಪಕ್ಕ ಈ ಪಕ್ಕ ನೋಡಿ) ಓಹೋ, ನೀವು ! ಹೋಗಲಿ ಬಿಡಿ ಅಲ್ಲವೇ, ಏನೇ ಅದು ನೀನು ಹೇಳಿದ್ದು?

ಕಿಟ್ಟಿ–(ಗುಂಡನ ತೋಳು ಹಿಡಿದು) ಪಂಕಜ, ಪಂಕಜ, ಇವನೇ !

ಗುಂಡ–ಹೌದ್ರೀ, ಹೌದ್ರೀ, ನಾನೇ. ನಾನೇ. ಬಿಡ್ರೀ. (ಕೈ ಕೊಡವಿ) ಇದು ಈ ಕೈ ಇವಳ ಕೈಯಷ್ಟು ಕೋಮಲ ಅಲ್ರೀ. ಇದು ಬೈಸೆಪ್ಸ್–ಇರಬೇಕಾಗಿದ್ದ ಜಾಗ!

ಕಿಟ್ಟಿ–ಏನು?

ಗುಂಡ–ಏನಿಲ್ಲ. ಸ್ವಲ್ಪ ನಿಲ್ಲಿ. ನಿಮ್ಮನ್ನು ಆಮೇಲೆ ವಿಚಾರಿಸಿಕೊಳ್ಳುತ್ತೇನೆ. ಲೇಡೀಸ್ ಫಸ್ಟ್....ಲೇ, ಪಂಕಜ, ಏನೇ ಅದು ನೀನು ಹೇಳಿದ್ದು? ಭಾವಿಗೆ

ಬೀಳುತ್ತೀಯಾ? ಯಾರು ಕಾದಿದ್ದಾರೆಯೇ ನಿನಗಲ್ಲಿ, ಇವರ ಹಾಗೆ ಮಾತು ಮಾತಿಗೂ ಪಂಕಜ, ಪಂಕಜ ಪಂಕಜ ಅಂತ ಪಂಕಜಸಹಸ್ರ ನಾಮ ಪಾರಾಯಣ ಮಾಡೊಕ್ಕೆ?

ಪಂಕಜ–ಶ್, ಮೆಲ್ಲಗೋ–ಮೆಲ್ಲಗೆ ಮಾತಾಡೋ, ದಮ್ಮಯ್ಯ.

ಗುಂಡ–ಯಾಕೇ, ಅಮ್ಮಯ್ಯ? ದಿಗಿಲೇನೇ? ಪ್ರಾಣ ಬಿಡೊಕ್ಕೇ ತಯಾರಾಗಿರುವವಳು ಇನ್ನು ಯಾತಕ್ಕೆ ಹೆದರುತ್ತೀಯೇ? ಅಲ್ಲವೇ, ನಿನ್ನ ಮನಸ್ಸಿನಲ್ಲಿ ನೀನು ಅಂದುಕೊಂಡಿದ್ದೀಯೆ? ತ್ರಿಪುರ ಸುಂದರಿ ! ಜಗನ್ಮೋಹಿನಿ ! ನನ್ನ ಮನಸ್ಸನ್ನು ಸೂರೆ ಮಾಡಿ, ಸೆರೆ ಹಿಡಿದು, ನಿನ್ನ ಸೆರಗಿನಲ್ಲಿ ಗಂಟು ಕಟ್ಟಿಕೊಂಡಿದ್ದಿ ಅಂದುಕೊಂಡಿದ್ದೀಯೇನೇ, ಸಾರಸಾಕ್ಷಿ? ನಾನು ನಿನ್ನನ್ನು ಯಾವಾಗ ವರಿಸುತ್ತೇನೋ ಅಂತ ಕಾದು ಕಾದು, ಕೊರಗಿ ಕೊರಗಿ, ಸೊರಗಿ ಹೀಗಾಗಿದ್ದೇನೆ ಅಂದುಕೊಂಡಿದ್ದೀಯೇನೇ, ಹರಿಣಾಕ್ಷಿ? ಒಂದು ವೇಳೆ, ನೀನು ನನ್ನನ್ನು "ಒಲ್ಲೆ" ಅಂದರೆ, ನಾನು ಅಲ್ಲೇ ಒಂದು ಅಗ್ನಿಕುಂಡ ತೋಡಿಸಿ, "ಒನ್, ಟೂ, ತ್ರೀ" ಅಂದು ಅದರಲ್ಲಿ ಹಾರಿಬಿದ್ದು ಬೂದಿಯಾಗಿ ಹೋಗುತ್ತೀನಿ ಅಂತ ಅಂದುಕೊಂಡಿದ್ದೀಯೇನೇ, ಅಂಬುಜಾಕ್ಷಿ? ಏನೇ, ಅಮ್ಮ, ಶಾಂತಿಯನ್ನು, "ಅವಳ ಹೆಸರು ಹಿಡಿದು ಕೂಗಬೇಡ, ಅತ್ತಿಗೆ ಅನ್ನು" ಅಂದಳು ಅಂದರೆ, ಅಷ್ಟಕ್ಕೇ ನಾನು ನಿನ್ನ ಕುತ್ತಿಗೆಗೆ ತಿರುಮಾಂಗಲ್ಯ ಬಿಗಿದೇ ಬಿಡುತ್ತಿದ್ದೆ ಅಂತ ಅಳುತ್ತಿದ್ದಿಯೇನೇ, ತೋಯಜಾಕ್ಷಿ? ಲೇಯ್, ನೀನು ಮೆಟ್ರಿಕ್ಯುಲೇಷನ್ ಪ್ಯಾಸು ಮಾಡಿರಬಹುದು, ನಾನು ಮಾಡದೆ ಇರಬಹುದು, ಆದರೆ, ಕೇಳೇ, ನಾನು ನಿನ್ನ ಹಾಗೆ ಈ ಚಿಲ್ಲರೆ ಬಾಬತ್ತುಗಳಿಗೆಲ್ಲಾ ಆತ್ಮಹತ್ಯೆ ಮಾಡಿಕೊಳ್ಳುವ ಅಂಜುಕುಳಿ ಅಲ್ಲವೇ! ನನ್ನ ತಲೆಯಲ್ಲಿರುವುದು ಮಿದುಳು. ಬರಿ ಮುಂಗುರುಳು ಹಿಂಗುರುಳಲ್ಲವೇ, ನಿನ್ನದರಲ್ಲಿನ ಹಾಗೆ.

ಪಂಕಜ–ಹೌದು ಕಣೋ. ಹೂ ಕಾಣೋ–

ಗುಂಡ–ಅದಿರಲಿ, (ಧ್ವನಿ ಏರಿಸಿ) ನನ್ನನ್ನು ಯಾಕೇ ಅನಿಷ್ಟಮುಂಡೇ ಗಂಡ ಅಂದಿದ್ದು? ಸಬ್ಮಿಟ್ ಯುವರ್ ಎಕ್ಸ್‌ಪ್ಲನೇಷನ್ ಅಟ್ ಒನ್ಸ್.

ಪಂಕಜ–ಅಯ್ಯೊಯ್ಯೋ, ನಿನ್ನ ಧರ್ಮಕ್ಕೆ ಅಷ್ಟು ಗಟ್ಟಿಯಾಗಿ ಮಾತಾಡಬೇಡವೋ, ನಾನು ಅನ್ನಲಿಲ್ಲವೋ.

ಗುಂಡ–ಆಂ? ಅನ್ನಲಿಲ್ಲ? ಸುಳ್ಳು ಹೇಳಬೇಡವೇ? ಕೆಟ್ಟ ಅಭ್ಯಾಸವೇ ಅದು. ನಾನು ಅಲ್ಲೇ ಕೂತಿದ್ದೆ– ಅಷ್ಟೂ ಕೇಳಿದೆನೇ.



ಕಿಟ್ಟಿ–ಏನಯ್ಯ? ಹೀಗೆ ಮಾಡಬಹುದೇನಯ್ಯ? ಇದು ನ್ಯಾಯವಾ? ಯಾರೋ ಮಾತಾಡುತ್ತಿದ್ದಾಗ ಹೀಗೆ ಕದ್ದು ಕೇಳಬಹುದಾ?

ಗುಂಡ–ಓ ಹೋ ಹೋ, ನ್ಯಾಯಶಾಸ್ತ್ರವಿಶಾರದು ನೀವು! ಅಲ್ರೀ, ಮನೆ ಮಂದಿಯೆಲ್ಲಾ (ಕಿಟ್ಟಿಯನ್ನು ಮುಟ್ಟುತ್ತಾ) ಮನುಷ್ಯ ಸಾಚಾ ಅಂತ ಮಲಗಿದ್ದಾಗ, ಹೆಣ್ಣು ಮಕ್ಕಳನ್ನು ಹೀಗೆ ಕರೆಕಳುಹಿಸಿಕೊಂಡು ಹೀಗೆ ಕದ್ದು ಮಾತಾಡಬಹುದಾ? ಧೈರ್ಯವಿದ್ದರೆ ನಮ್ಮ ತಂದೆಯನ್ನು ಕರೆದು, "ಮಿಸ್ಟರ್, ನಾನು ಇವಳ ಪ್ರಾಣಕಾಂತ, ಇವಳು ನನ್ನ ಮನೋವಲ್ಲಭೆ, ನಾವು ಪ್ರಾಣಿಗ್ರಹಣ ಮಾಡಿಕೊಳ್ಳಬೇಕಂತ ಇದ್ದೇವೆ– ಹೀಗಂತ ನಮ್ಮ ನಮ್ಮ ಕೈ, ಕಾಲು, ಕಿವಿ, ಮೂಗು, ಮನಸ್ಸು ನಿರ್ಧರಿಸಿವೆ. ತಾವು ಇವಳನ್ನು ತಮ್ಮ ಕುಮಾರನಿಗೆ ತಂದುಕೊಳ್ಳುವುದು ಅಂತ ಇದ್ದೀರಂತೆ– ಇದಾಗದು, ಏನು ಹೇಳುತ್ತೀರಿ?" ಅಂತ ಮೀಸೆ ಹಿಡಿದು ಕೇಳುವುದು ಬಿಟ್ಟು (ತಟ್ಟನೆ ಪಂಕಜಳ ಕೈಯಲ್ಲಿದ್ದ ಕರ್ಚೀಫನ್ನು ಕಸಿಯಲು)

ಕಿಟ್ಟಿ–ಐ ಸೇ, ಐ ಸೇ, ಐ ಸೇ–

ಗುಂಡ–ಡೋಂಟ್ ಸೇ ಎನಿಥಿಂಗ್, ಸುಮ್ಮನೆ ಹಿಯರ್ ಮಾಡಿ. ಇದು ನನ್ನ ಹತ್ತಿರವೇ ಇರಲಿ, ಕಳ್ಳತನದಲ್ಲಿ ಕರ್ಚೀಫಿನಲ್ಲಿ ಬರೆದು ಕಳುಹಿಸಿ, ಕಾಳರಾತ್ರಿಯಲ್ಲಿ ಕೈ ಕೈ ಹಿಡಿದುಕೊಂಡು, ತೆಪ್ಪನೆ ದೇವರೇ ಅಂತ ಆ ಸೋಫಾ ಹಿಂದೆ ಕುಕ್ಕುರುಬಡಿದುಕೊಂಡಿದ್ದ ನನ್ನನ್ನ (ಬೆಟ್ಟುಗಳಲ್ಲಿ ಎಣಿಸುತ್ತಾ) "ಮುಂಡೇ ಗಂಡ", "ಸ್ಕೌಂಡ್ರೆಲ್ಲು", "ಬೆಂಡೇಕಾಯಿ", "ಬ್ಲಾಗ್ಗಾರ್ಡು", "ಸ್ವೈನು–ಸುಂಡಿಲಿ" ಅಂತ ಇಂಗ್ಲಿಷು ಕನ್ನಡ, ಕನ್ನಡ ಇಂಗ್ಲಿಷು ಎರಡೆರು ಭಾಷೆಗಳಲ್ಲೂ ಅಂದಿರಲ್ಲಾ, ಸಬ್ಮಿಟ್ ಯುವರ್ ಎಕ್ಸ್‌ಪ್ಲನೇಷನ್ಸ್ ಅಟ್ ಒನ್ಸ್.

ಕಿಟ್ಟಿ–(ಬೇಡುತ್ತಾ) ಅಯ್ಯಾ, ಅಯ್ಯಾ, ಮೆಲ್ಲಗೇ–

ಪಂಕಜ–ಮೆಲ್ಲಗೋ–

ಗುಂಡ–(ನಗುತ್ತಾ) ಎಷ್ಟು ಹೆದರಿಕೆ ಇಬ್ಬರಿಗೂ! ಅದಕ್ಕೇ ಕಳ್ಳತನ ಕೆಟ್ಟದ್ದು ಅನ್ನುವುದು ದೊಡ್ಡವರು.

ಪಂಕಜ–(ದೈನ್ಯದಿಂದ) ಲೋ, ಆ ಕರ್ಚೀಫ್ ಕೊಟ್ಟುಬಿಡೋ.

ಗುಂಡ–ಯಾಕೇ? ಅಳು ಬಂದರೆ ಸೆರಗಿನಲ್ಲೇ ಒರೆಸಿಕೊಳ್ಳೇ. (ಪಂಕಜ ಅಳಲು) ಅಯ್ಯಯ್ಯೋ, ಅಳು ಅನ್ನುತ್ತಿರುವ ಹಾಗೇ ಬಂದೇಬಿಡಿತೇನೆ? ಅದೇನು, ಕಣ್ಣಿನಲ್ಲಿ ಕಾರಂಜಿ ಇಟ್ಟುಕೊಂಡಿರುತ್ತೀರೇನ್ರೇ? ಬೇಡವೇ, ತೊಗೊಳ್ಳೇ ನಿನ್ನ ಕರ್ಚೀಫು, ಜಲಜಾಕ್ಷಿ! (ಕಿಟ್ಟಿಗೆ) ಉಂ..ಈಗ ತಮ್ಮ ಸರದಿ. ತಾವು "ಈ ಮಂಗನಿಗೇನಾ ಇವಳನ್ನು ಕೊಡಬೇಕು ಅಂತ ಇರುವುದು?" ಅಂದಿರಿ. ಅಲ್ಲವೇ?

ಕಿಟ್ಟಿ–ತಪ್ಪಾಯಿತಯ್ಯಾ.

ಗುಂಡ–ಆಂ? ಏನಂದಿರಿ?

ಕಿಟ್ಟಿ–ತಪ್ಪಾಯಿತಯ್ಯಾ, ಹಾಗೆನ್ನಬಾರದಿತ್ತು.

ಗುಂಡ–ತ್ಸು ತ್ಸು ತ್ಸು ಬದುಕಿಬಿಟ್ಟಿರಲ್ರೀ... ತಪ್ಪಿನ್ನ ಒಪ್ಪಿಕೊಂಡು ಬದುಕೇಬಿಟ್ಟಿರಲ್ರೀ. ನಾನು "ಐ ಆಮ್ ಸಾರಿ" ಅಂದರೆ, "ಡೋಂಟ್ ಯೂ ವರ್‍ರೀ" ಎನ್ನುವ ಸ್ವಭಾವದವನು. ಇದನ್ನು ಹೇಗೋ ಕಂಡುಹಿಡಿದು ನೀವು ತಪ್ಪಿಸಿಕೊಂಡುಬಿಟ್ಟಿರಲ್ರೀ...ಯಾರೊ ಒಬ್ಬರು ನನ್ನನ್ನು "ಕಪಿ" ಅಂದು ಪರಿತಪಿಸಿ ಹೋಗಿರಬೇಕು–ನೀವು ಅದರ ಸಿನಾನಿಮ್–ಮಂಗ–ಅಂದು ಏನಾಗಿ ಹೋಗುತ್ತಿದ್ದಿರೋ! ಬುದ್ಧಿವಂತಿಕೆಯಿಂದ ಬಚಾವಾದಿರಿ. ಇರಲಿ. ಈ ಮಾಣಿಕ್ಯವನ್ನ ಈ ಮಂಗನಿಗೆ ಕೊಡಬಾರದು. ಬೇಡ. ಇದನ್ನ ಮಾಲೆ ಹಾಕಿಕೊಳ್ಳೊಕ್ಕೆ ನಿಮಗೆ ಏನು ಅರ್ಹತೆಯಿದೆಯೋ ನೋಡೋಣ. ದಯವಿಟ್ಟು ಉತ್ತರ ಹೇಳಿ. ನಿಮ್ಮದು ಯಾವ ಜಾತಿ?

ಕಿಟ್ಟಿ–ಮಾಧ್ವರು.

ಗುಂಡ–ಆದರೂ ಮಂಗನಿಗೆ ಮರ್ಯಾದೆ ಮಾಡಬೇಕು ಅಂತ ಗೊತ್ತಿಲ್ಲ! ಉಂ. ಯಾವ ಮಠ?

ಕಿಟ್ಟಿ–ರಾಯರ ಮಠ.

ಗುಂಡ–ಗುಡ್ಡು, ಗೋತ್ರ?...ಗೊತ್ತಿದೆಯೋ?

ಕಿಟ್ಟಿ–ಭಾರದ್ವಾಜ.

ಗುಂಡ–ವೆರಿಗುಡ್ಡು. ನಮ್ಮದೂ ಅದೆ. ಸರಿ ಹೋಯಿತು ಅದೂ. ನಿಮ್ಮ ತಂದೆ ತಾಯಿ?

ಕಿಟ್ಟಿ–ಇಲ್ಲ.

ಗುಂಡ–ಆಂ? ಹಾಗಾದರೆ ನೀವು ಉದ್ಭವ ಮೂರ್ತಿ?

ಕಿಟ್ಟಿ–ಹಾಗಲ್ಲಪ್ಪ, ಇದ್ದರು, ಹೋಗಿಬಿಟ್ಟರು, ಈಗಿಲ್ಲ ಅಂದೆ.

ಗುಂಡ–ಓ, ತಬ್ಬಲಿ! ಆರ್‍ಫನ್ನು! ತ್ಸು ತ್ಸು....ಲೇ, ಪಂಕಜ, ಹಾಗಾದರೆ ನೀನಿದಕ್ಕೇನೋ ಇವರನ್ನು ಬುಕ್ಕು ಮಾಡಿಕೊಂಡಿರುವುದು? – ನಿನ್ನದೇ ಆಡಿದಾಟ, ಅತ್ತೆ ಇಲ್ಲ, ಮಾವ ಇಲ್ಲ–

ಪಂಕಜ–ಉ ಹು ಹು...ಅಲ್ಲವೋ–

ಗುಂಡ–ಅಲ್ಲ ಅನ್ನುತ್ತೀಯಾ? ಆಲ್‍ರೈಟ್....(ಕಿಟ್ಟಿಗೆ) ಸಾಲ ಎಷ್ಟಿದೆ?



ಕಿಟ್ಟಿ–ಸಾಲ?

ಗುಂಡ–ಹೂರೀ. ನನ್ನ ಪ್ರಶ್ನೆ ನಿಮಗೆ ಆಶ್ಚರ್ಯವಾಗಬಹುದು. ಆಸ್ತಿಯ ವಿಚಾರ ಆಮೇಲೆ ಕೇಳುತ್ತೇನೆ. ಕೆಲವರು ಬ್ಯಾಂಕಿನಲ್ಲಿ ಹತ್ತು ಸಾವಿರದ ಆಸ್ತಿ ತೋರಿಸಿ, ಹೊರಗೆ ಇಪ್ಪತ್ತು ಸಾವಿರ ರೂಪಾಯಿ ಸಾಲ ತೆಗೆದಿರುತ್ತಾರೆ. ಅದಕ್ಕೆ ಕೇಳಿದೆ.

ಕಿಟ್ಟಿ–ಸಾಲ ಏನಿಲ್ಲ.

ಗುಂಡ–ಗುಡ್ಡು, ವೆರ್‍ರಿ ಸ್ಟ್ರಾಂಗ್ ಪಾಯಿಂಟು ! ಈಗ ಹೇಳಿ, ಆಸ್ತಿ ಏನಿದೆ?

ಕಿಟ್ಟಿ–ಮನೆ ಇದೆ. ಹೊಲ ಇದೆ.

ಗುಂಡ–ಅವೆಲ್ಲ ಪಿತ್ರಾರ್ಜಿತ ಆದವು. ನಿಮ್ಮದು? ಸ್ವಯಾರ್ಜಿತ? ನೀವೇನು ಸಂಪಾದಿಸುತ್ತೀರಿ, ಹೇಳಿ.

ಕಿಟ್ಟಿ–ಏನಯ್ಯಾ? ಒಳ್ಳೆ ಪೋಲೀಸಿನವನು ಕೇಳುವ ಹಾಗೆ ಕೇಳುತ್ತಿದ್ದೀಯಲ್ಲಯ್ಯ?

ಗುಂಡ–ಏನ್ರೀ, ನಾನಿಷ್ಟು ಪೊಲೈಟಾಗಿ ಕೇಳುತ್ತಿದ್ದರೂ ಪೋಲೀಸಿನವನ ಹಾಗೆ ಅನ್ನುತ್ತೀರಲ್ರೀ?

ಕಿಟ್ಟಿ–(ನಕ್ಕು) ನಾನು ಹೈಸ್ಕೂಲು ಮೇಷ್ಟರಯ್ಯಾ. ತಿಂಗಳು ತಿಂಗಳಿಗೆ ಸಂಬಳ–

ಗುಂಡ–ಹೈ–ಹೈಸ್ಕೂಲ್–ತಡೆಯಿರಿ ಇವಳು ನಿಮ್ಮ ಸ್ಕೂಲಿನಲ್ಲೇನಾ ಓದಿದ್ದು?

ಕಿಟ್ಟಿ–ಹೌದು.

ಗುಂಡ–ಸರಿ. ಲೇ, ಪಂಕಜ, ಗೊತ್ತಾಯಿತೇ, ನೀನು ಪರೀಕ್ಷೆ ಹೇಗೆ ಪ್ಯಾಸು ಮಾಡಿದಿ ಅಂತ ಗೊತ್ತಾಯಿತೇ.

ಕಿಟ್ಟಿ–ಅಯ್ಯ, ಅಯ್ಯ, ಅದು ಪಬ್ಲಿಕ್ ಪರೀಕ್ಷೆ ಅಯ್ಯ.

ಗುಂಡ–ಹೌದ್ರೀ. ಪರೀಕ್ಷೆ ಪಬ್ಲಿಕ್ಕು, ಮಸಲತ್ತು ಪ್ರೈವೇಟ್ಟು. ಗೊತ್ತು ಬಿಡ್ರೀ. ಹೋಗಲಿ, ನನಗೆ ಯಾಕೆ ಆ ಪಾಡು? ಒಟ್ಟಿನಲ್ಲಿ ನೀವು ನೀವು ಸ್ವತಂತ್ರವಾಗಿ ಸುಖವಾಗಿ ಸಂಸಾರ ಮಾಡಬಲ್ಲಿರಿ, ಅದು ಸಾಕು. ಆದರೆ ಪಂಕಜ, ನಿನಗೆ ಇವರಲ್ಲಿ ನಿಜವಾಗಿಯೂ ನಂಬಿಕೆ ಇದೆಯೇನು?

ಪಂಕಜ–ಯಾಕೋ?

ಗುಂಡ–ನಾನು ಹೇಳುವುದು–ನಿಮ್ಮ ಪ್ರೀತಿ ಗೀತಿ–ಇವೆಲ್ಲಾ ಒಪ್ಪಿದೆ ಆದರೆ ಇವರು ಹೀಗೆ ಬಟ್ಟೆ ಮೇಲೆ ಬರೆದು ಕಳುಹಿಸುವುದು–ಸಾಫ್‍ಸೀದಾ ಅಲ್ಲ

ಆದ್ಮೀಗೆ ಅಂತ ನನ್ನ ಅಭಿಪ್ರಾಯ....ಪಂಕಜ....? ಮಾತಾಡೇ ಮಾತಾಡೇ....ಹೋಗಲಿ ಬಿಡು, ನನಗೇನು? (ಹೊರಡುವವನು)

ಪಂಕಜ–ಇಲ್ಲ, ಇಲ್ಲ, ಬಾರೋ.

ಗುಂಡ–(ಬಂದು) ಹುಂ?

ಪಂಕಜ–ಹೋಗೋ !

ಗುಂಡ–ಹೋಗುತ್ತಾ ಇದ್ದೆ. ಬಾ ಅಂದಿ !

ಪಂಕಜ–ಅದಲ್ಲವೋ.

ಗುಂಡ–ಮತ್ತೆ ಯಾವುದೇ?

ಪಂಕಜ–ಹು ಕಣೊ.

ಗುಂಡ–ತಿರುಗೂ ಹುಂ ಅನ್ನುತ್ತಿ. ಸರಿಯಾಗಿ ಹೇಳು.

ಪಂಕಜ–ನಂಬಿಕೆ ಇದೆ.

ಗುಂಡ–ಹೋಗು ಹಾಗಾದರೆ, ನಿನ್ನ ಹಣೆಬರಹ ಇನ್ನೊಂದೇ ಪ್ರಶ್ನೆ. ನೀನು ನನ್ನನ್ನು ಮದುವೆ ಮಾಡಿಕೊಳ್ಳಬೇಕು ಅಂದರೆ ಭಾವಿಗೆ ಬೀಳುತ್ತಿ. ಅದು ನೆಗೆಟಿವ್ವಾಯಿತು. ಇವರನ್ನು ಬೇಡ ಅಂದರೂ ಬೀಳುತ್ತೀಯಾ ಹೇಳು.

ಪಂಕಜ–ಹೋಗೋ, ಅದೇ.

ಗುಂಡ–ಸರಿ, ಬೀಳುತ್ತಿ. ಬೇಡ ಅದು. ಇಲ್ಲಿ ನೋಡೇ, ಪಂಕಜ, ನಾನು ನಾನಾಗಿ ನಾನೇ ನಿನ್ನನ್ನು ಮದುವೆ ಮಾಡಿಕೊಳ್ಳೊಕ್ಕೆ ಒಪ್ಪುತ್ತಾ ಇರಲಿಲ್ಲ. ಏನೋ ತಾಯಿ ತಂದೆ ಇಲ್ಲದ ತಬ್ಬಲಿ. ತಾಳಿ ಕಟ್ಟೊಕ್ಕೆ ಕೂಲಿ ಕೊಟ್ಟರೂನೂ ಸರಿಯಾದ ವರ ಸಿಗುವುದು ಕಷ್ಟ. ಯಾವನೋ ಅಯೋಗ್ಯನ ಕೈಗೆ ಸಿಕ್ಕಿ ತೊಂದರೆ ಪಟ್ಟೀಯೇ. ನಾನು ಒಣಕಲು ಬೆಂಡೇಕಾಯಿಯ ಹಾಗಿದ್ದರೂ, ನೀನು ಮನೆಯಲ್ಲಿರುವ ಹನ್ನೆರಡು ಎಮ್ಮೆ ಹಾಲು, ಮೊಸರು, ಬೆಣ್ಣೆ ತಿಂದು, ಕೊಬ್ಬಿ, ಕುಂಬಳಕಾಯಿಯ ಹಾಗೆ ಊದಿ, ಅತ್ತೆ ಜೊತೆಗೆ ಸೊಸೆ ಉರುಳಾಡಿಕೊಂಡಿರಲಿ ಅಂತ ನಿಮಗೋಸ್ಕರ ನಾನು ಸಾಕ್ರಿಫೈಸ್ ಮಾಡಿಕೊಳ್ಳುವುದು ಅಂತ ಇದ್ದೆನೇ. ದೇವರ ದಯ, ಈ ಪುಣ್ಯಾತ್ಮರು ಆ ತೊಂದರೆ ತಪ್ಪಿಸಿದರು. (ಕಿಟ್ಟಿಯನ್ನು ಕುರಿತು) ಏನ್ರೀ, ಇವಳು ಈಗ ನನ್ನ ಅನದರ್ ಸಿಸ್ಟರ‍್ರು, ಸಹೋದರಿ. ಇವಳನ್ನು ಮದುವೆ ಮಾಡಿಕೊಂಡು ಸರಿಯಾಗಿಟ್ಟುಕೊಂಡಿರುತ್ತೀರೇನ್ರೀ?

ಕಿಟ್ಟಿ–ಹೂನಯ್ಯ.

ಗುಂಡ–ಸರಿ. ಹಾಗಾದರೆ, ನಿಮ್ಮ ಪಾಲಿಗೆ ಬಂದ ಈ ಪಂಕಜಾಮೃತ ನೀವೇ ಇಟ್ಟುಕೊಳ್ಳಿ. (ತಾನು ದೂರ ನಿಂತು) ಉಂ.



ಕಿಟ್ಟಿ–ಮಿಸ್ಟರ್ ಗುಂಡೂರಾವ್–

ಗುಂಡ–ಗುಂಡೂರಾವ್? ಭಲೆ !...ಲ್ರೀ, ಬೇಡ್ರೀ, ಇದೆಲ್ಲಾ ಬೇಡ್ರೀ ನನಗೆ. ಲೇ, ಪಂಕಜ, ಇನ್ನು ಹೊರಡೇ ನೀನು. ನಾವು ನಾವು ಗಂಡಸರು ಮಾತಾಡಿಕೊಳ್ಳುತ್ತೇವೆ. ತಿರುಗಿ ನೀವು ಮೀಟ್ ಮಾಡಬೇಕಾದ್ದು ಅಂತರಪಟದ ತೆರೆ ಎಳೆದಾಗಲೇ. ಜ್ಞಾಪಕ ಇರಲಿ. ಹೋಗು.

ಪಂಕಜ–ನಿಮ್ಮ ಅಮ್ಮ–

ಗುಂಡ–ನಮ್ಮ ಅಮ್ಮ ಅಲ್ಲ, ಆ ಬ್ರಹ್ಮ ಬಂದರೂ ಬಗ್ಗೊಲ್ಲ ಹೋಗೇ. ಆದರೆ ನಾನು ಬಯ್ದರೆ ಬಯ್ಸಿಕೊಳ್ಳಬೇಕು, ಅಂದರೆ ಅನ್ನಿಸಿಕೊಳ್ಳಬೇಕು. (ಪಂಕಜ ಹೋಗುತ್ತಿರಲು) ಲೇ, ಪಂಕಜ, ಇಲ್ಲಿ ಬಾರೇ...ಎಲ್ಲಿ, ಒಂದು ಸರ್ತಿ ನಕ್ಕು ಹೋಗೇ.

ಪಂಕಜ–(ನಕ್ಕು) ಹೋಗೋ, ಅತೀ. (ಹೋಗುತ್ತಾ ಬಾಗಿಲ ಬಳಿ ನಿಂತು ತಿರುಗಿ ನೋಡಲು)

ಕಿಟ್ಟಿ–ಏನು? ಏನು–

ಗುಂಡ–ಏನಿಲ್ರೀ. ಗಾಬರಿಯಾಗಬೇಡಿ. ಅವಳು ತಾನಿರುವುದು ನಮ್ಮ ಮನೆ, ಕೆಳಗೆ ಹಾಸಿರುವುದು ಜಮಖಾನ, ನೀವು ಮಿಸ್ಟರ್ ಕೃಷ್ಣರಾವ್. ನಾನು ಗುಂಡ ಅನ್ನುವುದನ್ನು ಮರೆತು, ಇದು ಕಣ್ವಾಶ್ರಮ, ತಾನು ಶಕುಂತಲೆ, ನಾನೂ ವಿದೂಷಕ, ನೀವು ದುಷ್ಯಂತ, ಅವಳ ಕಾಲಿಗೆ ಮುಳ್ಳು ಹೊಕ್ಕಿತು–ನೀವು ಹಾಡಬೇಕಾದ್ದು– "ನಡೆಯುತ್ತೊಡನೆ ಕುಶಾಗ್ರಂ ತಾಗಿದುದು" ಕಂದ ಅಂತ ಸೂಚಿಸಿದಳು....ಹೋಗೇ ಒಳಗೆ....(ಪಂಕಜ ಮರೆಯಾಗುವಳು) ಏನ್ರೀ, ನೀವು ಬಿ.ಎ. ಮಾಡಿದ್ದರೂ, ಏನೂ ಪ್ರಯೋಜನವಿಲ್ಲ, ಸಂಕೇತಾರ್ಥ ಗ್ರಹಣ ಶಕ್ತಿ–ದೊಡ್ಡ ಸೊನ್ನೆ !

ಕಿಟ್ಟಿ–ಅಯ್ಯಾ, ನೀನು ಪ್ರಚಂಡ ಕಾಣಯ್ಯ.

ಗುಂಡ–ಭಂಡ ಅಲ್ಲ?

ಕಿಟ್ಟಿ–ಉಂಟೇ? ಪ್ರಚಂಡಾನಯ್ಯ.

ಗುಂಡ–ಭೇಷ್...ಒಬ್ಬರು ತಿಳಿದುಕೊಂಡ ಹಾಗಾಯಿತು ನಿಜವನ್ನ.

ಕಿಟ್ಟಿ–ಅದು ಸರಿ. ಈಗ ನಮ್ಮ ರಾಮೂ ಗತಿ ಏನಯ್ಯ?

ಗುಂಡ–ಯಾಕೆ? ಏನಾಗಿದೆ ಅವರಿಗೆ?

ಕಿಟ್ಟಿ–ಅಲ್ಲ, ನಮ್ಮನ್ನು ಇದು ಹೋಟಲು ಅಂತ ಕರೆದುಕೊಂಡು ಬಂದು ಬಿಟ್ಟೇ–

ಗುಂಡ–ಏನಾಯಿತದರಿಂದ?

ಕಿಟ್ಟಿ–ಆಗಬಾರದ್ದೆಲ್ಲಾ ಆಯಿತು. ನಿಮ್ಮ ಗೋವಿಂದರಾಯರಿಗೆ, ಅಂದರೆ ನಿಮ್ಮ ತಂದೆಗೆ ಪಂಚಾಂಗವೇ ನೋಡೊಕ್ಕೆ ಬರೊಲ್ಲವಂತೆ?

ಗುಂಡ–ಬರೊಲ್ಲ.

ಕಿಟ್ಟಿ–ಮತ್ತೆ ವರಾಹಮಿಹಿರ ಅಂದಿ.

ಗುಂಡ–ಅವರು ನನ್ನನ್ನು ಕಪಿ ಅಂದಿದ್ದರು, ನಾನು ಮಿಹಿರ ಕಿತ್ತು ಹಾಕಿದೆ.

ಕಿಟ್ಟಿ–ಅವರನ್ನು ವರಾಹ ಮಾಡಿದಿ. ಅವರು ನಿಜವಾಗಲೂ ಹೋಟೆಲ್ಲಿನವರು ಅಂದುಕೊಂಡು, ರಾಮೂ ತಂದೆ ತಾಯಿ ಯೋಗಕ್ಷೇಮ ವಿಚಾರಿಸಿದಾಗ ನಾವು ಸಿಕ್ಕಾಪಟ್ಟೆ ಅಂದೆವಲ್ಲಾ !

ಗುಂಡ–ಅನ್ನಬಾರದಾಗಿತ್ತು. ಔತಣದ ಅಡಿಗೆ ಮಾಡಿ ಬಡಿಸಿ, ಮಗನ ಕೋಣೆ ಬಿಡಿಸಿ, ಉಪಚಾರ ಮಾಡಿದವರನ್ನ–

ಕಿಟ್ಟಿ–ಅವೆಲ್ಲಾ ಆಮೇಲೆ–ಆದರೆ ನಾವು ಅಂದದ್ದು ಮೊದಲು–ನಾವು ಅನ್ನುತ್ತಿರಲಿಲ್ಲ. ನೀನೇ ಹೇಳಿದಿ, ಅವರು ಅಧಿಕ ಪ್ರಸಂಗಿ, ಹಾಗೆ ಹೀಗೆ ಅಂತ–

ಗುಂಡ–ಹೇಳಿದೆ. ಇಲ್ಲ ಅನ್ನೊಲ್ಲ. ಆದರೆ ರಸ್ತೆ ಮೇಲೆ ಹೋಗುವ ನೂರು ಜನ ಸಾವಿರ ಮಾತು ಹೇಳುತ್ತಾರೆ. ನೀವು ಕೇಳುವುದೇನ್ರೀ? ವಿದ್ಯೆ ಓದಿದವರು ಸ್ವಬುದ್ಧಿ ಇಟ್ಟುಕೊಳ್ಳಬೇಡವೇನ್ರೀ? ಅವರು ತಪ್ಪು ಮಾಡಿದ್ದರು, ನಿಮ್ಮ ಬಾಯಲಿ ಅನ್ನಿಸಬೇಕು ಅಂತ ನನಗಿತ್ತು, ಅನ್ನಿಸಿದೆ. ಅವರು ಅನ್ನಿಸಿಗೊಂಡರು. ನೀವು ಅಂದ ತಪ್ಪಿಗೆ ನೀವೂ ಅನ್ನಿಸಿಕೊಳ್ಳಿ.

ಕಿಟ್ಟಿ–ಹೆಣ್ಣು ಕೊಡುವವರ ಹತ್ತಿರ ನಮ್ಮ ಬಂಡವಾಳವೆಲ್ಲಾ ಬಿಚ್ಚಿಸಿದೀ–

ಗುಂಡ–ಒಳ್ಳೆಯದೇ ಆಯಿತು. ನಿಮ್ಮ ನಿಮ್ಮ ಪರಿಚಯ ಮೋಸದ ಮುಸುಕಿಲ್ಲದೆ ಆಯಿತು.

ಕಿಟ್ಟಿ–ನಾವು ಅವರಿಗೆ ನಾಳೆ ಬೆಳಗ್ಗೆ ಹೇಗೆ ಮುಖ ತೋರಿಸುವುದು?

ಗುಂಡ–(ನಕ್ಕು) ಇಷ್ಟಕ್ಕೇ ನೀವು ಯೋಚನೆ ಮಾಡಿದರೆ, ನಾನು ಹೇಗೆ ಮುಖ ತೋರಿಸಬೇಕು ಯೋಚನೆ ಮಾಡಿ...ಈಗ ನೀವು ನನ್ನ ಡಿಯರ್ ಬ್ರದರ್ ಇನ್ ಲಾನ ಎಬ್ಬಿಸಿ. ಏನು ಮಾಡಬಹುದು ಅಂತ ಆಲೋಚಿಸಿ. ನಾನೂ ಯೋಚಿಸುತ್ತೇನೆ, ಹೊರಗೆ ತಂಗಾಳಿಯಲ್ಲಿ, ತಲೆ ಚೆನ್ನಾಗಿ ಓಡತ್ತೆ.

ಕಿಟ್ಟಿ–ಬೇಡ. ಬೇಡ. ನೀನೂ ಇಲ್ಲೇ ಇರಯ್ಯ.

ಗುಂಡ–ಊಹು. ನೀವು ಸೆಟಲ್ ಮಾಡಿ ಮೊದಲು. ನಾನು ಆಮೇಲೆ ಬರುತ್ತೇನೆ. (ನಿಷ್ಕ್ರಮಿಸುವನು)



(ಕಿಟ್ಟಿ ರಾಮೂನ ಎಬ್ಬಿಸಿ ಕರೆತಂದು)

ರಾಮು–ಯಾಕೋ? ಏನಾಯಿತೋ?

ಕಿಟ್ಟಿ–ಕಣ್ಣು ಬಿಡೋ. ಕನಸು ಅಂದುಕೊಂಡೀಯೆ.

ರಾಮು–ಇಲ್ಲವೋ. ಎದ್ದಿದ್ದೇನೋ. ಏನಂದಳೋ ಪಂಕಜ?

ಕಿಟ್ಟಿ–ಅವಳು ಅನ್ನುವುದಿರಲಿ, ನೀನು ಏನು ಅನ್ನುತ್ತಿ, ಅನ್ನಬೇಕು, ಅದನ್ನು ಮೊದಲು ನೋಡು.

ರಾಮು–ಆಂ?

ಕಿಟ್ಟಿ–ನೀನು ದೊಡ್ಡ ಮನುಷ್ಯ. ನಿನ್ನ ಮಾತಾಡಿಸಬೇಕಾದರೆ ಏಕವಚನದ ಸಂಬೋಧನೆಗೆ ಪೂರ್ಣವಿರಾಮ ಹಾಕಿ, ಬಹುವಚನಕ್ಕೆ ಬದಲಾಯಿಸಬೇಕು, ಅಲ್ಲ?

ರಾಮು–ಆಂ?

ಕಿಟ್ಟಿ–ನಿಮ್ಮಪ್ಪ, ನಿಮ್ಮಮ್ಮ ಸ್ವಸ್ಥ, ಆರೋಗ್ಯವಾಗಿರುವುದಲ್ಲದೆ ನಿಮ್ಮ ಮನೆ ಹಸು ಹೊತ್ತಿಗೆ ನಾಲ್ಕು ಸೇರು ಹಾಲು ಕೊಡುತ್ತಲ್ಲ?

ರಾಮು–ಆಂ?

ಕಿಟ್ಟಿ–ಲಿಸ್ಸೀ ಆರು ಮರಿ ಹಾಕಿ, ಎರಡನ್ನ ಅದೇ ತಿಂದು ಬಿಟ್ಟಿತಾ?

ರಾಮು–ಆಂ?

ಕಿಟ್ಟಿ–ನಿಂತು ನಿಂತಲ್ಲೇ ಅದೃಶ್ಯವಾಗಿ ಹೋಗುತ್ತಾರೆ ಯಜಮಾನರು, ತಿಂಡಿ ಏನು ಬೇಕು ಕೇಳುವುದು ಬಿಟ್ಟು !

ರಾಮು–ಆಂ ?

ಕಿಟ್ಟಿ–ಬೆಳಗ್ಗೆ ಎರಡೆರಡು ಇಡ್ಲಿ, ಕಾಫಿ, ಇಲ್ಲದೆ ಕಣ್ಣೇ ಬಿಡೊಲ್ಲ ಅಲ್ಲವೇ?...ಲೋ, ಬೆಪ್ಪು ತಕ್ಕಡೀ, ನಾಳೆ ಬೆಳಗ್ಗೆ ನಿಮ್ಮ ಅಪ್ಪ ಇಲ್ಲಿ ಬಂದು ಇಳಿದರೆಂದರೆ, ಬಿಡಿಸುತ್ತಾರೆ ನಮ್ಮ ಕಣ್ಣು ಕಣ್ಣು !

ರಾಮು–ನಮ್ಮಪ್ಪ? ಇಲ್ಲಿ ಬಂದಿಳಿದು? ಇಲ್ಲಿ ಯಾಕೆ–

ಕಿಟ್ಟಿ–ಇಲ್ಲೇ, ಇಲ್ಲೇನೋ ಬಂದು ಇಳಿಯುವುದು. ಇದು ಹೋಟಲು ಮಾವನ ಮನೆ ಅಲ್ಲವೋ, ನಿಜವಾದ ಮಾವನ ಮನೆ !

ರಾಮು–ಆಂ ?

ಕಿಟ್ಟಿ–ಊರಿಗೊಬ್ಬಳೇ ಪದ್ಮಾವತಿ. ಆ ವೀಣೆ ನುಡಿಸಿದವಳೇ, ಜೊತೆಗೆ ಹಾಡಿದ ಕೋಗಿಲೆಯೇ ನಿನ್ನ ಸಂಸಾರ ಪಂಜರದಲ್ಲಿ ರಾರಾಜಿಸುವ ಪದ್ಮ.

ರಾಮು–ಆಂ?

ಕಿಟ್ಟಿ–ಆ ಗಜಗಮನೆ ಅತ್ತೆ, ಅಜಮಹಾರಾಜ ಮಾವ, ಶಾಂತಿ ನಾದಿನಿ, ಪಂಕಜ–

ರಾಮು–ಲೋ, ಲೋ–

ಕಿಟ್ಟಿ–ಕಡೇ ಐಟಮ್ಮು ಕೇಳು–ಆ ರಸ್ತೆಯಲ್ಲಿ ಸಿಕ್ಕ ಮೋಟುದ್ದದ ಲೈಟು ಹೌಸೇ, ಗುಂಡ, ನಿನ್ನ ಭಾವಮೈದುನ!

ರಾಮು–ಆಂ?

ಕಿಟ್ಟಿ–ಏನು "ಆ"? ನಿಮ್ಮ ಮಾವ ಆಗ ಹೀಗೇ ಆ ಆ ಅಂದಿದ್ದಕ್ಕೆ ದಬಾಯಿಸಿದೆ, ಈಗ ನೀನೇ ಅವರ ಹಾಡೇ ಹಾಡುತ್ತಿದ್ದಿ!

ರಾಮು–ಕಿ ಕಿ...ಕಿಟ್ಟೀ, ಇದು ನಿಜವೇ?

ಕಿಟ್ಟಿ–ನಿಜ. ನಿಜವಾಗಲೂ ನಿಜ.

ರಾಮು–ಯಾ....ಯಾರು ಹೇಳಿದರು ನಿನಗೆ? ಪಂಕಜಾನಾ?

ಕಿಟ್ಟಿ–ಅವಳೂ ಹೇಳಿದಳು. ಆ ನಿನ್ನ ಭಾವಮೈದುನನೂ ಹೇಳಿದ.

ರಾಮು–ಭಾವಮೈದುನ? ಬ್ಲಾಗ್ಗಾರ್ಡ್, ಸ್ಕೌಂಡ್ರೆಲ್,–

ಕಿಟ್ಟಿ–(ಅವನ ಬಾಯಿ ಮುಚ್ಚಿ) ಲೋ ಲೋ ಲೋ, ಸುಮ್ಮನಿರೋ... ಬಯ್ಯಬೇಡ ಅವನನ್ನ. ಅವನು ಸಾಧಾರಣ ಪ್ರಾಣಿ ಅಲ್ಲ...ಪ್ರಚಂಡ. ಕೆಣಕಿದರೆ ಕೆಂಡ...ಬಾಂಬಿನ ಬುಟ್ಟಿ...ಅವನ ಅಪ್ಪ ಅವನನ್ನ ಕಪಿ ಅಂದರಂತೆ–ಅದಕ್ಕೆ ಅವರಿಗೆ ಶಿಕ್ಷೆ ಅಂತ ಹೀಗೆ ಮಾಡಿದನಂತೆ.

ರಾಮು–ಓ...ಓ...ಹಾಗಾದರೆ ಅವಳೇನೇ, ಪದ್ಮ?

ಕಿಟ್ಟಿ–ಉಸಿರು ಮೆತ್ತಗಾಗಿ ಸಾಫ್ಟ್ ಸೈಡಿಗೆ ಬಂತು ಅಲ್ಲ? ಹೌದು. ಅವಳೇ ಪದ್ಮ. ಅಡಿಗೆಯವಳು, ದರ್ಜಿ, ವೀಣಾರಾಣಿ ಇತ್ಯಾದಿ ಇತ್ಯಾದಿ–

ರಾಮು–ಮತ್ತೆ ಗರುಡಗಂಭ, ಸೀರೆ, ಒಣಗು ಕಟ್ಟುವುದು ಅಂದನಲ್ಲೋ ಅವನು?

ಕಿಟ್ಟಿ–ತಪ್ಪು ನಮ್ಮದೇ. ನಾವು ಅವನನ್ನ ಶುಂಠ, ಘಟಿಂಗ ಹಾಗೇ ಹೀಗೇ ಅಂದೆವಲ್ಲಾ – ಅವನು ಮುಯ್ಯಿಗೆ ಮುಯ್ಯಿ ತೀರಿಸಿಕೊಂಡ. ಈಗ ಹಾಗಾದರೆ ಹೆಣ್ಣು ಒಪ್ಪಿದ ಹಾಗಾಯಿತು ತಾನೇ?

ರಾಮು–ಗಂಡಿನ ಗತಿ ಹೇಳೋ! ನಾಳೆ ನಮ್ಮ ಅಪ್ಪ ಬಂದರೆ–ಒದ್ದು ಓಡಿಸಿಕೊಳ್ಳದೆ ಇರುವುದು ಹೇಗೋ?

ಕಿಟ್ಟಿ–ನಾವು ಸಂಗೀತ ಕೇಳೊಕ್ಕೆ ಅಂತ ಮಾಡಿದ ನಾಟಕವೆಲ್ಲಾ ಮರೆತುಬಿಡುತ್ತಾರೆ...ಅವರು ಬರುತ್ತಲೇ ಇವರು ವರದಿ ಒಪ್ಪಿಸುತ್ತಾರೆ. ಇಬ್ಬರು ಮುದುಕರೂ ಸೇರಿ ನಮ್ಮನ್ನ–



ರಾಮು–ಕಿಟ್ಟಿ, ಒಂದು ಕೆಲಸ ಮಾಡೋಣ–

ಕಿಟ್ಟಿ–ಏನು?

ರಾಮು–ಈಗ ಹೇಗೂ ಎಲ್ಲರೂ ಮಲಗಿದ್ದಾರೆ. ನಮ್ಮ ಸಾಮಾನೂ ಏನಿಲ್ಲ. ಒಂದೊಂದು ಸೂಟುಕೇಸು. ತೆಪ್ಪನೆ ಹೇಳದೆ ಕೇಳದೆ ಎದ್ದುಬಿಡೋಣ.

ಕಿಟ್ಟಿ–ಏನುಪಯೋಗವೋ? ಹೇಡಿಗಳು ಅಂತ ಬಿರುದು ಬೇರೆ ಬಂದು ಅಂಟಿಗೊಳ್ಳುತ್ತೆ. ನೀನು ಈ ಪದ್ಮನ್ನ ಕಳೆದುಕೊಳ್ಳಬೇಕು. ನಾನು ಪಂಕಜನ್ನ ಬಿಡುವ ಹಾಗಿಲ್ಲ.

ರಾಮು–ಮತ್ತೇನು ಮಾಡೋಣ ಅನ್ನುತ್ತೀಯೋ?....ಈ ಗೋವಿಂದ ರಾಯರ ಕಾಲು ಮೇಲೆ ಗುಟ್ಟಾಗಿ ಬಿದ್ದು ಕ್ಷಮಾಪಣೆ ಕೇಳಿಕೊಂಡರೆ?

ಕಿಟ್ಟಿ–ಇಂಪಾಸಿಬಲ್...ಹಾಗೆ ಮಾಡಿದರೆ ಆಮೇಲೆ ನಿನ್ನನ್ನ ಅಳಿಯ ಅಂತ ಲೆಕ್ಕಕ್ಕಿಡುತ್ತಾರೇನೋ? ರೂಲ್ಸು ಪ್ರಕಾರ ಮಾವ ಅಳಿಯನ ಕಾಲು ತೊಳೆಯಬೇಕೇ ವಿನಾ, ಅಳಿಯನೇ ಹೋಗಿ ಮಾವನ ಕಾಲ ಮೇಲೆ ಬಿದ್ದರೆ, ಸಂಪ್ರದಾಯಸ್ತರೇನಂದಾರೋ?

ರಾಮು–ಮತ್ತೆ ?...ಹೀಗೆ ಮಾಡಿದರೆ?...ಅವರು ಕೇಳಿದಾಗ...ನಮ್ಮ ತಪ್ಪಲ್ಲ, ನಿಮ್ಮ ಮಗನದು ಅಂತ ಅವನ ಮೇಲೆ ಹಾಕಿಬಿಟ್ಟರೆ–?

ಗುಂಡ–(ಪ್ರವೇಶಿಸುತ್ತಾ) ಹಾಕಿಬಿಡಬಹುದು. ಆದರೆ ಅದು ಅನ್ ಜಂಟಲ್ಮನ್ಲೀ. ಒಬ್ಬರ ಮೇಲೆ ತಪ್ಪು ಹೇರೊಕ್ಕೆ ಹೋಗಬಾರದು. ಕಾಲೇಜಿನಲ್ಲಿ ಓದಿ ಬಂದ ನೀವು, ಹೈಸ್ಕೂಲ್ ದಾಟದವನಿಂದ ಕಲಿಯಬೇಕಾದ ಮಾರಲ್ಲು ! ನೀತಿ ಪಾಠ ! ಅರಿಯದೆ ಬಿದ್ದಿರಿ, ಭಾವಾ, ಒಪ್ಪಿದೆ. ಆದರೆ ಮಣ್ಣನ್ನು ಅನ್ಯರ ಹೆಗಲ ಮೇಲೆ ಕೊಡವಬಾರದು, ಭಾವಾ !

ರಾಮು–ಅಲ್ಲಯ್ಯ, ನೀನು ನಮ್ಮನ್ನು–

ಗುಂಡ–ಆ ಕತೆ ಎಲ್ಲಾ ಅಯಿತು ಬಿಡಿ. ಈಗ ನೀವು ಏನು ನಿರ್ಧಾರ ಮಾಡಿದಿರಿ?–ನಾನು ಬಂದಾಗ ಹೇಳುತ್ತಾ ಇದ್ದದ್ದಲ್ಲದೆ?

ಕಿಟ್ಟಿ–ಯಾವ ನಿರ್ಧಾರಕ್ಕೂ ಬರಲಿಲ್ಲ. ಇವರ ತಂದೆ ನಾಳೆ ಬೆಳಗ್ಗೆ ಇಲ್ಲಿಗೆ ಮುಕ್ಕಾಲುಪಾಲು ಬಂದೇ ಬರುತ್ತಾರೆ. ಅವರಿಗೆ ಗೊತ್ತಾಗಿ ಗಲಾಟೆ ಆಗೇ ಆಗುತ್ತೆ. ಸದ್ಯಕ್ಕೆ ತಪ್ಪಿಸಿಕೊಳ್ಳೊಕ್ಕೆ, ಯಾರಿಗೂ ಗೊತ್ತಾಗದ ಹಾಗೆ ಇಬ್ಬರೂ ಮನೆಯಿಂದ ಓಡಿಹೋಗೋಣ ಅಂದ–

ಗುಂಡ–ಯಾರಿಬ್ಬರು? ಇವರೂ ಪದ್ಮಾನೇ?

ಕಿಟ್ಟಿ–ಉ ಹು ಹು, ಇವನೂ ನಾನೂ.

ಗುಂಡ–ನೀವು ನೀವೇನೇ? ಮತ್ತೆ ಪದ್ಮ ಪಂಕಜ? ಅವರ ಗತಿ? ಒಬ್ಬಳು ಭಾವಿಗೆ ಬೀಳುತ್ತಾಳೆ. ಇನ್ನೊಬ್ಬಳು ನಲ್ಲಿಗೆ ನೇಣು ಹಾಕಿಕೊಳ್ಳಬಹುದು, ಅಲ್ರೀ, ಈಸಬೇಕು ಇದ್ದು ಜೈಸಬೇಕು ಅನ್ನುವುದು ಬಿಟ್ಟು, ನಂಬಿದವರಿಗೆ ಕೈ ಕೊಟ್ಟು ಇಂಥ ಸಣ್ಣ ವಿಷಯಕ್ಕೇ ಬೆನ್ನು ತೋರಿಸುವ ಉತ್ತರ ಭೂಪಂದಿರು ನೀವು! ನಿಮ್ಮನ್ನು ಕಟ್ಟಿಕೊಂಡು ಆ ನನ್ನ ಪೂರ್ ಸಿಸ್ಟರ್ಸ್ ಏನು ಸಂಸಾರ ಮಾಡುತ್ತಾರೋ ನಾನು ಕಾಣೆ.

ಕಿಟ್ಟಿ–ಮತ್ತೇನು ಮಾಡಬೇಕು ಅನ್ನುತ್ತೀಯಯ್ಯಾ?

ಗುಂಡ–ಹಾಗೆ ಕೇಳಿ ಹೇಳುತ್ತೇನೆ. (ರಾಮೂಗೆ) ನಿಮ್ಮ ತಂದೆ ನಾಳೆ ಬಂದರೆ, ನನ್ನ ಕೆಲಸ ಅರ್ಧಕ್ಕೆ ಸುಲಭ. ಅವರು ಬರಲಿ ಅಂತ ಪ್ರಾರ್ಥಿಸಿ... ಹೆದರಬೇಡೀ....ಈಗ ಸಧ್ಯಕ್ಕೆ–

ರಾಮು–ಹುಂ...ಹುಂ...ಏನು ಮಾಡೋಣ?

ಗುಂಡ–ರೂಮಿಗೆ ಹೋಗಿ ಮಲಗಿಕೊಳ್ಳಿ. (ಕಿಟ್ಟಿಗೆ) ಇನ್ನೇನೂ ನೀವು ಗಡಿಯಾರ ನೋಡಬೇಕಾದ್ದಿಲ್ಲ. ಮುಹೂರ್ತದವರೆಗೂ ತಿರುಗಿಬಿಟ್ಟಿವೆ ಮುಳ್ಳುಗಳು...ಹಾಯ್ಯಂತ ಮಲಗಿಕೊಳ್ಳಿ. ನಾನಿದೇನೆ. ನೀವು ಹೇಳಿದ ಹಾಗೆ, ತಪ್ಪೋ ಒಪ್ಪೋ, ಈ ಕಪಟ ನಾಟಕಕ್ಕೆ ಸೂತ್ರಧಾರಿ ನಾನು. (ನಾಟಕೀಯವಾಗಿ) ನಾನು ನಿಮ್ಮನು ಹೇಗೆ ಹೇಗೆ ಆಡಿಸಿದೆನೋ ನೀವು ಹಾಗೆ ಹಾಗೆ ಆಡಿದಿರಿ. ನಿಮಗೆ ಮಾನ ಅವಮಾನವೆಲ್ಲಿಯದು? ಓಹೋ, ಇದು ಭಗವದ್ಗೀತೆ ಸ್ಟೈಲು! ಕೃಷ್ಣನ ಜೊತೆಗೆ ಕಾಂಪಿಟೀಷನ್, ನಾಟ್ ಕರ್ರೆಕ್ಟ್...ನೀವು ಹೋಗಿ, ಪರವಾಗಿಲ್ಲ, ನನ್ನ ನಂಬಿ ಕೆಟ್ಟವರಿಲ್ಲ, ಕೆಣಕಿ ಬದುಕಿದವರಿಲ್ಲ... ಹೋಗಿ– (ತಳ್ಳುತ್ತಿರಲು)

– ತೆರೆ –

## ದೃಶ್ಯ ೧೦

[ಅದೇ ಸ್ಥಳ. ಮರುದಿನ ಬೆಳಗ್ಗೆ. ಗೋವು ಒಂದು ಬೆಳ್ಳಿತಟ್ಟೆಯಲ್ಲಿ ಇಡ್ಲಿಗಳನ್ನೂ, ಕೆಟಲ್ಲು ತುಂಬ ಕಾಫಿಯನ್ನೂ ಹಿಡಿದು ಪ್ರವೇಶಿಸಿ, ರಾಮು ಕಿಟ್ಟಿ ರೂಮಿಗೆ ಹೋಗುವರು....ಸ್ವಲ್ಪವೇ ಹೊತ್ತಿನಲ್ಲಿ ಎಲ್ಲರೂ ಪ್ರವೇಶಿಸುವರು]

ರಾಮು–ಇದೇನಿದೇನಿದೇನಿದನ್ಯಾಯ? ಎಲ್ಲಾದರೂ ಉಂಟೆ?

ಕಿಟ್ಟಿ–ಎಲ್ಲಾದರೂ ಉಂಟೆ? ಉದಯಕಾಲದೊಳೆದ್ದು, ನದಿಯ ಸ್ನಾನವ



ಬೇಡ, ಮುದದಿ ಮುಖವನ್ನಾದರೂ ತೊಳೆಯದೆ ಈ ಇಡ್ಲಿ–ಕಾಫಿ ನೈವೇದ್ಯ ಒಪ್ಪಿಕೊಳ್ಳುವುದೇ? ಎಲ್ಲಾದರೂ ಉಂಟೆ?

ರಾಮು–ಎಲ್ಲಾದರೂ ಉಂಟೆ? ಬಿ.ಎ. ಪ್ಯಾಸು ಮಾಡಿದರೆ ತಾನೇ ಮಿನಿಮಮ್ಮು ಬ್ರಾಹ್ಮಣಿಕೆ ಬಿಡೋಕ್ಕಾಗುತ್ತೆಯೇ? ಏನಿಲ್ಲ ಅಂದರೂ ಮೂರು ಅಚಮನ, ಕಾಲಾತಿಕ್ರಮ ಪ್ರಾಯಶ್ಚಿತ್ತದ್ದೂ ಸೇರಿ ಆರು ಅರ್ಘ್ಯ ಬಿಡದೆ ಇವನ್ನೆಲ್ಲಾ ತೊಗೊಳ್ಳಬಹುದೇ? ಎಲ್ಲಾದರೂ ಉಂಟೇ?

ಗೋವು–...ಅಲ್ಲ, ನೀವೇ...ನಿನ್ನೆ ರಾತ್ರಿ...ಹೇಳಿದಿರಿ–

ರಾಮು–ಅಯ್ಯಯ್ಯೋ, ನೀವು ಅದನ್ನು ಇಷ್ಟು ಸೀರಿಯಸ್ಸಾಗಿ ತೊಗೊಳ್ಳುತ್ತೀರಿ ಅಂದುಕೊಂಡಿರಲಿಲ್ಲ. ನಾನು ಸುಮ್ಮನೆ ತಮಾಷೆಗೆ ಹೇಳಿದೆ.

ಕಿಟ್ಟಿ–ನೋಡಿದೆಯಾ? ನೀನು ತಮಾಷೆಗೆ ಅಂತ ಹೇಳಿದ್ದು ಅವರಿಗೆ ಪಾಪ, ಎಷ್ಟು ತೊಂದರೆ ಆಯಿತ!...ಸ್ವಾಮೀ, ನಾವು ಸ್ನಾನ ಮಾಡಿಬಿಡುತ್ತೇವೆ ಮೊದಲು...ಆಮೇಲೆ–

ರಾಮು–ನೀರು ಕಾದಿದ್ದರೆ ಸರಿ. ಇಲ್ಲದಿದ್ದರೆ ತಣ್ಣೀರಾದರೂ ಪರವಾಗಿಲ್ಲ

ಕಿಟ್ಟಿ–ಮೈಯಿಗಿನ್ನೂ ಬಲ ಜಾಸ್ತಿ.

ಗೋವು–ಛೀ ಛೀ ಛೀ ಛೀ, ನೀರು ಮರಳುತ್ತಿದೆ. ನಮಗೆ ಸೌದೆಗೆ ಬರವೇ? ಬಂದೆ. (ನಿಷ್ಕ್ರಮಿಸುವರು)

ಕಿಟ್ಟಿ–ಸ್ಪೈಂಡಿಡ್ಡು, ನಿಮ್ಮಪ್ಪನಿಗೆ ದೇವರ ದಯದಿಂದ ರೈಲು ತಪ್ಪಿದರೆ, ಇದೇ ರೇಟಿನಲ್ಲಿ ಸೆಕೆಂಡು ಡೋಸ್ ಕಾಫಿಯ ಟೈಮಿಗೆ ಕಂಪ್ಲೀಟ್ ಕಾಂಪ್ರಮೈಸು....ಅವರೇನಾದರೂ ಬಂದರೋ–

(ಹೊರಗಡೆ ಗಾಡಿ ಬಂದು ನಿಂತ ಶಬ್ದ...ಮಾತುಗಳು)

ಕಿಟ್ಟಿ–ಗಾಡಿ...

ರಾಮು–ಮಾತುಗಳು.

ಕಿಟ್ಟಿ–ನಿಮ್ಮ ಅಪ್ಪನದೇ ಧ್ವನಿ.

ರಾಮು–ಕ್ಯಾಚುವರ್ಡಿಗೆ ಕಾದಿದ್ದ ಹಾಗೆ ಬಂದರಲ್ಲೋ!

ಕಿಟ್ಟಿ–ಕೆಟ್ಟೆವಲ್ಲೋ ! ಗತಿ?

(ಗಣೇಶರಾಯರು ನೇಪಥ್ಯದಿಂದ–"ಗೋವೂ")

ರಾಮು–ಅಗೋ! ಏನು ಮಾಡುವುದು? ಈ ಗುಂಡೂರಾವೂ ಪತ್ತೆ ಇಲ್ಲವಲ್ಲೋ ! ಅವನ್ನ ನಂಬುವುದು ತಾನೇ ಹೇಗೋ?

(ನೇಪಥ್ಯದಿಂದ ಗಣೇಶರಾಯರು–"ಗೋವೂ")

ರಾಮು–ಅಗೋ! ಏನು ಮಾಡುವುದು? ಈ ಗುಂಡೂರಾವೂ ಪತ್ತೆ ಇಲ್ಲವಲ್ಲೋ ! ಅವನ್ನ ನಂಬುವುದು ತಾನೇ ಹೇಗೋ?

ಕಿಟ್ಟಿ–ಏನು ಗೋವೂನೋ ಅದು?

ರಾಮು–ಮುದ್ದಿಗೆ ಮೊಟಕು ಮಾಡಿರುವುದೋ, ಗೋವಿಂದ ರಾಯರ ಡಿಮ್ಯುನಿಟಿವ್ವೋ–ಅವರು "ಗೋವು ಗೋವು" ಅಂತ ಕೂಗುತ್ತಾ ಇದ್ದರೆ, ಈ ಗೋವು ಒಳಗಿಂದ "ಅಂಬಾ" ಅಂತ ಬಂದರೆ–

ಕಿಟ್ಟಿ–ರಾಮೂ, ರಾಮೂ, ಅಲ್ಲಿ ನೋಡು...ನಿಮ್ಮ ತಂದೆ ಅಂಡ್ ನಿನ್ನ ಭಾವಮೈದುನ...ಅದೇನೋ ಪಿಸಿ ಪಿಸಿ...ನೋಡು ನೋಡು...

ರಾಮು–ಆಯಿತು. ಆಯಿತು...ನಾವು ಬೆಪ್ಪು ತಕ್ಕಡಿಗಳೋ ! ಅವನ್ನ ನಂಬಿದೆವು. ಎಲ್ಲಾ ಹೇಳಿಬಿಡುತ್ತಾನೆ. ಈಗ ಓಡಿ ಹೋಗೋಣ ಅಂದರೆ, ರಿಟ್ರೀಟೂ ಕಟ್ ಅಫ್‌ಉ!

ಕಿಟ್ಟಿ–ಈ "ಕವ್ ಪಪ್ಪನೂ" ಪತ್ತೆಯೇ ಇಲ್ಲವೇ. "ಬಂದೆ" ಅಂತ ಹೋದವರು ಹೋಗಿಯೇ ಬಿಟ್ಟರೇ!

ಗೋವು–(ಪ್ರವೇಶಿಸಿ) ನೀರು ಸಿದ್ಧ...ಬರುತ್ತೀರಾ?

ರಾಮು–ಕಿಟ್ಟಿ–ಅಯ್ಯೋ, ಬರದೇ ಉಂಟೇ? ನಡೆಯಿರಿ.

(ಗೋವೂನೂ ತಳ್ಳಿಕೊಂಡು ಒಳಬಾಗಿಲಾಚೆ ನಿಷ್ಕ್ರಮಿಸುವರು. ಗಣೇಶರಾಯರು ಪ್ರವೇಶಿಸಿ)

ಗಣೇಶ–(ನೇಪಥ್ಯಕ್ಕೆ) ಸರಿ. ಸರಿ. ಅರ್ಥವಾಯಿತು. ನಾನು ನೋಡಿಕೊಳ್ಳುತ್ತೇನೆ ಬಿಡು. (ಸೋಫಾದಲ್ಲಿ ಕುಳಿತು, ರುಮಾಲು ತೆಗೆದಿಟ್ಟು, ಅತ್ತಿತ್ತ ನೋಡಿ) ಏನ್ರೀ, ಯಾರೂ ಹೇಳಿಕೇಳುವವರಿಲ್ಲವೇನ್ರೀ ಇಲ್ಲಿ? ಆ? (ಗೋವು ಬಾಗಿಲಲ್ಲಿ ಕಾಣಿಸಿಕೊಳ್ಳಲು) ಏನ್ರೀ? ಅರ್ಧ ಗಂಟೆ ಆಗಬೇಕೋ ನಿಮ್ಮ ಮುದ್ದು ಮುಖ ತೋರಿಸೊಕ್ಕೆ? ಆಂ?

ಗೋವು–(ಮುಂದೆ ಬರುತ್ತಾ) ಗಣೇಶ?

ಗಣೇಶ–ಹೌದು. ನಾನು ಗಣೇಶ. ನಮ್ಮಮ್ಮ ಗೌರಿ. ನಮ್ಮಪ್ಪ ಗೋವರ್ಧನರಾವ್. ನಾನು ಚಲನಚಿತ್ರ ಕತೆಗಾರ. ನನ್ನ ಮಗ ಈ ಊರಿಗೆ ಹೆಣ್ಣು ನೋಡೋಕ್ಕೆ ಬಂದಿದ್ದಾನೆ. ಸಾಧ್ಯವಾದರೆ ನಾನೂ ಬರುತ್ತೇನೆ ಅಂತ ಹೇಳಿದ್ದೆ. ಸಾಧ್ಯವಾಯಿತು, ಬಂದೆ. ಇಷ್ಟನ್ನೂ ನೀವು ನಿಮ್ಮ ಜ್ಯೋತಿಷ್ಯದಲ್ಲಿ ತಿಳಿದುಕೊಂಡಿದ್ದೀರಿ. ಹೌದೋ, ಅಲ್ಲವೋ?



ಗೋವು–(ಪಕ್ಕದಲ್ಲಿ ಕೂಡುತ್ತಾ) ಏನೋ ಇದು, ಗಣೇಶಾ?

ಗಣೇಶ–ಇದು, ಇದು ಏನ್ರೀ? ಏಳ್ರೀ, ಏಳ್ರೀ, ಅಲ್ಲಿ ದೂರ ಕೈ ಕಟ್ಟಿ ನಿಂತು ಮಾತಾಡ್ರೀ. ಸರಿಸಮಾನಸ್ಕರ ಹಾಗೆ ಬಂದು ಪಕ್ಕದಲ್ಲೇ ಕೂತುಬಿಟ್ಟಿರಲ್ಲಾ? ಸುಮ್ಮನಿದ್ದರೆ, ಮೆತ್ತಗಿರುತ್ತೆ ಅಂತ ತೊಡೆಯೂ ಹತ್ತೀರಿ?

ಗೋವು–ಲೋ, ಗಣೇಶಾ, ನಾನು ಗೋವೂನೋ !

ಗಣೇಶ–ಸಂತೋಷ. ಕರುಗಳಿಗೆಲ್ಲಾ ಹಾಲು ಕುಡಿಸಿ ಆಗಿದ್ದರೆ, ಅಲ್ಲಿ ಹೊರಗೆ ಹೋಗಿ ನನ್ನ ಹೋಲ್ಡಾಲು, ಸೂಟುಕೇಸು ಇವೆ. ಅವನ್ನು ತರಿಸಿ ಒಂದು ಒಳ್ಳೆ ರೂಮಿನಲ್ಲಿ ಇಡಿಸಿ. ರೂಮು ದೊಡ್ಡದಾಗಿರಲಿ. ನನಗೆ ಗಾಳಿ ಜಾಸ್ತಿಬೇಕು. ದೊಡ್ಡ ದೊಡ್ಡ ಕಿಟಕಿಗಳು ಇರುವುದು ನೋಡಿ. ಬಾಡಿಗೆ ಎಷ್ಟಾದರೂ ಚಿಂತಿಲ್ಲ. (ಭಾಗೀರಥಿ ಕಾಣಿಸಿಕೊಳ್ಳುವರು) ಅಯ್ಯೋ, ಭಾಗೂ? ನೀನೇನೇ ಇಲ್ಲಿ ಬಂದಿದ್ದಿ? ಇವನ ಹೋಟಲ್ಲಿಗೆ?

ಗೋವು–"ಹೋಟಲ್ಲಿ"ಗೆ? ಓ...ಲೇ, ಏನು ಹಣೆಬರೆಹವೇ ನಮ್ಮದು? ಆ ಮಗನೇ ವಾಸಿಯಲ್ಲೇ, ಅವನ ಅಪ್ಪ, ಇವನು...ಇವನು–

ಗಣೇಶ–ಏಯ್, ಸಾಕು ನಿಲ್ಲಿಸೋ, ಮಾತಾಡುತ್ತಾನೆ. ಮಾತಾಡುವ ಪೆದ್ದು ಕೆಲಸ ಮಾಡಿ, ಮಗ ವಾಸಿ. ನಾನು, ನಾನು, ನಾನು ಅಂತ ತೊದಲುತ್ತಾನೆ! ಸೂರ್ಯನ್ನ ಕಚ್ಚೋಕ್ಕೆ ಹೋದ ಹನುಮಂತ ಕಪಾಳಕ್ಕೆ ಹೊಡೆಸಿ ಕೊಂಡು ಬಂದ ಕತೆ ಕೇಳಿದ್ದೀ ತಾನೇ?

ಗೋವು–ಆಂ?

ಗಣೇಶ–ಅದೇ ಬಾಬತ್ತು, ಇಲ್ಲಿ ಸ್ವಲ್ಪ ವ್ಯತ್ಯಾಸ. ಅಂದರೆ, ನೀನು ಸೂರ್ಯ ಅಂತ ತಿಳಿದುಕೊಂಡು ಕೆನ್ನೆಗೆ ಹೊಡೆಯೊಕ್ಕೆ ಹೋದಿ, ಹನುಮಂತ ನಿನ್ನ ಮೂತಿ ಪರಚಿದ...ಅಲ್ಲವೋ, ಅದು ಯಾಕೋ ನೀನು ನಿನ್ನ ಮಗನ್ನ "ಕಪಿ" ಅಂದದ್ದು?

ಗೋವು–ನಾನೆಲ್ಲಂದೆ?

ಭಾಗಿ–ಅನ್ನಲಿಲ್ಲವೇನೂ? ಸ್ಟೇಷನ್ನಿಗೆ ಹೋಗಲಿ ಅಂತ ನಾನಂದಾಗ, ಕಪಿವಿದ್ಯ ಮಾಡಿಯಾನು, ಬಾಲ....ಹನುಮಂತರಾಯ.....

ಗಣೇಶ–ಅನ್ನಲಿಲ್ಲವೇನು?

ಗೋವು–ಓ, ನೀವು ನೀವೆಲ್ಲಾ ಸೇರಿಕೊಂಡಿದ್ದೀರಾ? ನನ್ನ ಮೂತಿಗೆ ಮಸಿ ಬಳೆಯೊಕ್ಕೆ? (ಗಣೇಶನಿಗೆ) ನೀನೂ ಸೇರಿದೆಯಾ ಈ ಪಿತೂರಿಗೆ? ಸಂತೋಷ ಪಡಿ ಎಲ್ಲರೂ, ನನಗೆ ಅವಮಾನ ಆದರೂ–

ಗಣೇಶ–ಲೋ, ಲೋ, ಗೋವೂ, ಬಾರೋ...ಬಾರೋ ಇಲ್ಲಿ. ಕೋಪ ಅನ್ನುವುದಿದೆಯಲ್ಲಾ, ಅದು ಯಾರ ಅಪ್ಪನದೊಬ್ಬನದೇ ಮನಾಪೊಲಿ ಅಲ್ಲ. ನಿನಗೆಷ್ಟಿದೆಯೋ ನಿನ್ನ ಮಗನಿಗೂ ಅಷ್ಟೇ ಇದ್ದರೆ, ಅದು ನ್ಯಾಚುರಲ್ಲು ಅಂತ ಅಪ್ರಿಷಿಯೇಟು ಮಾಡು. ಅಲ್ಲವೋ, ನಿನ್ನ ಮಗ ಮೆಟ್ರಿಕ್ಯುಲೇಷನ್ ಪರೀಕ್ಷೆ ಪ್ಯಾಸು ಮಾಡಲಿಲ್ಲ, ಆದ್ದರಿಂದ ಅವನು ಶುದ್ಧ ಅಪ್ರಯೋಜಕ ಅಂತ ಕೈಲಾಸಂ ಟೊಳ್ಳು ಗಟ್ಟಿ ಬರೆದು ವರ್ಷಗಟ್ಟಲೆಯ ಮೇಲೂ ಬಡಿದುಕೊಳ್ಳುತ್ತಿದ್ದೀಯಲ್ಲೋ! ನಿನ್ನ ಗುಂಡನ ತಲೆ ಅಸಾಧ್ಯವೋ – ಆಕಾರ ಚಿಕ್ಕದಾದರೂ – ಈಗ ಮೂರೇ ನಿಮಿಷಗಳಲ್ಲಿ ತಿಳಿದುಕೊಂಡೆನೋ !

ಗೋವು–ಓಹೋ, ಅವನೂ ?...

ಗಣೇಶ–ಅವನೇ...ಅವನೇ ಇದನ್ನ ಹೋಟಲ್ಲು ಮಾಡಿ, ಅಳಿಯ ಗೆಳೆಯರ ಬಾಯಿಲಿ ಬಾಯಿಗೆ ಬಂದ ಹಾಗೆ ಅನ್ನಿಸಿ – ಆದರೆ ಗೋವು, ಅವನು ಏನು ಬೇಕಾದರೂ ಮಾಡಬಹುದಿತ್ತು. ಒಂದು ನಷ್ಟವೂ ಆಗಬಾರದು, ತನ್ನ ಕೋಪವೂ ಆರಬೇಕು ಅನ್ನುವ ಹಾಗೆ ಮಾಡಿದನಲ್ಲೋ! ನೋಡು, ರಾಮು ಇಲ್ಲಿಗೆ ಬರಬೇಕಾಗಿತ್ತು. ಬಂದ.

ಗೋವು–ಬಂದ.

ಗಣೇಶ–ಔತಣದ ಅಡಿಗೆ ಮಾಡಿಸಿದ್ದಿ. ತಿಂದ.

ಗೋವು–ತಿಂದ.

ಗಣೇಶ–ನಿನ್ನ ಮಗಳನ್ನು ನೋಡಬೇಕಿತ್ತು, ನೋಡಿದ.

ಗೋವು–ನೋಡಿದ.

ಗಣೇಶ–ಸಂಗೀತ ಕೇಳಿಸಬೇಕು ಅಂತ ಇದ್ದಿ, ಕೇಳಿದ.

ಗೋವು–ಕೇಳಿದ.

ಗಣೇಶ–ಇನ್ನೇನೋ?

ಗೋವು–ಇನ್ನೇನಿಲ್ಲ? ಅವನೂ ಅವನ ಸ್ನೇಹಿತನೂ ನನ್ನನ್ನ ಹೋಟಲ್ಲು ಪ್ರೊಪ್ರೈಟರ್ರು ಮಾಡಿ–

ಗಣೇಶ–ಏನಾದರೂ ಒಂದು ಮಾಡಲೇ ಬೇಕಲ್ಲ...

ಗೋವು–ಅಂದರೆ ಈಗ ನೀವೆಲ್ಲಾ ಮಾಡಿದ್ದು ಸರಿ, ನಾನೇ ಶಿಶುಹತ್ಯ, ಗೋಹತ್ಯ, ಬ್ರಹ್ಮಹತ್ಯ–

ಗಣೇಶ–ಇವೆಲ್ಲಾ ಮಕ್ಕಳ ಮನಸ್ಸು ನೋಯಿಸುವಷ್ಟು ಪಾಪಗಳಲ್ಲವೋ.

ಗೋವು–ನಾನು ಗುಂಡನ್ನ ಕಪಿ ಅಂತ ಒಂದು ಮಾತಂದದ್ದು ಮಹಾ



ಪಾಪ–

ಗುಂಡ–(ಪ್ರವೇಶಿಸುತ್ತಾ) ಎಲ್ಲಾದರೂ ಉಂಟೇನಪ್ಪಾ?

ಗೋವು–ಅಯ್ಯೋ, ಅನಿಷ್ಟಮುಂಡೇಗಂಡ, ನಿನ್ನಿಂದ–

ಗುಂಡ–ನನ್ನಿಂದಾನೇ, ಅಪ್ಪ. ತಪ್ಪು ನಿಂದು ಅಂತ ನಾನು ಹೇಳುತ್ತಾ ಇಲ್ಲ. (ಮರೆಯಲ್ಲಿರುವ ರಾಮು: ಕಿಟ್ಟಿಗೆ) ಬನ್ನಿ, ಬನ್ನಿ, ದಯಮಾಡಿ, ಸತ್ವ ಪರೀಕ್ಷೆ ಮುಗಿದು ಹೋಗಿದೆ.

(ರಾಮು : ಕಿಟ್ಟ ಪ್ರವೇಶಿಸುವರು)

ರಾಮು–(ಗೋವೂಗೆ) ದಯವಿಟ್ಟು ನಮ್ಮನ್ನು ಕ್ಷಮಿಸಿ, ನಾವು ನಿಜ ತಿಳಿಯದೆ ತಪ್ಪು ಮಾಡಿದೆವು.

ಗುಂಡ–ರೀ, ನಿಲ್ಲಿಸ್ರೀ, ಊಸುರುವಳ್ಳಿ ಬಣ್ಣ ಬದಲಾಯಿಸುವ ಹಾಗೆ ನಿಮ್ಮ ಮಾತುಗಳನ್ನು ಬದಲಾಯಿಸುತ್ತೀರಲ್ರೀ...ನಿನ್ನೆ ರಾತ್ರಿ, "ತಪ್ಪು ನಮ್ಮದಲ್ಲ, ನಿಮ್ಮ ಮಗಂದ ಅಂತ ಹೇಳಿದರಾಯಿತು" ಅಂದಿರಿ. ಈಗ–(ಗೋವೂಗೆ) ತಪ್ಪೆಲ್ಲಾ ನಂದೇ. ನೀನು ನನ್ನನ್ನು ಕಪಿ, ಹನುಮಂತರಾಯ, ಬಾಲ ಅಂದಿ...ಬೆಕ್ಕು ಅಂದಿ. ತಪ್ಪಿಲ್ಲಪ್ಪಾ. ಅಪ್ಪಂದಿರಿಗೆ ಮಕ್ಕಳನ್ನು ಇಷ್ಟು ಅನ್ನುವ ಹಕ್ಕೂ ಇಲ್ಲದಿದ್ದರೆ, ಅಪ್ಪಂದಿರು ಅನ್ನಿಸಿಕೊಂಡು ಏನು ಪ್ರಯೋಜನ? ಹೊಡೆದು ಬಡಿದು ಮಾಡೋಕ್ಕಿಂತ ಬಾಯಿಲಿ ನಾಲ್ಕು ಮಾತಾಡಿದರೆ ನಾವು ಆಕ್ಷೇಪಿಸಬಾರದು. ಹಾಗೇ, ಮಕ್ಕಳೂ, ಹೆಚ್ಚು ತೊಂದರೆ ಕೊಡದೆ, ತಮ್ಮ ಸ್ವಾಭಿಮಾನ, ಮರ್ಯಾದೆ ಕಾಪಾಡಿಕೊಂಡರೆ, ಆ ಹಕ್ಕೂ ಅವರಿಗೆ ಇದೆ, ಇರಬೇಕು ಅಂತ–

ಗಣೇಶ–ಭಲೆ, ಭಲೆ, ಹೌದು....ಹೌದು....

ಗುಂಡ–ನಾನು ಸಹಜವಾಗಿ ಕೋಪಿಸಿಕೊಂಡೆ...ಕೋತಿ ಕೋತಿಚೇಷ್ಟೆ ಅಲ್ಲದೆ ಕರಡಿಚೇಷ್ಟೆ ಮಾಡತ್ತೇನಪ್ಪಾ?

ಗಣೇಶ–(ಚಪ್ಪಾಳೆ ತಟ್ಟುತ್ತಾ) ಎಕ್ಸಲ್ಲೆಂಟ್....ಎಕ್ಸಲ್ಲೆಂಟ್, ಬಂಗಾರದಂಥ ಡಯಲಾಗು ನಮ್ಮ ಸಿನಿಮಾಕ್ಕೆ.

ಗುಂಡ–ನಾನು ಮಾಡಿದ ಚೇಷ್ಟೆಗೆ–ಒಂದು ಪ್ರಾಯಶ್ಚಿತ್ತ ಯೋಚನೆ ಮಾಡಿದ್ದೇನೆ. ಅಪ್ಪಾ, ನಿನಗೆ ಸಂತೋಷವಾಗುವಂಥದು...

ಗಣೇಶ–ಏನು ಅಸಾಧ್ಯವಾಗಿ ಮಾತು ಆಡುತ್ತೀಯೋ?

ಗುಂಡ–ಅಷ್ಟೇ ಅಲ್ಲ. ಆಡಿದ ಮಾತಿನ್ನ ಕೆಲಸದಲ್ಲಿ ಮಾಡಿ ತೋರಿಸುತ್ತೇನೆ. ಅದು ಸಾಮಾನ್ಯವಾಗಿ ಅಪರೂಪ. ಅಪ್ಪ, ನಾನು ಪಂಕಜನ್ನ ಮದುವೆ ಮಾಡಿಕೊಳ್ಳೊಲ್ಲ.

ಭಾಗಿ–ಗುಂಡಾ–?

ಗೋವು–ನೀನು ಸುಮ್ಮನಿರೇ....ಭೇಷ್ ! ಯಾಕೋ–

ಗುಂಡ–ಅವಳ ಕೆಲಸಕ್ಕೆ ಬಾರದ ವಿದ್ಯೆ ನಮಗೆ ಇಲ್ಲಿ ಬೇಕಿಲ್ಲ.

ಗೋವು–ಕರ್ರೆಕ್ಟ್.

ಭಾಗಿ–ಗುಂಡಾ–ಅವಳು ಓದಿದ ಹುಡುಗಿ. ಮೆಟ್ರಿಕ್ಯುಲೇಷನ್ ಪ್ಯಾಸು ಮಾಡಿದಾಳೋ–

ಗುಂಡ–ನಾನು ಮಾಡಿಲ್ಲ, ಅಮ್ಮಾ. ಆದರೆ ಅದಲ್ಲ ಕಾರಣ. ನೀನು ಕನ್ನಡ ಲೋಯರ್ ಸೆಕೆಂಡರಿ ಫೈಲು, ನಿನಗೆ ಅಪ್ಪನ ಓದೇ ಮೆಚ್ಚುಗೆ, ತೃಪ್ತಿ. ಪಂಕಜ ನಿನ್ನ ಹಾಗೇ ಹೆಂಗಸು. ತನ್ನ ಗಂಡ ಹೆಚ್ಚು ಓದಿರಬೇಕು ಅಂತ ಅವಳಿಗೆ ಅನ್ನಿಸೊಲ್ಲವೇನಮ್ಮಾ? ನಿನ್ನ ತಂಗಿ ಮಗಳು, ಅಪ್ಪ ಅಮ್ಮ ಇಲ್ಲದವಳು, ಅವಳು ಸುಖವಾಗಿರಲಿ ಅಂತ ನಿನ್ನಿಷ್ಟ. ಇರುವ ಹಾಗೆ ನಾನು ಬೇರೆ ಏರ್ಪಾಟು ಮಾಡಿದ್ದೇನೆ.

ಗೋವು–ಏನು....?

ಭಾಗಿ–ಬೇರೆ–?

ಗುಂಡ–ಹೂನಮ್ಮಾ....ಇಗೋ, ಇವರಿದಾರೆ ನೋಡು....ಮೈ ಡಿಯರ್ ಬ್ರದರ್ ಇನ್‌ಲಾಸ್ ಫ್ರೆಂಡು. ಮಿಸ್ಟರ್ ಕೃಷ್ಣರಾವ್ ಅಂತ ಹೆಸರು. ಬಿ.ಎ. ಮಾಧ್ವರು, ಭಾರದ್ವಾಜ ಗೋತ್ರ. ರಾಯರ ಮಠ. ತಂದೆ ತಾಯಿ ಇಲ್ಲ. ಆದರೆ ಅವರು ಸಂಪಾದಿಸಿ ಬಿಟ್ಟು ಹೋದ ಹೊಲ, ಮನೆ ಇವೆ. ಹೈಸ್ಕೂಲು ಮೇಷ್ಟರು. ತಿಂಗಳು ತಿಂಗಳು ಸಂಬಳ. ಪಂಕಜ ಇವರ ಶಿಷ್ಯೆ–ಆಗಿದ್ದಳು. ಸಾಕಾ? (ಕಿಟ್ಟಿ ಕಡೆಗೆ ತಿರುಗಲು)

ಕಿಟ್ಟಿ–ಮಿಸ್ಟರ್ ಗುಂಡೂರಾವ್–

ಗುಂಡ–ತ್ಸು ತ್ಸು ತ್ಸು ತ್ಸು ತ್ಸು, ಹಾಳು ಮಾಡುತ್ತೀರಲ್ಲಾ, ಸಾರ್, ಟೈಟಲ್ಲನ್ನ...ಅಪ್ಪಾ, ಅವರು ಅವರಿಗೆ ಈಡು ಜೋಡಿ ಚೆನ್ನಾಗಿ ಸೇರತ್ತೆ. ಅಕಸ್ಮಾತ್ ಸಂಘಟನೆಗಳು ಹೀಗೆ...ಹೀಗೆ...ಸಂಪ್ರಾಪ್ತವಾಗಿವೆ...ನಿಮಗೆಲ್ಲಾ ಸಂತೋಷವಿದ್ದರೆ, ಆಗಬಹುದು ಅಂತ ನಾನು ಸೂಚಿಸುತ್ತೇನೆ.

ಗಣೇಶ–ಪ್ರಚಂಡ, ಪ್ರಚಂಡ ಕಾಣಯ್ಯ ನೀನು !

ಗುಂಡ–ಇಬ್ಬರು ತಿಳಿದುಕೊಂಡಹಾಗಾಯಿತು.

ಗಣೇಶ–ಗೋವೂ, ನೋಡಿದೆಯೇನೋ, ಸ್ಪಿರಿಟ್ಟು ಹೇಗಿದೆ? ಗುಂಡೂ, ಬಾ ಹೀಗೆ. ನೀನು "ಪ್ರಚಂಡ" ಅಂತ ಇಬ್ಬರು ತಿಳಿದುಕೊಂಡ ಹಾಗಾಯಿತು



ಅಂದಿ. ಎರಡು ಮೂರು ನಾಲ್ಕು ಲಕ್ಷ ಜನ ತಿಳಿದುಕೊಳ್ಳುವ ಹಾಗೆ ಮಾಡುತ್ತೇನೆ. ನನ್ನ ಮಾತು ಕೇಳುತ್ತೀಯಾ?

ಗುಂಡ–ಏನು?

ಗಣೇಶ–ಏನಿಲ್ಲ. ನೀನು ನಿನ್ನೆಯಿಂದ ಇಲ್ಲಿಯವರೆಗೂ ಮಾಡಿದ ಸಾಹಸವನ್ನ ಯಾರಿಗೂ ಹೇಳಬೇಡ.

ಗುಂಡ–ಯಾಕೆ ? ಇದನ್ನ ಬರೆದು ನಿಮ್ಮದೇ ಕತೆ ಅಂತ ಹೇಳಿ ಸಿನಿಮಾಗೆ ಕೊಡುತ್ತೀರೇನು?

ಗಣೇಶ–(ನಗುತ್ತಾ) ಗೋವೂ, ಎಷ್ಟು ಚುರುಕು ಬುದ್ಧಿ ನೋಡೋ ಗುಂಡಾ, ಹೌದು....ಅದೇ ನನ್ನ ಯೋಚನೆ...ನಾಳೆಯಿಂದಲೇ ಕೆಲಸ ಪ್ರಾರಂಭ. ನೀನು ಪ್ರಚಂಡ ಅನ್ನುವುದು ಪ್ರಪಂಚಕ್ಕೇ ತೋರಿಸಿ...ನಿನಗೆ ಬಹುಮಾನವೂ ಇದೆ–

ಗುಂಡ–ಹೌದಾ? ಹಾಗಾದರೆ ನೋಡಿ, ದುಡ್ಡು ಗಿಡ್ಡು ಕೊಡುವುದಾದರೆ, ನನ್ನ ತಂಗಿ ಶಾಂತಿಗೆ ಕೊಟ್ಟುಬಿಡಿ ಅವಳಿಗೆ ನಾನು ಸಾಲ ಕೊಡಬೇಕು. ನಾನು ಕೇಳುವುದು ಬೇರೆ ಬಹುಮಾನ.

ಗಣೇಶ–ನಿನಗೇನು ಬೇಕು, ಕೇಳು. ಕೊಡುತ್ತೇನೆ.

ಗುಂಡ–ಅಂಥದ್ದೇನಿಲ್ಲ. ನನ್ನ ಪಾರ್ಟ್ನನ್ನು ನನ್ನ ಕೈಯಲ್ಲೇ ನೀವು ಮಾಡಿಸುವುದಾದರೆ, ನನ್ನ ಸ್ನೇಹಿತರಿಬ್ಬರಿದ್ದಾರೆ. ಅವರೂ ನನ್ನ ಹಾಗೇ ಮೆಟ್ರಿಕ್ಯುಲೇಷನ್ನಲ್ಲಿ ಢುಂಕಿ. ಅವರಿಗೂ ಛಾನ್ಸು ಕೊಡಬೇಕು. ಅಲ್ಲದೆ ಮುಖ್ಯವಾಗಿ ನಿಮ್ಮ ಸಿನಿಮಾ ಹೆಸರು, ''ಗುಂಡೂರಾಯನ ಸಾಹಸ'' ಅಥವಾ "ಗೋವಿಂದರಾಯರ ಬ್ಯಾ ಬ್ಯಾ ಬ್ಯಾ" ಅಂತ ಇಡದೆ, ಸಿಂಪಲ್ಲಾಗಿ, ಸ್ವೀಟಾಗಿ, "ಉಂಡಾಡಿ ಗುಂಡ" ಅಂತಲೇ ಇಟ್ಟರೆ ತೃಪ್ತೋಸ್ಮಿ. ಅಪ್ಪಾ, ನನ್ನ ಸ್ನೇಹಿತರು, ಹೆಡ್ ಕ್ವಾರ್ಟರ್ಸ್ ಹತ್ತಿರ ಕಾದಿರುತ್ತಾರೆ. (ಗಣೇಶನಿಗೆ) ಹೆದರ ಬೇಡಿ, ಅದೇನ್ ದೊಡ್ಡ ಪುರಭವನ ಅಲ್ಲ, ಇಟ್ ಈಸ್ ಎ ಸಿಂಪಲ್ ಫ್ರೂಟ್ ಟ್ರೀ...ಹುಣಸೇಮರ. ಅವರಿಗೂ ಹೇಳಿ, ಆಚಾರ್ರನ್ನೂ ಎಳೆದುಕೊಂಡು ಬರುತ್ತೇನೆ–ಡಬ್ಬಲ್ ಲಗ್ನ ಇಡಿಸಿ, ಡಬ್ಬಲ್ ಓಲಗ ಹೊಡೆಸಿ–ಈಗ ಬಂದೆ–ಅಮ್ಮಾ, ನನ್ನ ಸೆಕೆಂಡ್ ಡೋಸ್ ಕಾಫಿ ಫ್ಲಾಸ್ಕಿನಲ್ಲಿ ಹಾಕಿಟ್ಟಿರು....(ತಂದೆಯನ್ನು ನೋಡುತ್ತಾ) ಯಾವುದೋ ಮಾಯದಲ್ಲಿ ಬೆಕ್ಕಿನ ಹಾಗೆ ಬಂದು ಬಸಿದುಕೊಳ್ಳುತ್ತೇನೆ !

ಗೋವು–ಲೋ‍ೀೕ !

–ಅಂಕದ ತೆರೆ–

ಅನಂತ ರತ್ನ ಪ್ರಭವಸ್ಯ ಯಸ್ಯ
ಹಿಮಂ ನ ಸೌಭಾಗ್ಯ ವಿಲೋಪಿ ಜಾತಂ ।
ಏಕೋ ಹಿ ದೋಷೋ ಗುಣಸನ್ನಿ ಪಾತೇ
ನಿಮಜ್ಜತೀಂದೋಃ ಕಿರಣೇಷ್ವಿವಾಂಕಃ ॥